ನಮ್ಮ ಮಾನಸ

ಸಂಪುಟ : 5 ಜೂನ್ 2012 ಸಂಚಿಕೆ: 14 ಬೆಲೆ: 10/-



ನಮ್ಮ ಮಾನಸ

ಜೂನ್ 2012

ಸಂಪುಟ : 5 ಸಂಚಿಕೆ : 14

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 98804 67372 / 98869 18910

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಚಂದಾ ವಿವರ

ಬಿಡಿಪ್ರತಿ	**10–00 ರೂ.**
ವಾರ್ಷಿಕ ಚಂದಾ	**100–00 ರೂ.**
(ವಿಶೇಷ ಸಂಚಿಕೆಯೊಂದಿಗೆ)	
ಸಂಸ್ಥೆಗಳಿಗೆ	**150–00 ರೂ.**

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

ಪ್ರಾರಂಭ : 'ಮಾನವಿ' (1985ರಲ್ಲಿ), ಅನಂತರ 'ಮಾನಸ', ಈಗ 'ನಮ್ಮ ಮಾನಸ'

ಒಳಗಿನ ಪುಟಗಳಲ್ಲಿ....

ಸಹೃದಯ ಓದುಗರಲ್ಲಿ...

ನೀವು ನಮ್ಮ ಚಿಂತನೆ–ಗುರಿಯನ್ನು ಬಲಪಡಿಸುವಿರೆಂದು ನಮಗೆ ನಂಬಿಕೆ ಇದೆ. ನೀವು ಓದುತ್ತಿರುವ ಮಾನಸವನ್ನು ಹೊರತರಲು ನಿಮ್ಮ ಆರ್ಥಿಕ ನೆರವು, ಪ್ರೋತ್ಸಾಹ ಮುಖ್ಯ. ಮಾನಸವನ್ನು ಮತ್ತೊಮ್ಮೆ ನಿರಂತರವಾಗಿ ಜೀವಂತವಾಗಿಡಲು ಸಹೃದಯ ಓದುಗರ ಬೆಂಬಲದ ಅಗತ್ಯವಿದೆ. ನೀವು ಯಾವುದಾದರೊಂದು ಬಗೆಯಲ್ಲಿ ನಮ್ಮೊಂದಿಗೆ ಕೈಜೋಡಿಸಬಹುದು.

- ಪ್ರತಿ ತಿಂಗಳಿಗೊಮ್ಮೆ ಲೇಖನಗಳನ್ನು ಬರೆಯಿರಿ ಇಲ್ಲವೇ ಬೇರೆಯವರಿಂದ ಬರೆಯಿಸಿ ಕಳುಹಿಸಿ.
- ವಾರ್ಷಿಕ ಚಂದಾದಾರರಾಗಿ ಮತ್ತು ಇನ್ನಷ್ಟು ಚಂದಾದಾರರನ್ನು ಪರಿಚಯಿಸಿ.
- ಮಾನಸದ ಒಂದು ತಿಂಗಳ ಮುದ್ರಣದ ಖರ್ಚು ರೂ. 7,000/– ರಲ್ಲಿ ಪೂರ್ತಿ ಇಲ್ಲವೇ ನಿಮಗೆ ಸಾಧ್ಯವಾದಷ್ಟು ಹಣವನ್ನು ಕೊಟ್ಟು ಬೆಂಬಲಿಸಿ ಕೈ ಜೋಡಿಸುವಿರೆಂಬ ಆಶಯದೊಂದಿಗೆ,

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ

E-mail: nammamanasa@gmail.com
Contact: Disha K.R.: 9880467372, Lekha: 9686757053,
Samudyatha : 97388 22836

ಸಂಪಾದಕೀಯ

ಲಿಂಗಾಧಾರಿತ ಗರ್ಭಪಾತಕ್ಕೆ ಕೊನೆ ಎಂದು?

ಸ್ವಾತಂತ್ರ್ಯ ಬಂದು 65 ವರ್ಷ ಕಳೆದಿದ್ದರೂ ಭಾರತದ ಅಭಿವೃದ್ಧಿಯನ್ನು ವಿಜೃಂಬಿಸುತ್ತಿರುವ ಸಂದರ್ಭದಲ್ಲಿ ಹೆಣ್ಣು ಭ್ರೂಣಹತ್ಯೆಯ ಬಗ್ಗೆ ಚರ್ಚಿಸುವ ತುರ್ತು ಸ್ಥಿತಿ ಎದುರಾಗಿರುವುದು ರಾಷ್ಟ್ರೀಯ ಅವಮಾನ. ಲಿಂಗಾಧಾರಿತ ಗರ್ಭಪಾತದಿಂದ ಲಿಂಗಾನುಪಾತದಲ್ಲಾಗುತ್ತಿರುವ ಅಸಮತೋಲನ ಕಣ್ಣಿಗೆ ರಾಚುತ್ತಿವೆ. 1981ರಲ್ಲಿ 1000 ಗಂಡುಮಕ್ಕಳಿಗೆ 962 ಹೆಣ್ಣುಮಕ್ಕಳಿದ್ದರೆ, 1991ರಲ್ಲಿ 945ಕ್ಕೆ ಹೆಣ್ಣುಮಕ್ಕಳ ಸಂಖ್ಯೆ ಇಳಿಯಿತು.ನಂತರ 2001ರ ಅಂಕಿ ಅಂಶಗಳ ಪ್ರಕಾರ 1000 ಗಂಡುಮಕ್ಕಳಿಗೆ 927 ಹೆಣ್ಣುಮಕ್ಕಳಿದ್ದರೆ ಕಳೆದ ವರ್ಷದ ಅಂಕಿ ಅಂಶದ ಪ್ರಕಾರ ಹೆಣ್ಣುಮಕ್ಕಳ ಸಂಖ್ಯೆ 914ಕ್ಕೆ ಇಳಿಮುಖಗೊಂಡಿದೆ.

ಹೆಣ್ಣು ಹುಟ್ಟುವ ಮೊದಲೇ ಆಕೆಯನ್ನು ಮೌನವಾಗಿ ಇಲ್ಲವಾಗಿಸುವ ಅಮಾನವೀಯ ಶೋಷಣೆಯ ವಿರುದ್ಧ 1970ರ ದಶಕದಲ್ಲಿ ಮಹಿಳಾ ಸಂಘಟನೆಗಳು ತಮ್ಮ ಧ್ವನಿಯನ್ನು ಎತ್ತಿದ್ದವು. ಆಮ್ನಿಯೋಸಿಂಥೆಸಿಸ್ ಹಾಗೂ ಲಿಂಗ ಪರೀಕ್ಷೆ ತಂತ್ರಜ್ಞಾನವನ್ನು ಲಿಂಗ ಪತ್ತೆಗಾಗಿ ದುರ್ಬಳಕೆ ಮಾಡುವುದರ ವಿರುದ್ಧ ಹೋರಾಡಿದರು. ಈ ಹೋರಾಟದ ಪ್ರತಿಫಲವಾಗಿ 1994ರಲ್ಲಿ **ಪಿಎನ್‌ಡಿಟಿ** ಕಾನೂನು ಜಾರಿಗೊಂಡಿದ್ದು, 2003ರಲ್ಲಿ **ಲಿಂಗ ಪತ್ತೆ ನಿಷೇದ ಕಾಯಿದೆ ಕಾನೂನು** ಎಂದು ತಿದ್ದುಪಡಿಯಾಗಿ ಇಂದು ನಮ್ಮ ಮುಂದಿದೆ. ಈ ಕಾನೂನಿನ ಪ್ರಕಾರ ಲಿಂಗ ಪತ್ತೆಯನ್ನು ಅಪರಾಧವೆಂದು ಪರಿಗಣಿಸಲಾಗಿದೆ.

ಪಿತೃ ಪ್ರಧಾನ ಸಮಾಜದಲ್ಲಿ ಗಂಡುಮಕ್ಕಳ ಮೇಲಿರುವ ವ್ಯಾಮೋಹ ದಕ್ಷಿಣ ಏಷ್ಯದಲ್ಲಿ ಮಾತ್ರವಲ್ಲದೇ ವಿಶ್ವದಲ್ಲಿಯೂ ಕಂಡುಬರುತ್ತಿದೆ. ಈ ಪುರುಷ ಪ್ರಧಾನ ಧೋರಣೆ ಆಧುನಿಕ ವೈದ್ಯಕೀಯ, ಆರೋಗ್ಯ ವ್ಯವಸ್ಥೆಗಳ ಜೊತೆ ಮೂಡನಂಬಿಕೆ, ಸಂಪ್ರದಾಯ, ಪದ್ಧತಿಗಳು ಕೈಜೋಡಿಸಿ ಹೆಣ್ಣು ಸಮುದಾಯವನ್ನೇ ಬಲಿಯಾಗಿಸುತ್ತಿದೆ.

ಹೆಣ್ಣು ಭ್ರೂಣ ಹತ್ಯೆಯ ಸಮಸ್ಯೆಯನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ. ಅದು ಮಹಿಳೆ ಸಮಾಜದಲ್ಲಿ ಹೊಂದಿರುವ ಆರ್ಥಿಕ ಹಾಗೂ ಸಾಮಾಜಿಕ ಸ್ಥಾನ ಮಾನವನ್ನು ಅವಲಂಬಿಸಿದೆ. ಅನಕ್ಷರತೆ, ಆರ್ಥಿಕ ಸಂಪನ್ಮೂಲಗಳ ಮೇಲೆ ಹಿಡಿತವಿಲ್ಲದಿರುವುದು, ಆಸ್ತಿಯ ಮೇಲೆ ಹಕ್ಕಿಲ್ಲದಿರುವುದು ಹೆಣ್ಣು ಭೂಣ ಹತ್ಯೆ ಹೆಚ್ಚುತ್ತಿರುವುದಕ್ಕೆ ಪ್ರಮುಖ ಕಾರಣಗಳಾಗಿವೆ. ಪಂಜಾಬ್, ಹರಿಯಾನ, ಚಂಡಿಗಡ್, ದೆಹಲಿ, ಉತ್ತರ ಪ್ರದೇಶ, ತಮಿಳುನಾಡಂತಹ ರಾಜ್ಯಗಳಲ್ಲಿ ಈ ಸಮಸ್ಯೆಯು ತೀವ್ರವಾಗಿ ಕಂಡುಬರುತ್ತಿದೆ. ಈ ಸಮಸ್ಯೆ ಗ್ರಾಮಿಣ ಪ್ರದೇಶದಲ್ಲಿ ಮಾತ್ರವಲ್ಲದೆ ನಗರ ಪ್ರದೇಶದಲ್ಲಿಯೂ ಕಂಡುಬರುತ್ತಿದೆ.

ಬಂಡವಾಳಶಾಹಿ ಹಾಗೂ ಭೋಗಸಂಸ್ಕೃತಿ (ಕೊಳ್ಳುಬಾಕ ಸಂಸ್ಕೃತಿ)ಯೂ ಹೆಣ್ಣು ಭ್ರೂಣ ಹತ್ಯೆ ಹೆಚ್ಚುವುದಕ್ಕೆ ಇನ್ನೊಂದು ಕಾರಣವಾಗಿದೆ. ಪಿತೃ ಪ್ರಧಾನ ಸಮಾಜವು ಮಹಿಳೆಯನ್ನು ಅನುತ್ಪಾದಕಳೆಂದೇ ಪರಿಗಣಿಸಲಾಗುತ್ತಿರುವುದರಿಂದ ಆಕೆಯ ಅಸ್ತಿತ್ವವನ್ನು ಆರ್ಥಿಕ ಹೊರೆ ಎಂದು ಭಾವಿಸಲಾಗಿದೆ. ವಿವಾಹದ ವೆಚ್ಚ, ವರದಕ್ಷಿಣೆ, ಇತರ ಬೇಡಿಕೆಗಳು ಹೆಣ್ಣು ಭೂಣ ಹತ್ಯೆಯನ್ನು ಪ್ರಭಾವಿಸುತ್ತದೆ. ಗ್ರಾಮೀಣ ಪ್ರದೇಶದ ಸಂತೆಗಳಲ್ಲಿ ಅನಕ್ಷರಸ್ತರನ್ನು ಸೆಳೆಯುವುದಕ್ಕಾಗಿ '2 ಸಾವಿರ ವೆಚ್ಚ ಮಾಡಿ ನಂತರ 2 ಲಕ್ಷ ಉಳಿಸಿ' ಎಂಬ ಅಗ್ಗದ ಜಾಹಿರಾತುಗಳೊಂದಿಗೆ ಹೆಣ್ಣು ಭ್ರೂಣ ಹತ್ಯೆಗೆ ಪ್ರಚಾರವನ್ನು ಮಾಡಲಾಗುತ್ತಿದೆ. ಇದರ ಮೂಲಕ ಹಣಮಾಡುವ ಒಂದು ವ್ಯವಸ್ಥಿತ ಜಾಲವೇ ಇದರ ಹಿಂದಿರುವುದು ಕಂಡುಬರುತ್ತಿದೆ. ತಮಿಳುನಾಡಿನಲ್ಲಿ ಹುಟ್ಟಿದ ಹೆಣ್ಣು ಶಿಶುವಿಗೆ ಭತ್ತವನ್ನು ನುಂಗಿಸಿ ಸಾಯಿಸುವಂತಹ ಅಮಾನುಷ ಪದ್ಧತಿ ನಮ್ಮ ಕಣ್ಣೆದುರಿಗಿದೆ. ಲಿಂಗ ಪತ್ತೆ ಕಾನೂನು ಬಾಹಿರವೆಂದು ಪರಿಗಣಿಸಲ್ಪಟ್ಟಿದ್ದರೂ ನಗರ ಪ್ರದೇಶಗಳ ಖಾಸಗಿ ಆಸ್ಪತ್ರೆಗಳು ತೆರೆಮರೆಯಲ್ಲಿ ವಿವಿಧ ಮಾದರಿಗಳ ಮೂಲಕ ಮಗುವಿನ ಲಿಂಗ ಪತ್ತೆ ಮಾಡಿ ಹಣಗಳಿಸುವುದು ಒಂದು ದಂದೆಯೇ ಆಗಿಬಿಟ್ಟಿದೆ. ಇಂತಹ ಸಂದರ್ಭದಲ್ಲಿ ಹೆಣ್ಣುಮಕ್ಕಳಿಗಿರುವ ಆಯ್ಕೆಗಳೇನು? ಆಯ್ಕೆ ಮಾಡುವ ಅವಕಾಶವಾದರೂ ಇದೆಯೆ? ಅವರ ಮೇಲಿರುವ ಒತ್ತಡಗಳೇನು? ಆಕೆಗೆ ನಿರ್ಧರಿಸುವ ಹಕ್ಕಿದೆಯೆ?

ಮಹಿಳಾ ಹೋರಾಟದ ಫಲವಾಗಿ ಹೆಣ್ಣು ಭ್ರೂಣ ಹತ್ಯೆಯನ್ನು ತಡೆಯಲು ಕೇಂದ್ರ ಹಾಗೂ ರಾಜ್ಯ ಸರಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. 2009ರಲ್ಲಿ ಜನವರಿ 24ನ್ನು ರಾಷ್ಟ್ರೀಯ ಹೆಣ್ಣು ಮಗುವಿನ ದಿನ ಎಂದು ಘೋಷಿಸಲಾಯಿತು. ಧನಲಕ್ಷ್ಮೀ, ಲಾಡ್‌ಲಿ, ಕನ್ಯದಾನ್, ಬೇಟಿ ಹೆ ಅನ್‌ಮೋಲ್ ಮುಂತಾದ ಯೋಜನೆಗಳು ಹೆಣ್ಣು ಮಗು 18 ವರ್ಷವಾದನಂತರ ಪಡೆಯುವ ಹಣ ವರ್ಗಾವಣೆ ಯೋಜನೆಗಳು.

ಇಂತಹ ಯೋಜನೆಗಳ ಹಿಂದಿರುವ ಪಿತೃ ಪ್ರಧಾನ ಧೋರಣಗಳನ್ನು ಹಾಗೂ ಯೋಜನೆಗಳನ್ನು ಕಾರ್ಯಗತ ಗೊಳ್ಳುವ ವಿಧಾನಗಳನ್ನು ಮಹಿಳಾ ಸಂಘಟನೆಗಳು ಪ್ರಶ್ನಿಸುತ್ತಲೇ ಬಂದಿದೆ. ಈ ಯೋಜನೆಗಳ ಹಿಂದಿರುವ ಭಾಷೆ ಹಾಗೂ ಧೋರಣೆಗಳಲ್ಲಿ ಪುರುಷ ಪ್ರಧಾನತೆಯ ರಕ್ಷಣಾ ಮನೋಭಾವ ಕಂಡುಬರುತ್ತದೆ. ಹಣ ವರ್ಗಾವಣೆ ಯಂತಹ ಯೋಜನೆಗಳು ಬಡ ಕುಟುಂಬಗಳಿಗೆ ಅನ್ವಯ ವಾಗುತ್ತದೆ ಆದರೆ ಮಧ್ಯಮ ಹಾಗೂ ಮೇಲ್ವರ್ಗದ ಕುಟುಂಬಗಳಲ್ಲಿ ನಡೆಯುತ್ತಿರುವ ಹೆಣ್ಣು ಭ್ರೂಣ ಹತ್ಯೆಯನ್ನು ತಡೆಯಲು ಸರ್ಕಾರದ ಕ್ರಮಗಳೇನು? ಪ್ರತಿಯೊಂದು ಪಕ್ಷಗಳು ಅಧಿಕಾರಕ್ಕೆ ಬಂದಾಗ ತಮ್ಮ ಧೋರಣೆಗಳಿಗೆ ಅನುಗುಣವಾಗಿ ಹಾಗೂ ಪ್ರಚಾರಕ್ಕಾಗಿ, ಜನಪ್ರಿಯತೆಗಾಗಿ, ಮತ ಬ್ಯಾಂಕಿಗಾಗಿ ಇಂತಹ ಹಲವಾರು ಯೋಜನೆಗಳನ್ನು ಜಾರಿಗೆ ತರುತ್ತಿವೆ.

ಮಾಧ್ಯಮಗಳಲ್ಲಿಯೂ ಹೆಣ್ಣು ಶಿಶು ಹತ್ಯೆಯ ಬಗ್ಗೆ ಜನಪ್ರಿಯವಾದ ನಿಲುವುಗಳನ್ನೇ ಕಾಣಬಹುದು. ಗರ್ಭಪಾತವನ್ನು ಪಾಪದ ಕೃತ್ಯವೆಂಬಂತೆ ಬಿಂಬಿಸಲಾಗುತ್ತಿದೆ. ಮಹಿಳಾ ಚಳುವಳಿಯು ಮಹಿಳೆಯ ದೇಹದ ಮೇಲಿನ ಹಕ್ಕಿಗೋಸ್ಕರ ಸತತವಾಗಿ ಹಲವಾರು ದಶಕಗಳಿಂದ ಹೋರಾಟ ನಡೆಯುತ್ತಲೇ ಬಂದಿದೆ. ಹೆಣ್ಣು ಭ್ರೂಣ ಹತ್ಯೆಯ ಕುರಿತು ಮಾತನಾಡುವಾಗ ಲಿಂಗಾಧಾರಿತ ಅಸಮಾನತೆಯ ನೆಲೆಯಲ್ಲಿ ಮಾತನಾಡಬೇಕಾಗುತ್ತದೆಯೇ ಹೊರತು ಅಮೀರ್ ಖಾನ್ *ಬಳಸುವ ಹೆಣ್ಣನ್ನು ದೇವಿ, ಮಾತೆಯಾಗಿಸಿ, ಭ್ರೂಣವನ್ನು ಮಗು, ಪಾಪ ಕೃತ್ಯ ಎಂದು ಪರಿಭಾವಿಸಿ ಅಲ್ಲ.* ಹೆಣ್ಣು ಮಗು ಬೇಡವೆಂದು ನಿರ್ಧರಿಸಿ ಗರ್ಭಪಾತ ಮಾಡಿಸುವುದಕ್ಕೂ, ಮಗುವೇ ಬೇಡವೆಂದು ಗರ್ಭಪಾತ ಮಾಡಿಸುವುದಕ್ಕೂ ಅಜಗಜಾಂತರವಾದ ವ್ಯತ್ಯಾಸವಿದೆ. 'ಹತ್ಯೆ' ಎಂಬ ಭಾಷೆಯ ಬಳಕೆ ಮಹಿಳೆಗೆ ಒಲ್ಲದ ಬಸಿರಿನ ಗರ್ಭಪಾತದ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನವಾಗಬಾರದು. ಆಕೆಯಲ್ಲಿ ಪಾಪ ಪ್ರಜ್ಞೆ ಮೂಡಿಸಬಾರದು. ಇಂತಹ ಲಿಂಗಾಧಾರಿತ ಅಸಮಾನತೆಯ ಹಾಗೂ ಹಕ್ಕಿನ ಬಗ್ಗೆ ಸೂಕ್ಷ್ಮಗ್ರಾಹಿಗಳಾಗಿ ಮಾಧ್ಯಮಗಳು ಹೆಣ್ಣು ಭ್ರೂಣ ಹತ್ಯೆ ಅಥವ ಲಿಂಗಾಧಾರಿತ ಗರ್ಭಪಾತದ ಬಗ್ಗೆ ಮಾತನಾಡ ಬೇಕಾಗುತ್ತದೆ.

ಕಾನೂನುಗಳು ಎಷ್ಟೇ ಚಾಲ್ತಿಯಲ್ಲಿದ್ದರೂ ಅವುಗಳಲ್ಲಿನ ಮಿತಿ ಹಾಗೂ ಲೋಪದೋಷಗಳನ್ನೇ ಬಳಸುವ ಪ್ರವೃತ್ತಿ ನಮ್ಮ ಸಮಾಜದಲ್ಲಿರುವುದರಿಂದ ಕಾನೂನು ಮೂಲಕ ಮಾತ್ರ ಹೆಣ್ಣು ಶಿಶು ಹತ್ಯೆಯನ್ನು ನಿಲ್ಲಿಸಲಾಗುತ್ತದೆ ಎಂದು ಹೇಳಲಾಗುವುದಿಲ್ಲ. ಕಾನೂನನ್ನು ಕಠಿಣವಾಗಿ ಜಾರಿಗೊಳಿಸ ಬೇಕೆಂಬ ಬೇಡಿಕೆ ಇಡುತ್ತಲೇ ಜನರಲ್ಲಿ ಪ್ರಜ್ಞೆ ಮೂಡಿಸುವ ನಿಟ್ಟಿನಲ್ಲೂ ಹೋರಾಟಗಳು ನಡೆಯಬೇಕಿವೆ. ಪಿತೃ ಪ್ರಧಾನ ಮೌಲ್ಯಗಳು ಗಂಡಿಗೆ ನೀಡುವ ಸ್ವಾತಂತ್ರ್ಯವನ್ನು ಇನ್ನೂ ಬಲವಾಗಿ ಪ್ರಶ್ನಿಸಬೇಕಾಗಿವೆ. ಮಾನವೀಯ ಮೌಲ್ಯಗಳ ನೆಲೆಯಲ್ಲಿ ಸಮಾಜದ ಮೌಲ್ಯಗಳು ರೂಪಿತಗೊಂಡಾಗ ಮಾತ್ರ ಹೆಣ್ಣು ಶಿಶುವನ್ನು ಹತ್ಯೆಗೈಯುವಂತಹ ಅಮಾನವೀಯ ಕೃತ್ಯಕ್ಕೆ ಕೊನೆಗಾಣಿಸಬಹುದಾಗಿದೆ. ❑

ನಿರುತ್ತರಿ


ಬದುಕೇ ನಿಂತು ಬಿಡಬಹುದೆಂದುಕೊಂಡ
ಆ ಗಳಿಗೆ
ಹಾಗಾಗಲಿಲ್ಲ ಸಧ್ಯ!
ಚಲಿಸುತ್ತಲೇ ಹೋಯಿತು
ನಿರಾತಂಕ.


ಏನೋ ಅಂದುಕೊಳ್ಳುವುದು
ಇನ್ನೇನೋ ಆಗಿಹೋಗುವುದು
ಎಲ್ಲವೂ ಅವರವರ ಪಾಲಿನ
ಕ್ಷಣದ ಸತ್ಯಗಳು.

ನೇಪಥ್ಯಕ್ಕೆ ಸರಿದ ನಿನ್ನೆಗಳು
ನೆಪಮಾತ್ರದ ನಾಳೆಗಳು
ಕೂಡಿ ಕಳೆಯುವ ಲೆಕ್ಕಭರ್ತಿಗಷ್ಟೆ
ತುಂಬಿಕೊಳ್ಳಲಾಗದು ಎದೆಯೊಳಗೆ.

ಹಿತವೆನ್ನಿಸುವ ಕೆಲ ಕ್ಷಣಗಳನ್ನಾದರೂ
ಉಳಿಸಿಬಿಡು
ಮನಸ್ಸು ಬೇಡುತ್ತಿದೆ
ಹಿಡಿದಿಟ್ಟುಕೊಳ್ಳುವ ಪರಿ ತಿಳಿಯದೆ
ಬೊಗಸೆ ಖಾಲಿಯಾಗಿ ಕೈಚೆಲ್ಲಿದೆ
ನಿರುತ್ತರಿಯಾಗಿದೆ.

■ ಸ್ಮಿತಾ ಅಮೃತರಾಜ್.ಸಂಪಾಜೆ
ಕೊಡಗು





ಇನ್ನೊಬ್ಬಳು ಶಕುಂತಲೆ

■ ಗಿರಿಜಾಶಾಸ್ತ್ರಿ, ಮುಂಬಯಿ

ಜಿ.ಎಸ್.ಎಸ್. ಅವರು ಒಮ್ಮೆ ಮುಂಬಯಿಗೆ ಬಂದಾಗ, ಆಧುನಿಕ ಕನ್ನಡ ಮಹಿಳಾ ಸಾಹಿತ್ಯದಲ್ಲಿ ಎರಡು ರೀತಿಯ ಧಾರೆಗಳು ಹರಿಯುತ್ತವೆ. ಒಂದು ಸಂಚಿ ಹೊನ್ನಮ್ಮನದಾದರೆ ಇನ್ನೊಂದು ಅಕ್ಕಮಹಾದೇವಿಯದು. ಅದರಲ್ಲೂ ಪ್ರಮುಖವಾಗಿ ಕಾಣುವ ಧಾರೆಯೆಂದರೆ ಅಕ್ಕಮಹಾದೇವಿಯದೇ ಎಂದಿದ್ದರು.

ಆಧುನಿಕ ಕನ್ನಡ ಲೇಖಕಿಯರು ಪ್ರಾಚೀನ ಕೃತಿಗಳನ್ನು ಮರು ಓದಿಗೆ ಒಳಪಡಿಸುವಾಗ ಅನುಸರಿಸುವ ಮಾದರಿಯೆಂದರೆ ಅದು ಅಕ್ಕಮಹಾದೇವಿಯದು. ಅವಳು ಭಾರತೀಯ ಪರಂಪರೆಯಲ್ಲೇ ಮೊತ್ತಮೊದಲ ಬಾರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿದ ಮಹಿಳೆ. ತನ್ನ ಅಸ್ಮಿತೆಗಾಗಿ ಹೋರಾಡಿದವಳು. ತನಗೇನು ಬೇಕು ಎಂಬುದರ ಸ್ಪಷ್ಟ ತಿಳುವಳಿಕೆಯನ್ನು ಉಳ್ಳವಳಾಗಿದ್ದಳು. ಅಸ್ಮಿತೆಯ ಛಾಪನ್ನು ಚರಿತ್ರೆಯಲ್ಲಿ ದಾಖಲಿಸುವುದು ಹಾಗು ಆತ್ಯಂತಿಕ ಸ್ವಾತಂತ್ರ್ಯವನ್ನು ತಮ್ಮ ಬರಹಗಳ ಶಕ್ತಿಯ ಕೇಂದ್ರವನ್ನಾಗಿಸುವುದು ಇಂದಿನ ಮಹಿಳಾ ಸಾಹಿತ್ಯದ ಮೂಲಧಾತು. ಹೀಗಾಗಿ ಪ್ರಾಚೀನ ಪಾತ್ರಗಳನ್ನು ಅವಳು ಸೀತೆಯಾಗಬಹುದು ಇಲ್ಲವೇ ಊರ್ಮಿಳೆ, ದ್ರೌಪತಿಯರಾಗಬಹುದು ಅವುಗಳನ್ನು ಮರು ಓದಿಗೆ ಒಳಪಡಿಸುವಾಗ ಲೇಖಕಿಯರಿಗೆ ಇರುವ ಮಾದರಿಯೆಂದರೆ ಅಕ್ಕನದೇ.

ಇತ್ತೀಚೆಗೆ ಪ್ರಕಟವಾದ ಜಯಶ್ರೀ ಹೆಗಡೆಯವರ 'ಅಭಿನವ ಶಾಕುಂತಲ' ಎನ್ನುವ ನಾಟಕ ಇದೇ ಪರಂಪರೆಗೆ ಸೇರುತ್ತದೆ. ಇದು ಶಕುಂತಲೆಯ ಹೊಸ ಕತೆಯಾದರೂ ಅದರ ಕೊನೆಗೆ ಕಾಣುವುದು ನಾವು ಅಕ್ಕನನ್ನೇ. "ನನ್ನ ಅನುಭವದ ಬೆಳಕಿನಲ್ಲಿ ಮಾತ್ರವೇ ನನ್ನ ದಾರಿ ಸಾಗಬೇಕು" (ಪು.64) ಎಂದು ಶಕುಂತಲೆ ಕಣ್ವರಿಗೆ ಹೇಳುವ ಮಾತುಗಳಲ್ಲಿ ಇದು ಸ್ಪಷ್ಟವಾಗುತ್ತದೆ

ನಾಟಕದ ಕೊನೆಗೆ ಅರಮನೆಯ ಎಲ್ಲ ಸವಲತ್ತುಗಳನ್ನು ಧಿಕ್ಕರಿಸಿ, ಶಕುಂತಲೆ ಯಾರ ಅನುನಯದ ಮಾತುಗಳಿಗೂ ತನ್ನ ನಿರ್ಧಾರವನ್ನು ಬದಲಿಸದೇ, ಯಾವ ಆಮಿಶಗಳಿಗೂ ಬಗ್ಗದೆ ಅರಮನೆಬಿಟ್ಟು ಹೊರನಡೆಯುತ್ತಾಳೆ. ಅಕ್ಕನಿಗೂ ಮತ್ತು ಇವಳಿಗೂ ಇರುವ ಉದ್ದೇಶವೊಂದೇ, ಅದೆಂದರೆ ಆತ್ಮಶೋಧನೆ. ಆದರೆ ಇವಳು ಅಕ್ಕನ ಹಾಗೆ ಅನನುಭವಿಯಲ್ಲ. ಇವಳ ಹಿನ್ನೆಲೆಗೆ ತನ್ನ ಪ್ರೇಮಿಯಿಂದ ತಿರಸ್ಕರಿಸಲ್ಪಟ್ಟು ಹನ್ನೆರಡು ವರ್ಷಗಳಕಾಲ ನಿರಂತರವಾಗಿ ಬಾಳಿದ ಅನಾಥ ಬದುಕಿದೆ. ಒಂಟಿತನದ ಖಿನ್ನತೆಯಿದೆ. ಯಾರೂ ಕೇಳುವವರಿಲ್ಲದ ಕಾಡಿನಲ್ಲಿ ಇವಳಿಗೆ ಬದುಕಲು ಒತ್ತಾಸೆ ನೀಡಿದ್ದು ಮಗನಾದ ಸರ್ವದಮನನ ಭವಿಷ್ಯದ ಆಸರೆಯೊಂದೇ. ಹಾಗಾಗಿ ಇವಳದು ಅಕ್ಷರಶಃ ಅರಣ್ಯರೋದನ. ಈ ರೋದನದಲ್ಲಿಯೇ ಇವಳ ಯೌವ್ವನದ ಕಸುವು ಕನಸುಗಳೆಲ್ಲಾ ಸೋರಿ ಹೋಗಿವೆ. ಇಂತಹ ಒಂದು ಬರಿದಾದ ಸ್ಥಿತಿಯಲ್ಲಿ ಶಕುಂತಲೆ ಅರಮನೆಯನ್ನು ಪ್ರವೇಶಿಸುತ್ತಾಳೆ. ದುಶ್ಯಂತನಿಗೆ ತನ್ನ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಡ ಸಮಾಧಾನವಿದೆ. ಆದರೆ ಅವನ ಪಶ್ಚಾತ್ತಾಪಕ್ಕೆ ಅವಳನ್ನು ಮರಳಿ ಪಡೆಯುವ ಶಕ್ತಿಯಿಲ್ಲವಾಗಿದೆ. ರಾಜ್ಯಕ್ಕೆ ವಾರಸುದಾರನನ್ನು ಕೊಟ್ಟಳೆಂಬ ಹೆಮ್ಮೆ ಪ್ರೀತಿಯಿಂದ ಎಲ್ಲ ರೀತಿಯ ವೈಭೋಗವನ್ನು ಅವಳ ಮುಂದೆ ಸುರಿಯುತ್ತಾನೆ. ಆದರೆ ಶಕುಂತಲೆಗಾದರೋ ಅವಿಶ್ವಾಸದಿಂದ ಭ್ರಷ್ಟಗೊಂಡ ಬದುಕನ್ನು ಮತ್ತೆ ಬೆಸೆಯುವುದರಲ್ಲಿ ಅರ್ಥಕಾಣದು. ಎಲ್ಲ ವೈಭೋಗಗಳು ಅವಳಿಗೆ ಬಂಧನವಾಗಿಯೇ ಕಾಣಿಸುತ್ತವೆ. ಅವಳಿಗೆ ಬೇಕಾಗಿರುವುದು ಭೌತಿಕ ಸವಲತ್ತುಗಳಲ್ಲ. ಅವಳ ಪ್ರಶ್ನೆಯೆಂದರೆ ಅದು ಆತ್ಮ ಸಮ್ಮಾನಕ್ಕೆ ಸಂಬಂಧಿಸಿದುದು. ಅಸ್ಮಿತೆಗೆ ಸಂಬಂಧಿಸಿದುದು. ಬಾಳ ಬಂಡಿಗೆ ರಿವರ್ಸ್ ಗೇರುಗಳಿಲ್ಲ. ಹೀಗಾಗಿ ಶಕುಂತಲೆಯ 'ಭೂತಕ್ಕೆ' ಉಚ್ಚಾಟನೆ ಎನ್ನುವುದಿಲ್ಲ. ಯಾಕೆಂದರೆ ಸಾಮಾಜಿಕ ಎಲ್ಲೆಗಳ ಒಳಗೇ ಗಿರಕಿ ಹೊಡೆಯುತ್ತಿದ್ದ ಅವಳಿಗೆ ಅನುಭವ ಪಾಠ ಕಲಿಸಿದೆ. ಮಾಗಿದ ಅವಳ ಬದುಕಿನ ಮುಂದೆ ಈಗ 'ಅಸಂಖ್ಯ ಎಲ್ಲೆಗಳಿವೆ'. 'ಅವನ್ನು ಕ್ರಮಿಸಿಯೇ ಮನುಷ್ಯ ನಿಜದ ನೆಲೆಯನ್ನು ತಲಪಬೇಕಾಗುತ್ತದೆ' ಎನ್ನುವ ಅರಿವಿನ ಸ್ಫೋಟ ಉಂಟಾಗಿದೆ.

ಈ ನಾಟಕದ ಹೆಸರೇ ಹೇಳುವಂತೆ ಇದು 'ಅಭಿನವ ಶಾಕುಂತಲ'. ಈವರೆಗಿನ ಶಕುಂತಲೆಯ ಬಗೆಗಿನ ನಮ್ಮ ಗ್ರಹಿಕೆಗಿಂತ ಭಿನ್ನವಾದ ಶಾಕುಂತಲ. ಈ ನಾಟಕ ಪ್ರಾರಂಭವಾಗುವುದೇ ಶಕುಂತಲೆಯ ಕಥೆಗೆ ಭರತವಾಕ್ಯದ ತೆರೆ ಬಿದ್ದಮೇಲೆ. ಅಂದರೆ ಶಕುಂತಲೆಯ ಕಥೆ ಮುಗಿದ ಆನಂತರ. ಹಾಗೆ ನೋಡಿದರೆ ಎಲ್ಲಾ ಕತೆಗಳೂ ನಿಜವಾಗಿ ಪ್ರಾರಂಭವಾಗುವುದು ಅವು ಮುಗಿದನಂತರವೇ. ಒಬ್ಬ ಶಕುಂತಲೆಯ ಅಂತ್ಯದೊಂದಿಗೆ ಮಗದೊಬ್ಬಳು ಹುಟ್ಟಿಕೊಳ್ಳುತ್ತಾಳೆ. ಹೀಗೆ ವ್ಯವಸ್ಥೆಯ ಕುಟಿಲತೆಗೆ ಬಲಿಯಾಗುವ ಶಕುಂತಲೆಯರ ಪರಂಪರೆ ಅವ್ಯಾಹತವಾಗಿ ಮುಂದುವರೆಯುತ್ತಲೇ ಇರುತ್ತದೆ. ಬದುಕಿನ ಎಲ್ಲಾ ಸಂಘರ್ಷಗಳನಂತರ ಕಥೆಯ ಕಡೆಗೆ 'ಎಲ್ಲಾ ಸುಖವಾಗಿದ್ದರು' (They lived happily ever after) ಎನ್ನುವ ನಮ್ಮ ಕಥೆಗಳ ಒಂದು ಸೂತ್ರರೂಪಿ ಸ್ವರೂಪದ ಹಿಂದೆ, ಈ ಜೀವನ ಆನಂದಮಯವಾದದ್ದು, ಮಂಗಳಕರವಾದದ್ದು ಎಂಬ ಭಾರತೀಯ ದರ್ಶನಕ್ಕಿಂತ ಮಿಗಿಲಾಗಿ, ಪಿತೃಪ್ರಧಾನ ವ್ಯವಸ್ಥೆಯ, ಪ್ರಭುತ್ವದ ಅಧಿಕಾರದ ಆಳುವ ಮನೋಧರ್ಮವೇ ಅಡಗಿದೆ. ತನ್ನ ಸಾಮಾಜಿಕ ಸಂರಚನೆಯೊಳಗೆ ಎಲ್ಲರೂ ಸುಖವಾಗಿಯೇ ಇರುತ್ತಾರೆ ಎನ್ನುವ ಗ್ರಹಿಕೆ ಮತ್ತು ಸುಖವಾಗಿಯೇ ಇರಬೇಕು ಎನ್ನುವ ಕಡು ನಿರೀಕ್ಷೆ ಆಳುವ ವ್ಯವಸ್ಥೆಯದು. ನಮ್ಮ ಸಾಹಿತ್ಯದಲ್ಲಿನ ಮಹಿಳಾ ಮತ್ತು ಕೆಳವರ್ಗದವರ ಪಾತ್ರಪೋಷಣೆಗೆ ಸಂಬಂಧಿಸಿದಂತೆ ಈ ಮಾತು ಹೆಚ್ಚು ಅನ್ವಯವಾಗುತ್ತದೆ. ಧರ್ಮ ಮತ್ತು ರಾಜಕಾರಣ ರೂಪಿಸುವ ಮೌಲ್ಯಗಳು ಹೀಗೆ ತಮ್ಮ ಗ್ರಹಿಕೆಗೆ ಅನುಗುಣವಾಗಿ ಎಲ್ಲವನ್ನೂ ಸಾಮನ್ಯೀಕರಿಸಿಬಿಡುತ್ತದೆ. ಆದುದರಿಂದಲೇ ವನವಾಸವೆಲ್ಲ ಕಳೆದು ಶಾಪಗ್ರಸ್ತ ಸ್ಥಿತಿಗೊಂದು ಉಶ್ಶಾಪ ದೊರೆತು ಮಗನೊಡನೆ ಅರಮನೆಗೆ ವಾಪಸ್ಸಾಗುವ ಶಕುಂತಲೆ 'ಸುಖವಾಗಿರುತ್ತಾಳೆ'. ಇದನ್ನು ಚರಿತ್ರೆ ನಂಬಬೇಕು. ಇಂತಹ ನಂಬಿಕೆಯನ್ನೇ ಕಾಲಕಾಲಕ್ಕೆ ಬಲಪಡಿಸುತ್ತಾ ಬರಲಾಗಿದೆ. ಇದು ನಮ್ಮ ಚಿಂತನೆಯ ಮಾದರಿ. ಆದರೆ ಇಂತಹ ಚಿಂತನೆಗೆ ಒಂದು ಹೊಸ ತಿರುವನ್ನು ನಾಟಕಕಾರ್ತಿ ತಮ್ಮ 'ಅಭಿನವ ಶಾಕುಂತಲ'ದ ಮೂಲಕ ಕೊಟ್ಟಿದ್ದಾರೆ ಎನ್ನುವುದು ಈ ಕೃತಿಯ ವೈಶಿಷ್ಟ್ಯ. ಮೇಲೆ ಹೇಳಿದಂತಹ ನಂಬಿಕೆಗಳನ್ನು ಪ್ರಶ್ನಿಸುವ ಪ್ರಯತ್ನದಲ್ಲಿಯೇ

ಇಲ್ಲಿನ ಹೊಸ ಶಕುಂತಲ ಮರುಹುಟ್ಟು ಪಡೆದಿದ್ದಾಳೆ. "ನಮ್ಮೆಲ್ಲರ ಬದುಕಂತೂ ಸೋರಿಹೋದುವಲ್ಲ. ಈ ಸಿಂಹಾಸನದ ಉತ್ತರಾಧಿಕಾರಿ ಮತ್ತಷ್ಟು ರಾಣಿ ವಸುಮತಿಯರನ್ನು, ಯವನ ಹುಡುಗಿಯರನ್ನು, ಹಂಸ ಪದಿಕೆಯರನ್ನು, ಶಕುಂತಲೆಯರನ್ನು ಸೃಷ್ಟಿಸದಿರಲಿ ಎಂದೇ ನನ್ನ ಮೊರೆ" (ಪು90). ಪ್ರಭುತ್ವದ ಪೋಷಣೆಗೆ ಇಂತಹ ಅಸಂಖ್ಯ ಅಮಾಯಕ ಹೆಣ್ಣುಮಕ್ಕಳ ಬದುಕು ಬಲಿಯಾಗದಿರಲಿ ಎನ್ನುವುದೇ ಅವಳ 'ಅಂತರಂಗದ ಮಾತು' ಈ ನಾಟಕದ ಮೂಲಕ ಸ್ತ್ರೀವಾದ ತನ್ನ ಪ್ರಜ್ಞಾ ವಿಸ್ತಾರವನ್ನು ಪಡೆದಿದೆ. ತನ್ನ ಆಳ ಅಗಲಗಳನ್ನು ಹೆಚ್ಚಿಸಿಕೊಂಡಿದೆ. ಸಣ್ಣ ತೊರೆಯಾಗಿ ಹುಟ್ಟಿಕೊಂಡ ಸ್ತ್ರೀವಾದ ಮಾನವತಾವಾದದ ದೊಡ್ಡ ಸರಸ್ಸಿನೊಳಗೆ ವಿಲೀನಗೊಳ್ಳುವುದರ ಮೂಲಕ ಇದಕ್ಕೊಂದು ವ್ಯಾಪಕವಾದ ಹಾಗೂ ಅಖಂಡವಾದ ದೃಷ್ಟಿಕೋನವೂ ಪ್ರಾಪ್ತಿಯಾಗುತ್ತದೆ. ಇಲ್ಲಿ ಘೋಷಣೆ, ಪ್ರಣಾಳಿಕೆಗಳಿಲ್ಲ. ಪುರುಷ ದ್ವೇಷದ ಅಬ್ಬರಗಳಿಲ್ಲ. ದೋಷಾರೋಪಣೆಯ ಮುಖಾಮುಖಿಯಿಲ್ಲ. (blame game). ಇಲ್ಲಿ ಕಳೆದು ಹೋದ ಶಕುಂತಲೆಯ ಶೋಧ ಮಾತ್ರವಿದೆ. ಆತ್ಮ ಶೋಧನೆಯೆನ್ನುವುದೇ ಒಂದು ಒಂಟಿ ಪ್ರಯಾಣ. ಅದು ವ್ಯಕ್ತಿಗತವಾಗಿ ಮಾತ್ರ ಕಂಡುಕೊಳ್ಳುವ ಸತ್ಯ. ಅಕ್ಕನಿಗೆ ಅವಳ ಪ್ರಯಾಣವೇ ಅವಳ ಆತ್ಯಂತಿಕವಾದ ಅನುಭಾವದ ಕ್ಷಣ (space) ಆದಂತೆ ಶಕುಂತಲೆ ಕೈಗೊಳ್ಳುವ ಪ್ರಯಾಣವೂ ಅವಳ space. ಅವಳು ಲೌಕಿಕವಾದ ಯಾವುದನ್ನೂ ಒಪ್ಪುವ ಅಥವಾ ನಿರಾಕರಿಸುವ ಹಂತವನ್ನು ದಾಟಿ ಬಂದುಬಿಟ್ಟಿದ್ದಾಳೆ. ಅವಳ ಪರಿತ್ಯಾಗದಲ್ಲಿ ದುಶ್ಯಂತನ ಬಗೆಗೆ ಕ್ರೋಧವಿಲ್ಲ, ನಿರಾಕರಣೆಯಿಲ್ಲ. ಪ್ರಕಾಶಕರು ಹೇಳುವಂತೆ ಅದು ಅವಳ ಅಸ್ತಿತ್ವದ ಪ್ರಶ್ನೆಯಾಗಿದೆ. ಆತ್ಮಶೋಧನೆಯ ಲಕ್ಷಣವಾಗಿದೆ.


ಯಾವುದೋ ಅಭೌತಿಕ ಕಾರಣಗಳು, ನಿಮಿತ್ತಗಳು ಶಕುಂತಲೆಯನ್ನು ದೌರ್ಭಾಗ್ಯದತ್ತ ನೂಕಿದವು. ಅವುಗಳ ಬಗ್ಗೆ ಅವಳಿಗೆ ರೋಷವಿಲ್ಲ. ಆದರೆ ಕಾರಣಗಳು ನೆಪಗಳು ಏನಿದ್ದರೂ ಅದಕ್ಕೆ ಬಲಿಯಾದವಳು ಮಾತ್ರ ಶಕುಂತಲೆ. "ಗೆಳತೀ, ನನ್ನ ಅಂತರಂಗದ ಮೊರೆ ಯಾರಿಗೆ ಹೇಗೆ ತಾನೆ ಅರ್ಥವಾದೀತು? ನಾನು ಯಾರನ್ನೂ ದೂರುತ್ತಿಲ್ಲ, ಶಾಪವೋ, ಉಶ್ಶಾಪವೋ, ಉದ್ದೇಶಪೂರ್ವಕವಾದ ತಪ್ಪೋ, ಅಲ್ಲವೋ ಅದರಿಂದ ನನಗೇನಾಗಬೇಕಾಗಿದೆ? ಈ ಘಟನಾ ಪರಂಪರೆಯಿಂದ ನನ್ನನ್ನು ನಾನು ಕಳೆದುಕೊಂಡೆನಲ್ಲ, ಅದನ್ನು ನನಗ್ಯಾರು ತುಂಬಿಕೊಡುವರು? ಯಾರು ಈ ರಕ್ತದಲ್ಲಿ ಬೆರೆತಿರುವ ವಿಷಾದವನ್ನು ಅಳಿಸಿ ಆ ನಿತಾಂತ ನಿಮಗ್ನತೆ ತುಂಬುವವರು? ಆ ಶುಚಿರ್ಭೂತ ಕಣ್ಣನ್ನು ನನಗೆ ನೀಡುವವರು?"(ಪು 54) ಪಿತೃಪ್ರಭುತ್ವದ ಆಧಿಕಾರವೆನ್ನುವುದು ಹೀಗೆ ಯಾವ ಯವುದೋ ಕಾರಣಗಳನ್ನು ಕೊಟ್ಟು ನೆಪಗಳಿಗೆ ಈಡುಮಾಡಿ ಹೆಣ್ಣನ್ನು ಬಲಿತೆಗೆದುಕೊಳ್ಳುತ್ತಲೇ ಇದೆ. ಈ ಬಲಿದಾನವನ್ನು ನಿಲ್ಲಿಸಬೇಕಾಗಿದೆ. ಅದಕ್ಕೆ ಹಿಂಸೆಗೆ ಪ್ರತಿಹಿಂಸೆ, ದ್ವೇಷಕ್ಕೆ ಪ್ರತಿದ್ವೇಷ ಉತ್ತರವಲ್ಲ. ಅದರಿಂದ ಮತ್ತೆ ಹಿಂಸೆ, ದ್ವೇಷಗಳು ವೃದ್ಧಿಯಾಗುತ್ತಲೇ ಹೋಗುತ್ತವೆ. ಪ್ರೀತಿ, ಸಹನೆಗಳು ದೌರ್ಬಲ್ಯಗಳಲ್ಲ. ಅವು ಮೌಲ್ಯಗಳಾದರೆ ಅವಕ್ಕೆ ಒಂದು ರೀತಿಯ ಅನನ್ಯವಾದ ಶಕ್ತಿ ಪ್ರಾಪ್ತವಾಗುತ್ತದೆ. ಇಂತಹ ಒಂದು ಶಕ್ತಿಯನ್ನು ಬೆಳೆಸಿಕೊಳ್ಳಬೇಕಾಗಿದೆ. ಈ ಶಕ್ತಿಯೇ ಎದುರಾಳಿಯ ಹೊಡೆತಕ್ಕೆ ಗುರಾಣಿಯಾಗಬಲ್ಲುದು. ಹೆಣ್ಣು ತನ್ನ ಭೂಮಿಕೆಯ ಮೂಲಕವೇ ಅದನ್ನು ಸಮಾಜಕ್ಕೆ ಮನದಟ್ಟುಮಾಡಿಸಬಲ್ಲಳು. ಇಲ್ಲಿ ಬರುವ ಪಟ್ಟದರಾಣಿ ವಸುಮತಿಯ ಮೌನ ಕೂಡ ಶಕುಂತಲೆಯ ಪರಿತ್ಯಾಗದ ಹಾಗೆ ಪ್ರಭುತ್ವದ ಲೋಪಗಳನ್ನು ತೀವ್ರವಾಗಿ ಬಯಲಾಗಿಸುವ ಉಪಾಯಗಳು. ಎದುರಾಳಿಯ ಎದುರು ಶಸ್ತ್ರ ಹಿಡಿದು ಯುದ್ಧ ಮಾಡುವುದಕ್ಕಿಂತ ಪರಿಣಮಕಾರಿಯಾದುದು, ಹೆಣ್ಣು ಮೆಲುದನಿಯಲ್ಲಿಯೇ ವ್ಯಕ್ತಪಡಿಸುವ ಪ್ರತಿರೋಧದ ಈ ಉಪಾಯಗಳು. ಈ ಉಪಾಯಗಳೇ ಹೆಣ್ಣನ್ನು ಬಲಿಪಶುವಿನ ಮಾದರಿಯಿಂದ (victim mode), ಅಸ್ಮಿತೆಯ ಅಥವ ಅಸ್ತಿತ್ವದ ಮಾದರಿಗೆ (survivor mode) ವರ್ಗಾಯಿಸಬಲ್ಲದು.

'ಶಾಕುಂತಲ'ವೆಂದಾಕ್ಷಣ ಕಥೆ ಸಾಮಾನ್ಯವಾಗಿ ಶಕುಂತಲೆಯ ಸುತ್ತಲೇ ಸುತ್ತುತ್ತದೆ. ಆದರೆ ಅಭಿನವ ಶಾಕುಂತಲದಲ್ಲಿ ಹಾಗಲ್ಲ. ಶಕುಂತಲೆಯ ಅಸ್ತಿತ್ವದ ಮಾದರಿಯನ್ನು (survival mode) ಪೋಷಿಸಲು ಅನೇಕ ಪಾತ್ರಗಳು ದುಡಿಯುತ್ತವೆ. ಚತುರಿಕೆ, ರಾಣಿ ವಸುಮತಿ, ಅನಸೂಯ ಪ್ರಿಯಂವದೆಯರು, ಹಂಸಪದಿಕೆ ಈ ಎಲ್ಲಾ ಪಾತ್ರಗಳು ಕೂಡ ಶಕುಂತಲೆಯ ಅವಧಾರಣೆಯನ್ನೇ ತಮ್ಮ ತಮ್ಮ ಪಾತ್ರಗಳ ಮಿತಿಯಲ್ಲಿ ಧರಿಸಿಕೊಳ್ಳುತ್ತವೆ. ಇದು ರಾಣಿ ವಸುಮತಿಯ ಮಾತುಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಶಕುಂತಲೆ ಅರಮನೆಯನ್ನು ತ್ಯಜಿಸುವ ಸಂದರ್ಭದಲ್ಲಿ ದುಷ್ಯಂತನ ಪಟ್ಟದ ರಾಣಿ ವಸುಮತಿ ಚತುರಿಕೆಯೊಡನೆ ಮಾತನಾಡುತ್ತಾ, "ಯಾವುದನ್ನು ಕರ್ಮವೆಂದು ನಾನು ಸಹಿಸಿಕೊಂಡೆನೋ ಅದನ್ನವಳು (ಶಕುಂತಲೆ) ಧಿಕ್ಕರಿಸುತ್ತಿದ್ದಾಳೆ. ನಾವ್ಯಾರೂ ತೋರದ ಧೈರ್ಯವನ್ನು ಅವಳು ತೋರಿದ್ದಾಳೆ, ನಮ್ಮ ಹೃದಯ ಮಾಡಬೇಕೆಂದು ಬಯಸಿದ್ದನ್ನು ಅವಳು ಮಾಡುತ್ತಿದ್ದಾಳೆ" (ಪು93)

ಶಕುಂತಲೆ ಹುಟ್ಟಿನಲ್ಲಿಯೇ ತ್ಯಜಿಸಲ್ಪಟ್ಟವಳು, ಮುಂದೆ ಕೂಡ ಅವಳು ತಿರಸ್ಕೃತಳಾಗಿಯೇ ಬದುಕು ಬೇಕಾಯಿತು. ಹೆಣ್ಣು ಹುಟ್ಟಿನಿಂದ ಸಾಯುವವರೆಗೆ ವ್ಯವಸ್ಥೆಯೊಳಗೆ 'ತ್ಯಾಜ್ಯ' ವಾಗುವುದರ ಪ್ರತೀಕವಾಗುತ್ತದೆ ಶಕುಂತಲೆಯ ಬದುಕು. ಇಂತಹ ಒಂದು ಸಾಮಾಜಿಕ ತಿರಸ್ಕಾರಕ್ಕೆ ಶಕುಂತಲೆ ಪರಿತ್ಯಾಗದ ಮೂಲಕ ಕೊಡುವ ಮಾರ್ಮಿಕ ಉತ್ತರ, ಅಂತಹ ಸಮಾಜದ ನಿರಾಕರಣೆಯೇ ಆಗಿದೆ. ಇದು ಶಕುಂತಲೆಯ ವ್ಯಕ್ತಿಗತ ಸಂಘರ್ಷವಲ್ಲ. ಬದಲಾಗಿ ವ್ಯವಸ್ಥೆಯೊಡನೆ ಸಂಘರ್ಷ. ಇದು ಹೆಣ್ಣಿನ ಅಸ್ಮಿತೆಯ ಸಂಘರ್ಷ. ಅದು ನಾಟಕದ ಕೊನೆಯ ಮಾತುಗಳಿಂದ ಸ್ಪಷ್ಟವಾಗುತ್ತದೆ. "ದುಷ್ಯಂತನೊಂದಿಗೆ ನನ್ನ ಯುದ್ಧವಿಲ್ಲ. ಕಳೆದ ಕಾಲದೊಂದಿಗೆ ನನ್ನ ಸೆಣಸಾಟವಿಲ್ಲ. ಇದು ನನ್ನೊಂದಿಗೆ ನನ್ನ ಹೋರಾಟ. ನನ್ನನ್ನು ಗೆಲ್ಲುವುದಕ್ಕಾಗಿ ನಾನು ಹೊರಟಿರುವೆ. ವಾಸ್ತವವನ್ನು ಪಡೆಯುವುದಕ್ಕಾಗಿ ನಾನು ಹೊರಟಿರುವೆ. ನನ್ನ ಬಿಡುಗಡೆಗಾಗಿ ನನ್ನ ತಪಸ್ಸು". ಆದುದರಿಂದಲೇ ದುಷ್ಯಂತನಿಗೆ ಅವಳನ್ನು ತಡೆಯಲು ಸಾಧ್ಯವಿಲ್ಲದಾಗಿದೆ. ರಾಜನೆಂಬ ಅಧಿಕಾರ ಬಳಸಿ ಅವಳನ್ನು ಕಟ್ಟಿಹಾಕಬಹುದು "ಅವಳನ್ನು ಕಟ್ಟಿಹಾಕುವುದು ನನಗೆಷ್ಟರ ಮಾತು" ಎಂದು ತನ್ನ ಪೌರುಷದ ಬಗ್ಗೆ ದುಷ್ಯಂತ ಹೆಮ್ಮೆ ಪಡಬಹುದು. ಆದರೆ ಹಾಗೆ ಕಟ್ಟಿ ಹಾಕುವುದರಿಂದ ಅವಳನ್ನು ಪಡೆಯಲಾರೆ ಎನ್ನುವ ಅರಿವು ಅವನಿಗಿದೆ. ಅವಳ ದೇಹವನ್ನು ಕಟ್ಟಿಹಾಕಬಹುದು ಆದರೆ ಅವಳೊಳಗೆ ಪುಟಿಯುತ್ತಿರುವ ಸ್ವಾತಂತ್ರ್ಯದ ಹಂಬಲವನ್ನಲ್ಲ. ಹಾಗಾಗಿಯೇ ಸೋಲನ್ನು ಒಪ್ಪಿಕೊಂಡು ಹಿರಿಯ ರಾಣಿಯಬಳಿಗೆ ಬಂದು ಶಕುಂತಲೆಯನ್ನು ತಡೆಯಬೇಕೆಂದು ಅಂಗಲಾಚುತ್ತಾನೆ. ಹೀಗೆ ದುಷ್ಯಂತನ ಅಸಹಾಯಕ ಸ್ಥಿತಿ ಮತ್ತು ಶಕುಂತಲೆಯ ಧೀರೋದ್ಧಾತ್ತ ನಿಲುವಿನ ವೈರುಧ್ಯಗಳನ್ನು ಮುಖಾಮುಖಿಯಾಗಿಸುವುದರ ಮೂಲಕ ನಾಟಕ ಯಶಸ್ವಿಯಾಗುತ್ತದೆ.

❑

ಈ ಸಾಲಿನ ಅನುಪಮ ಪ್ರಶಸ್ತಿಯನ್ನು ಪಡೆದ ಬಿ.ಎನ್.ಸುಮಿತ್ರಬಾಯಿಯವರನ್ನು ನಮ್ಮ ಮಾನಸ ಅಭಿನಂದಿಸುತ್ತದೆ.



ಲಂಕೇಶರ ಚಿಂತನೆಗಳಲ್ಲಿ : ಸ್ತ್ರೀತ್ವದ ಚಹರೆಗಳು

■ ಆಯ್. ಎಸ್. ಇಂಜಗನೇರಿ

ಎಲ್ಲ ಜೀವರಾಶಿಗಳ ನೆಮ್ಮದಿಯ ಬದುಕು ಈ ಸಮಾಜ ವ್ಯವಸ್ಥೆಯ ಪ್ರಧಾನ ಲಕ್ಷಣವಾಗಿದೆ. ಆದರೆ ಸ್ತ್ರೀ ಪುರುಷರಲ್ಲಿ ಅಧಿಕಾರಗಳ ಅಸಮಾನ ಹಂಚಿಕೆಯಿಂದಾಗಿ ಸ್ತ್ರೀ ಸಮುದಾಯವು ಸಮಾನ ಸಾಮಾಜಿಕ ನ್ಯಾಯದಿಂದ ವಂಚಿತವಾಯಿತು.ಪುರುಷ ಪ್ರಧಾನ ವ್ಯವಸ್ಥೆಯು ರೂಪುಗೊಂಡು ಸ್ತ್ರೀಯರು ಸಮಾಜದ ಹಲವು ನೆಲೆಗಳಲ್ಲಿ ಶೋಷಣೆಗೆ ಒಳಗಾಗುವಂತಾಯಿತು. ಸಾಹಿತ್ಯವು ಸಮಾಜದ ಓರೆ-ಕೋರೆಗಳನ್ನು ಸರಿಪಡಿಸುವ ಪ್ರಮುಖ ಸಾಧನ ವಾಗಿದೆ. ಹೊಸ ವಿಚಾರಗಳ ಮೂಲಕ ಚರಿತ್ರೆಯಲ್ಲಿ ದಾಖಲಾದ ಲಿಂಗದ ಅಸಮಾನತೆಗಳನ್ನು ಹೋಗಲಾಡಿಸುವಲ್ಲಿ ಪ್ರಯತ್ನಿಸುತ್ತಿದೆ. ಹೀಗೆ ಸಾಹಿತ್ಯದ ಮೂಲಕ ಸ್ತ್ರೀ ಪುರುಷರ ಸಮಾನ ಬದುಕಿಗಾಗಿ ಹಂಬಲಿಸಿದವರಲ್ಲಿ ಪಿ. ಲಂಕೇಶ ಪ್ರಮುಖರಾಗಿದ್ದಾರೆ.

ಲಂಕೇಶರ ವ್ಯಕ್ತಿತ್ವ

ವಾಸ್ತವವಾದಿಯಾದ ಲಂಕೇಶರು ಬಹುಮುಖ ಪ್ರತಿಭಾವಂತರು. ಲಿಂಗ, ಜಾತಿ, ಮತ್ತು ಪರಂಪರೆಗಳೆಂಬ ಗಡಿಯನ್ನು ದಾಟಿ ಮನುಷ್ಯನ ನೈಜ ಬದುಕನ್ನು ಅರ್ಥೈಸಲು ಪ್ರಯತ್ನಿಸಿದವರು. 'ಶಿಕ್ಷಣ, ಪತ್ರಿಕೋದ್ಯಮ, ಸಿನೆಮಾ, ಬೇಸಾಯ, ಕಾವ್ಯ, ನಾಟಕ, ಕತೆ, ಕಾದಂಬರಿ, ರಾಜಕೀಯ ಕ್ಷೇತ್ರಗಳಲ್ಲಿ ದುಡಿದ, ವಿಮರ್ಶೆಯಲ್ಲಿ ಸಾಧನೆಯನ್ನು ಮಾಡಿದವರು.[1] ವ್ಯವಸ್ಥೆಯಲ್ಲಿನ ತಪ್ಪುಗಳನ್ನು ನೇರವಾಗಿ ಟೀಕಿಸಿದವರು. ಶೋಷಣೆಯ ಆಳಕ್ಕಿಳಿದು ಅಲ್ಲಿರುವ ಶ್ರೇಷ್ಠ ವ್ಯಕ್ತಿತ್ವವನ್ನು ಗುರುತಿಸಿದ್ದಾರೆ. ಪುರುಷ ವ್ಯವಸ್ಥೆಯ ಪ್ರಖರತೆಯಲ್ಲಿ ಕರಗಿ ಹೋಗಿರುವ ಸ್ತ್ರೀ ಪಾತ್ರಗಳಿಗೆ ಜೀವ ತುಂಬುವಂತೆ ಆಲೋಚಿಸುವ ಲಂಕೇಶರು ಲಿಂಗ ಸಮಾನತೆಯ ನೆಲೆಯಲ್ಲಿ ಕಂಡು ಬರುತ್ತಾರೆ. ಅವರ ಚಿಂತನೆಗಳು 'ಪಾಶ್ಚಾತ್ಯ ಸ್ತ್ರೀವಾದಿ ಚಿಂತಕರ ವಿರುದ್ಧ ಓದಿನ ಕ್ರಮ' (Reading against the grain)ವನ್ನು ಪ್ರತಿಪಾದಿಸುವಂತಿವೆ.[2] ಲಂಕೇಶರ ಸ್ತ್ರೀ ಪಾತ್ರಗಳು-ಹೆಣ್ಣನ್ನು ಪ್ರತಿರೋಧದ ಮಾದರಿಯಾಗಿ, ಇಲ್ಲವೇ ಹೆಣ್ಣನ್ನು ಬಿಡುಗಡೆಯ ಮಾದರಿಯಾಗಿ ನೋಡಬಹುದು.[3] ಅವರ ಅವ್ವ ಕವನವು ಗ್ರಾಮೀಣ ಸಮುದಾಯಗಳ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಸುಪ್ತವಾಗಿರುವ ಸ್ತ್ರೀಶಕ್ತಿಯ ಪ್ರತಿನಿಧಿ ಎಂಬಂತೆ ಕಂಡುಬರುತ್ತದೆ.

'ಯವ್ವನವ ಕಳೆದಳು ಚಿಂದಿಯ ಸೀರೆ ಉಟ್ಟುಕೊಂಡು'[4] ಎಂಬ ಧ್ವನಿಯಲ್ಲಿ ಅವಳ ಬಡತನದ ಚಿತ್ರಣವಿದೆ. ತನ್ನ ತಾರುಣ್ಯದ ಬದುಕನ್ನೆಲ್ಲಾ ಕುಟುಂಬಕ್ಕಾಗಿ ತ್ಯಾಗ ಮಾಡುತ್ತಾಳೆ. ಪ್ರತಿಯಾಗಿ ಅವಳು ಸಮಾಜದಿಂದ ಯಾವ ಸಹಾಯವನ್ನು ಅಪೇಕ್ಷಿಸಲಾರಳು. ಯೋಗಿಯಂತೆ, ನಿಷ್ಕಾಮ ಕರ್ಮಿಯಂತೆ ವಿಶಾಲ ಪರಧಿಯಲ್ಲಿ ಆಲೋಚಿಸುವ ಸ್ತ್ರೀಗೆ ಅಧಿಕಾರದ ಸಮಾನತೆಯನ್ನು ಪ್ರತಿಪಾದಿಸುತ್ತಾರೆ.

ಅಧಿಕಾರದ ನೆಲೆಗಳು

ಲಿಂಗ ತಾರತಮ್ಯ ಕುರಿತ ಲಂಕೇಶರ ಕರಾರುವಕ್ಕಾದ ಆಲೋಚನೆಗಳು ಹೆಚ್ಚು ಪರಿಣಾಮಕಾರಿಯಾಗಿವೆ. ದುಡಿಯುವ ವರ್ಗದಿಂದ ದೂರವಾದ ಅಧಿಕಾರ ಅಸಮಾನತೆಯಲ್ಲಿ ಕಂಡುಬರುವುದನ್ನು ಗುರುತಿಸಿದ್ದಾರೆ. ತಾಯಿಯನ್ನು ಫಲವತ್ತಾದ ಮಣ್ಣಿನೊಂದಿಗೆ ಸಮೀಕರಿಸುವ ಕ್ರಮವನ್ನು ಪ್ರತಿಪಾದಿಸುವಂತಿದೆ. ದೈಹಿಕ ದುಡಿಮೆಯ ಸಾಮರ್ಥ್ಯಗಳ ಮೂಲಕ ಸ್ತ್ರೀ ಸಮುದಾಯಗಳಲ್ಲಿನ ಸಮೃದ್ಧತೆ ಬದುಕನ್ನು ಅನಾವರಣಗೊಳಿಸಿದ್ದಾರೆ. ಸ್ತ್ರೀತ್ವದ ಪ್ರತೀಕಗಳಾದ ನಾಚಿಕೆ, ಮೃದುತ್ವ, ಹಿಂಜರಿಕೆ, ಸೌಂದರ್ಯ ಪ್ರಜ್ಞೆ, ದುರ್ಬಲತೆ ಮುಂತಾದ ಸಂಗತಿಗಳನ್ನು ಅಲ್ಲಗಳಿಯುತ್ತಾ, ಅವುಗಳ ಸ್ಥಾನದಲ್ಲಿ ಪುರುಷ ಶಕ್ತಿಗಳನ್ನು ತುಂಬುತ್ತಾರೆ. ಕಾರ್ಲಮಾರ್ಕ್ಸನ ತತ್ವಗಳಂತೆ ಲಂಕೇಶರೂ 'ದುಡಿಯುವವರಿಗೆ ಅಧಿಕಾರ ಸಲ್ಲಬೇಕೆಂದು' ಹಂಬಲಿಸುತ್ತಾರೆ.

ಬನದ ಕರಡಿಯ ಹಾಗೆ
ಚಿಕ್ಕ ಮಕ್ಕಳ ಹೊತ್ತು
ಗಂಡನ್ನ ಸಾಕಿದಳು. ಕಾಸು ಗಂಟಿಕ್ಕಿದಳು

ಎಂಬ ಮಾತುಗಳು ಸ್ತ್ರೀಯರ ಆಂತರ್ಯದ ಕೌಟುಂಬಿಕ ಜವಾಬ್ದಾರಿಯನ್ನು ಗುರುತಿಸುವಂತಿದೆ. ದುರ್ಬಲ ಗಂಡನನ್ನು ಪೋಷಿಸುವ ಸ್ತ್ರೀ ಏಕೆ ಅಧಿಕಾರದಿಂದ ದೂರ ನಿಲ್ಲಬೇಕು? ಎಂದು ಪ್ರಶ್ನಿಸುತ್ತಾರೆ. ಪರಂಪರಾಗತ ಪುರುಷ ಸಮಾಜವು ಸ್ತ್ರೀಯರ ದೌರ್ಬಲ್ಯಗಳನ್ನೇ ವೈಭವೀಕರಿಸುತ್ತಾ ನಡೆದಿದೆ. 'ಪಿತೃ ಪ್ರಧಾನ ವ್ಯವಸ್ಥೆಯು ತನಗೆ ಬೇಕಾದಾಗ ಸ್ತ್ರೀ ಲೈಂಗಿಕತೆಯನ್ನು ಅನುಮೋದನೆ ನೀಡಿ ಬೇಡದಿದ್ದಾಗ ಅದನ್ನು ಮುಚ್ಚುವ ಪ್ರಯತ್ನ ಮಾಡುತ್ತದೆ.' ಅಧಿಕಾರದ ಎಲ್ಲ ನೆಲೆಗಳನ್ನು ಕರಗತ ಮಾಡಿಕೊಂಡ ಪುರುಷ ವರ್ಗ ಸ್ತ್ರೀಯರನ್ನು 'ತ್ಯಾಗ' ಇಲ್ಲವೇ 'ಭೋಗ'ದ ಚೌಕಟ್ಟಿನಲ್ಲಿಯೇ ಗುರುತಿಸುವ ಸಣ್ಣತನ ಇತಿಹಾಸದುದ್ದಕ್ಕೂ ನಡೆದಿರುವುದನ್ನು ತಿಳಿಸುತ್ತಾರೆ.

ಸಾಮಾಜಿಕ ನೆಲೆಗಳು

ಸ್ತ್ರೀ ಪುರುಷರ ಪರಸ್ಪರ ಸಹಕಾರಗಳಿಂದ ಕುಟುಂಬ ರಚನೆಯಾಗಿದೆ. ಈ ಸೌಹಾರ್ದಯುತವಾದ ವ್ಯವಸ್ಥೆಯಲ್ಲಿ ನಿಯಮಗಳೆಲ್ಲ ಏಕಪಕ್ಷೀಯ ವಾಗಿವೆ. ಹೀಗಾಗಿ ಮಹಿಳೆ ಸಾಮಾಜಿಕ ನೆಲೆಯಲ್ಲೂ ತನ್ನ ಅಸ್ತಿತ್ವವನ್ನು

ಕಳೆದುಕೊಂಡಿದ್ದಾಳೆ. ತನ್ನ ಗಂಡ, ಮಕ್ಕಳು, ಕುಟುಂಬ ಎಂಬ ವ್ಯವಸ್ಥೆಗೆ ಬದ್ಧಳಾಗಿ ಪ್ರಾಮಾಣಿಕತೆಯಿಂದ ದುಡಿಯುವ ತಾಯಿಯಲ್ಲಿ ಸಾಮಾಜಿಕ ಸಂಸ್ಕಾರದ ಗುಣಗಳನ್ನು ಲಂಕೇಶರು ಗುರುತಿಸಿದ್ದಾರೆ. ವಯಕ್ತಿಕ ನೆಲೆಯಲ್ಲಿ ಸುಖ-ಸಂತೋಷಗಳನ್ನು ಮೀರಿನಿಲ್ಲುವ ಅವಳ ಆಲೋಚನಾ ಕ್ರಮಗಳು ಆಧುನಿಕ ಸಮಾಜದ ಅಗತ್ಯಗಳಾಗಿ ಕಂಡು ಬರುತ್ತದೆ.


ಎಷ್ಟು ಸಲ ಈ ಮುದುಕಿ ಅತ್ತಳು
ಕಾಸಿಗೆ, ಕೆಟ್ಟ ಪೈರಿಗೆ, ಸತ್ತ ಕರುವಿಗೆ[6]

ಎಂಬ ಮಾತುಗಳಲ್ಲಿ ವ್ಯಕ್ತವಾಗುವ ಭಾವವು ಪೂರ್ಣ ದೃಷ್ಟಿಕೋನದಿಂದ ಕೂಡಿದೆ. ತನ್ನ ಕುಟುಂಬಕ್ಕಾಗಿ ಎಲ್ಲವನ್ನೂ ತ್ಯಾಗ ಮಾಡುವ ಸಾಮಾಜಿಕ ಅಧಿಕಾರಗಳಿವೆ. ಇಂದಿಗೂ ಗ್ರಾಮೀಣ ಸಮುದಾಯಗಳ ಹಲವು ಕುಟುಂಬಗಳಲ್ಲಿ ಸ್ತ್ರೀಯು ಆರ್ಥಿಕ ಮೂಲವಾದರೂ ಸಮಾಜ ಅವಳ ಕಾರ್ಯಗಳನ್ನು ಗುರುತಿಸುತ್ತಿಲ್ಲ. ಪಶ್ಚಿಮದ ಚಿಂತಕ ಗ್ರಾಮ್‌ಷೆಯ ಅಭಿಪ್ರಾಯದಂತೆ 'ಶೋಷಿತ ವರ್ಗದ ಹಕ್ಕುಗಳನ್ನು ಅಧಿಕಾರಿ ವರ್ಗದ ದೃಷ್ಟಿಕೋನದಿಂದಲೇ ವ್ಯಾಖ್ಯಾನಿಸಲಾಗುತ್ತದೆ.'[7] ನೋವಿನಲ್ಲಿಯೂ ಎಲ್ಲರೊಡನೆ ಸಂತೋಷದಿಂದ ಭಾಗಿಯಾಗುವ ತಾಯಿಯ ಸಾಮಾಜಿಕ ಗುಣಗಳನ್ನು ಲಂಕೇಶರು ಗುರುತಿಸಿದ್ದಾರೆ. ಕುಟುಂಬದ ಒಡತಿಯಾಗಿ ಗಂಡನಿಗೂ ಸೂಕ್ತ ಸಲಹೆಗಳನ್ನು ನೀಡಬಲ್ಲ ಮಹಿಳೆ ಹೇಗೆ ಪುರುಷನಿಗಿಂತಲೂ ಕೀಳಾಗಬಲ್ಲಳು? ಎಂದು ಪ್ರಶ್ನಿಸುತ್ತಾರೆ. ಸಾಮಾಜಿಕ ನೆಲೆಯಲ್ಲಿ ಸ್ತ್ರೀ ಪುರುಷರ ಸಮಾನತೆಯಿಂದ ಲಿಂಗ ಸಮಾನತೆಯ ಬದುಕಿಗಾಗಿ ಹಂಬಲಿಸುತ್ತಾರೆ.

ಸಾಂಸ್ಕೃತಿಕ ನೆಲೆಗಳು

ಸ್ತ್ರೀಯು ಸಂಸ್ಕೃತಿಯ ಹೆಸರಿನಲ್ಲಿಯೇ ಹೆಚ್ಚು ಶೋಷಣೆಗೆ ಒಳಗಾಗುತ್ತಾಳೆ. ದುಡಿಮೆ ಅವಳ ಬದುಕಿನ ಬಹುಭಾಗವಾದರೂ ಅವಳೆಂದೂ ಜೀವನದ 'ಚೈತನ್ಯ ಶಕ್ತಿ'ಯನ್ನು ಕಳೆದುಕೊಂಡಿಲ್ಲ. ಆರ್ಥಿಕ ಬಡತನದ ಮಧ್ಯದಲ್ಲೂ ಸಂತೋಷದಿಂದ ಬಾಳುತ್ತಾಳೆ. ಅವಳ ಬದುಕಿನ ಚಿಂತನೆಗಳಲ್ಲಿ ಕಾಣುವ ಸಾಂಸ್ಕೃತಿಕ ಸಂಗತಿಗಳ ಪ್ರಭಾವಳಿಗಳನ್ನು ಲಂಕೇಶರು ಗುರುತಿಸಿದ್ದಾರೆ.

ಈಕೆ ಉರಿದೆದ್ದಾಳು,
ಮಗ ಕೆಟ್ಟರೆ, ಗಂಡ ಬೇರೆ ಕಡೆ ಹೋದರೆ.[8]



ಎನ್ನುವ ಅಂಶಗಳು ನಮ್ಮ ದೇಶಿ ಸಂಸ್ಕೃತಿಯ ಉಳಿವಿನ ಶ್ರೇಷ್ಠ ಸಂಗತಿಗಳಾಗಿವೆ. ವಯಕ್ತಿಕ ಹಿತಕ್ಕಿಂತಲೂ ಕುಟುಂಬ ಮತ್ತು ಸಮಾಜದ ಹಿತವನ್ನು ಬಯಸುವ ತಾಯಿಯಲ್ಲಿ ಸಂಸ್ಕೃತಿಯ ಸಂಗತಿಗಳಿವೆ. ಉತ್ತಮ ಸಂಸ್ಕಾರದಲ್ಲಿ ಮಗನನ್ನು ಬೆಳೆಸಬೇಕೆಂಬ ಆಸೆ, ದುಶ್ಚಟಗಳಿಗೆ ಬಲಿಯಾಗದಂತೆ ಗಂಡನನ್ನು ನಿಯಂತ್ರಿಸುವ ರೀತಿ ಇವೆಲ್ಲ ಇಂದಿನ ಆಧುನಿಕತೆಯ ಅಗತ್ಯತೆಗಳಲ್ಲಿ ಒಂದಾಗಿದೆ.

ಸಂಸ್ಕೃತಿಯನ್ನು ಬೆಳೆಸುವ ಜವಾಬ್ದಾರಿ ಸ್ತ್ರೀಯರಿಗೆ ಮಾತ್ರ ಸೀಮಿತ ಎನ್ನುವ ಧೋರಣೆಯ ಸಾಂಸ್ಕೃತಿಕ ನೆಲೆಯಲ್ಲಿ ಸ್ತ್ರೀಯ ಶೋಷಣೆಯು ಕಂಡುಬರುತ್ತದೆ. ಬಟ್ಟೆ-ಬರೆ, ಹಬ್ಬ-ಹರಿದಿನ, ಪದ್ಧತಿ - ಪರಂಪರೆ ಇವುಗಳನ್ನು ಮಾತ್ರ ಸಂಸ್ಕೃತಿಯೆಂದು ಭಾವಿಸಲಾಗುತ್ತಿದೆ. ಇವುಗಳ ಚೌಕಟ್ಟಿನಲ್ಲಿಯೇ ಸ್ತ್ರೀ ಸಮುದಾಯವನ್ನು ನಿಯಂತ್ರಿಸುವ ಕೆಟ್ಟ ಪದ್ಧತಿಯು ನಡೆಯುತ್ತಿದೆ. ಈ ಕುರಿತು ಆಲೋಚಿಸುವ ಲಂಕೇಶರು ಸಂಸ್ಕೃತಿಯ ನಿರ್ಮಿತಿಯಲ್ಲಿ ಸ್ತ್ರೀ-ಪುರುಷನ ಕಾರ್ಯವೂ ಸಮಾನವಾದುದು ಎಂಬುವುದನ್ನು ಪ್ರತಿಪಾದಿಸಿದ್ದಾರೆ.

ಹೆಣ್ಣಿನಲ್ಲಿ ಸ್ಪಂದನಾ ಮನೋಭಾವನೆಗಳಿವೆ. ಅವಳಲ್ಲಿನ ಸಂಸ್ಕೃತಿಯ ಕುರಿತಾದ ಆಲೋಚನೆಗಳು 'ಸ್ತ್ರೀವಾದದ ವೈವಿಧ್ಯತೆ ಮತ್ತು ಬಹುಮುಖತೆಗಳನ್ನು ಪೋಷಿಸುವಂತಿವೆ.'[9] ಇಂದಿನ ಪ್ರಜ್ಞಾವಂತ ನಾಗರೀಕರು ಅಳವಡಿಸಿಕೊಳ್ಳಬೇಕಾದ ಅವಶ್ಯಕತೆಗಳನ್ನು ವಿಶ್ಲೇಷಿಸಿದ್ದಾರೆ. ಈ ಮೂಲಕ ಪಶ್ಚಿಮದ ಚಿಂತನೆಗಳಲ್ಲಿರುವ ಅಂಶಗಳು ಭಾರತೀಯ ಗ್ರಾಮೀಣ ಸಮುದಾಯಗಳಲ್ಲಿರುವುದನ್ನೂ ತಿಳಿಸಿದ್ದಾರೆ.

ಚಾರಿತ್ರಿಕ ನೆಲೆಗಳು

ಚರಿತ್ರೆಯು ಕೇವಲ ಗೆದ್ದವರ ದಾಖಲೆಯಲ್ಲ, ಬರೆದವರ ಪರವಾಗಿರುವ ದಾಖಲೆಯೂ ಹೌದು! 'ಸಾಹಿತ್ಯ ಕ್ಷೇತ್ರವೂ ಲಿಂಗ ಭೇದದಿಂದ ಹೊರಗುಳಿಯುವ ಕ್ಷೇತ್ರವಲ್ಲ' ಎಂಬ ಚಿಂತಕರ ಮಾತಿನಂತೆ ಚರಿತ್ರೆಯು ಪುರುಷರ ಪರವಾಗಿಯೇ ದಾಖಲಾಗಿದೆ. ಸ್ತ್ರೀಯರ ಸಾಧನೆಗಳನ್ನು ಮರೆಯಾಗಿಸಿದ ಪುರುಷರ ಸಂಕುಚಿತ ಮನೋಭಾವಗಳನ್ನು ಲಂಕೇಶರು ಗುರುತಿಸಿದ್ದಾರೆ. ಬಡತನ, ಅನಕ್ಷರತೆಯ ಮಧ್ಯದಲ್ಲೂ ಬಹು ಎತ್ತರದಲ್ಲಿ ಕಂಡು ಬರುವ ತಾಯಿಯ ಪಾತ್ರ ಸಮಾಜಕ್ಕೆ ಮಾದರಿಯಂತಿದೆ. ಶ್ರೇಷ್ಠ ಕೌಟುಂಬಿಕ ಪರಂಪರೆಯ ಹಿನ್ನೆಲೆ ಇಲ್ಲವಾದರೂ ಅವಳ ಸುಧಾರಣಾ ಕ್ರಮಗಳು ಇಂದಿಗೂ ಪ್ರಸ್ತುತವಾಗಿದೆ. ವಯಸ್ಸಿನ ಅರಿವಿಲ್ಲದೇ, ಸೋಲಿನ ನೋವುಗಳಿಲ್ಲದೇ ಸಮಾಜಕ್ಕಾಗಿ ದುಡಿದ ಸ್ತ್ರೀಶಕ್ತಿಗಳನ್ನು ಗುರುತಿಸದ ಸಮಾಜದ ನಿಲುವು ಏಕಪಕ್ಷೀಯವಾಗಿದೆ.

ಬನದ ಕರಡಿಗೆ ನಿಮ್ಮ ಭಗವದ್ಗೀತೆ ಬೇಡ
ನನ್ನವ್ವ ಬದುಕಿದ್ದು
ಕಾಳು ಕಡ್ಡಿಗೆ, ದುಡಿತಕ್ಕೆ, ಮಕ್ಕಳಿಗೆ;[10]

ಎಂಬ ಸಾಲುಗಳಲ್ಲಿ ಸ್ತ್ರೀಯರ ಬದುಕಿನ ನೈಜ ಚಿತ್ರಣವಿದೆ. ನಿಸರ್ಗದ ಶಕ್ತಿಗಳನ್ನು ಕೈವಶ ಮಾಡಿಕೊಂಡವರಂತೆ ವರ್ತಿಸುತ್ತಿರುವ ಪುರುಷವರ್ಗ ಸ್ತ್ರೀಯರ ಬದುಕಿನ ಕನಿಷ್ಠ ಅವಶ್ಯಕತೆಗಳನ್ನು ಪೂರೈಸದೇ ಇರುವುದು ದುರಂತವೇ ಸರಿ. ಹೀಗೆಯೇ 'ಚರಿತ್ರೆಯುದ್ದಕ್ಕೂ ಸ್ತ್ರೀ ಎಂದರೆ ಚಂಚಲೆ, ದಡ್ಡಿ, ಅತಿಕಾಮಿ, ಆತುರಗಾರ್ತಿ ಎಂದೆಲ್ಲ ಗುರುತಿಸಿದ್ದಾರೆ.' ಈ ಗುಣಗಳು ಇಲ್ಲವೆಂದಲ್ಲ. ಅವುಗಳು ಪುರುಷ ವರ್ಗದಲ್ಲೂ ಇವೆ ಎಂಬ ಅಂಶಗಳು ಎಲ್ಲಿಯೂ ದಾಖಲಾಗಿಲ್ಲ. ಪುರುಷರ ಕ್ರೂರ ವರ್ತನೆಯಲ್ಲಿ ನಲುಗಿ ಹೋದ ಸಾಮಾನ್ಯ ಮಹಿಳೆಯರ ಯಾತನೆಯನ್ನು ಪುನಃ ಕಟ್ಟಿಕೊಡಲು ಲಂಕೇಶರ ಆಲೋಚನೆಯ ಮಾದರಿಯಾಗಿದೆ. ತಾಯಿಯ

ನಿಷ್ಕಲ್ಮಶವಾದ ಮನಸ್ಸಿಗೆ ಕವಿ ಕೃತಜ್ಞತೆಯ ಕಣ್ಣೀರನ್ನು ಅರ್ಪಿಸುವ ಮೂಲಕ ಇಂತಹ ಘಟನೆಗಳು ಚರಿತ್ರೆಯಲ್ಲಿ ಪುನಃ ಸಂಭವಿಸದಿರಲಿ ಎಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ.

ಜೈವಿಕ ನೆಲೆಗಳು

ಸ್ತ್ರೀಯರ ಶಕ್ತಿ ಸಾಮರ್ಥ್ಯಗಳನ್ನು ಪುರುಷನೊಂದಿಗೆ ಸಮೀಕರಿಸುವ ಜೈವಿಕ ಸಂಗತಿಗಳು ಅವೈಜ್ಞಾನಿಕವಾಗಿವೆ. ಲಂಕೇಶರ ಈ ಕವನದಲ್ಲಿ ದಾಖಲಾದ 'ಅಮ್ಮ' ಗಂಡನ ದುರ್ಬಲ ವ್ಯಕ್ತಿತ್ವದ ಮಧ್ಯದಲ್ಲೂ ತಾನು ದುಡಿಯುತ್ತಾ ಎಲ್ಲ ಸಂದರ್ಭಗಳಲ್ಲೂ ಜೈವಿಕ ನೆಲೆಗಳನ್ನು ಮೀರಿ ನಿಲ್ಲುತ್ತಾಳೆ. ಮಕ್ಕಳ ಏಳಿಗೆಯಲ್ಲಿಯೇ ತನ್ನ ಭವಿಷ್ಯವನ್ನು ಕಂಡುಕೊಳ್ಳುತ್ತಾಳೆ. ಅವಳ ಕೋಪ, ಆತಂಕಗಳಲ್ಲಿ ವ್ಯವಸ್ಥೆಯ ಕುರಿತಾದ ಅಪಾರವಾದ ಕಾಳಜಿಯು ಕಂಡುಬರುತ್ತದೆ.

ಸ್ತ್ರೀ–ಪುರುಷರ ಜೈವಿಕ ಮತ್ತು ದೈಹಿಕ ಭಿನ್ನತೆಗಳನ್ನು ಸಾಮಾಜಿಕ ಅಂಶಗಳಾಗಿ ವಿಂಗಡಿಸಿರುವುದು ದೋಷಯುಕ್ತವಾಗಿದೆ. ಪರಸ್ಪರರು ಮೇಲು ಕೀಳಲ್ಲ, ಪ್ರತಿಯೊಬ್ಬರಲ್ಲಿಯೂ ವಿಶಿಷ್ಟ ಶಕ್ತಿ ಸಾಮರ್ಥ್ಯಗಳಿವೆ. ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಬೌದ್ಧಿಕ ಮತ್ತು ಮಾನಸಿಕ ಸಾಮರ್ಥ್ಯಗಳು ಪ್ರಧಾನವಾಗಿರುವುದರಿಂದ ಸ್ತ್ರೀ–ಪುರುಷರು ಸಮಾನರೆಂದು ಲಂಕೇಶರು ಪ್ರತಿಪಾದಿಸುವಂತಿದೆ. ಹೆಂಡತಿಯ ದುಡಿಮೆಯ ಹಣಕ್ಕೆ ಆಸೆಪಡುವ ಅಶಕ್ತ ಪುರುಷ ವರ್ಗದ ಚಿತ್ರಣದ ಮೂಲಕ ಸಮಾನತೆಯನ್ನು ತಿಳಿಸುತ್ತಾರೆ. ಈ ಮೂಲಕ 'ಗಂಡು–ಹೆಣ್ಣು ಎಂಬ ದೇಹ ದ್ವೈತದ ಎಲ್ಲೆಗಳ ಆಚೆಗಿನ ಚೇತನಾವಸ್ಥೆಯನ್ನು ಶೋಧಿಸುವಂತೆ ಕಂಡು ಬರುತ್ತದೆ.' ಜೈವಿಕ ನೆಲೆಯಲ್ಲಿ ವೈಭವೀಕರಣಗೊಂಡ ಪುರುಷ ಪ್ರತಿಮೆಗಳನ್ನು ಅಲ್ಲಗಳೆಯುತ್ತಾ, ಸ್ತ್ರೀಯರ ಸಶಕ್ತ ಬದುಕನ್ನು ಕಟ್ಟಿಕೊಟ್ಟಿದ್ದಾರೆ.

ಸಾಹಿತ್ಯಕ ನೆಲೆಗಳು

ಸಾಹಿತ್ಯವು ಒಂದು ಪ್ರಕಾರದ ಕಲೆಯಾಗಿದೆ. ಕಲೆಯೇ ಜೀವನದ ಅಂತಿಮ ಸತ್ಯವಲ್ಲ. ಅದರಲ್ಲಿಯೂ ಲಿಂಗದ ಪ್ರಭಾವವನ್ನು ಅಲ್ಲಗಳೆಯಲಾಗದು ಎಂಬ ಮಾತುಗಳು ಲಂಕೇಶರ ಕಾವ್ಯದ ಧ್ವನಿಯಾಗಿದೆ. ಸ್ತ್ರೀಯರನ್ನು ಲೈಂಗಿಕ ವಸ್ತುವೆಂಬಂತೆ ಪರಿಭಾವಿಸುವ ಸಾಹಿತ್ಯದಲ್ಲಿ ಅವಳ ಕಾರ್ಯಸಾಧನೆಗಳು ಮರೆಯಾಗಿರುವುದನ್ನು ಎಚ್ಚರಿಸುವಂತಿದೆ. ಲಿಂಗ ಭಾಷೆಗಿಂತಲೂ ವ್ಯಕ್ತಿತ್ವದ ಆಧಾರಗಳ ಮೇಲೆ ಅಧಿಕಾರ ವಿಭಜನೆಯಾಗಬೇಕೆಂದು ಪ್ರತಿಪಾದಿಸುತ್ತಾರೆ. ಪುರುಷರ ಎಲ್ಲ ಚಿಂತನಾ ಕ್ರಮಗಳು ಶ್ರೇಷ್ಠವಾದವುಗಳು. ಮಹಿಳೆಯರ ಚಿಂತನೆಗಳು ದೋಷಪೂರಿತ ಎನ್ನುವ ಸಾಂಪ್ರದಾಯಿಕ ಗ್ರಹಿಕೆಯನ್ನು ಬದಲಾಯಿಸುತ್ತಾರೆ.

ಸ್ತ್ರೀಯರನ್ನು ಕೇವಲ ಭಾವನಾ ಪ್ರಿಯಳೆಂದು ಆಲೋಚಿಸುವ ಸಾಂಪ್ರದಾಯಿಕ ಭ್ರಮೆಗಳ ಆಚೆ ನಿಂತು ವ್ಯವಸ್ಥೆಯನ್ನು ಪ್ರಶ್ನಿಸುತ್ತಾರೆ. ಲಿಂಗವೇ ವ್ಯಕ್ತಿತ್ವವನ್ನು ಪ್ರಧಾನಿಸಲಾರದು. ಅವರವರು ಬೆಳೆದು ಬಂದ ಪರಿಸರ ಮತ್ತು ಆಲೋಚನೆಗಳು ಪ್ರಮುಖವಾಗಿರುತ್ತವೆ ಎನ್ನುತ್ತಾರೆ. 'ಹೂವಲ್ಲಿ ಹೂವಾಗಿ ಕಾಯಲ್ಲಿ ಕಾಯಾಗಿ ಎನ್ನುವ' ಮಾತುಗಳಲ್ಲಿ ಸ್ತ್ರೀ ಸಮುದಾಯದ ಹೊಂದಾಣಿಕೆಯ ಗುಣಗಳು ಕಂಡುಬರುತ್ತದೆ. ಸದಾ ಬದುಕಿನ ಧನಾತ್ಮಕತೆಯ ಕುರಿತ ತಾಯಿಯ ಮನಸ್ಥಿತಿಯನ್ನು ತುಂಬಾ ಭಾವುಕತೆಯಿಂದ ವರ್ಣಿಸಿದ್ದಾರೆ. ಹಲವು ಉಪಮೆ, ರೂಪಕಗಳ ಮೂಲಕ ತಿಳಿಸುವ ಸ್ತ್ರೀಯ ವ್ಯಕ್ತಿತ್ವ ಎಲ್ಲಿಯೂ ಭ್ರಮಾತ್ಮಕವೆಂದು ಕಂಡುಬರುವುದಿಲ್ಲ. ಇದನ್ನು ಸಾಹಿತ್ಯಿಕ ಪೂರ್ಣದೃಷ್ಟಿಕೋನವೆಂದು ಕರೆಯಬಹುದು.

ಅನಾಗರಿಕನಾದ ಮಾನವನು ಸಂಸ್ಕೃತಿಯ ಮೂಲಕ ನಾಗರಿಕ ಜೀವನವನ್ನು ಕಟ್ಟಿಕೊಂಡನು. ಇಂದು ಲಿಂಗ ಸಮಾನತೆಯ ಮೂಲಕ ಪರಿಪೂರ್ಣನಾಗುವ ಅಂಶಗಳನ್ನು ಲಂಕೇಶರು ದಾಖಲಿಸುತ್ತಾರೆ. ಹೊಸ ವಿಚಾರಗಳೊಂದಿಗೆ ಬೆಳೆಯುವುದೇ ಜೀವಂತ ಸಮಾಜದ ಪ್ರಧಾನ ಲಕ್ಷಣವಾಗಿದೆ ಎಂಬ ಮಾತನ್ನು ತಮ್ಮ 'ಹೊಸ ಅಕ್ಷರ ಕಾವ್ಯ' ಎಂಬ ಸಂಕಲನದಲ್ಲಿ ತಿಳಿಸುತ್ತಾರೆ. ಲಿಂಗ ವ್ಯವಸ್ಥೆಯ ಅಸಮತೋಲನಗಳು ಬದಲಾಗದೇ ಪ್ರಗತಿಯು ಸಾಧ್ಯವಾಗದು ಎಂದು ಎಚ್ಚರಿಸುತ್ತಾರೆ. ಹಳೆಯ ಸಂಪ್ರದಾಯಗಳೇ ಶ್ರೇಷ್ಠವೆಂದು ಒಪ್ಪಿಕೊಳ್ಳುವ 'ಸಾತ್ವಿಕ' ಮನಸ್ಸುಗಳಿಗೆ ಇಲ್ಲಿರುವ ವಿಚಾರಗಳು ಹೊಸ ಕಂಪನವನ್ನುಂಟು ಮಾಡುತ್ತವೆ. ಪರಂಪರೆಯ ಎಲ್ಲ ಅಧಿಕಾರದ ನೆಲೆಗಳು ಬದಲಾಗಿ ಹೊಸತನದೊಂದಿಗೆ ಯುವ ಜನತೆ ಬೆಳೆಯಲಿ ಎಂಬ ಪ್ರಾಮಾಣಿಕ ಆಶಯ ಕಂಡುಬರುತ್ತದೆ.

❑

ಅಡಿಟಿಪ್ಪಣಿಗಳು:

1. ಕನ್ನಡ ಕಥನ ಸಾಹಿತ್ಯ: ಕಾದಂಬರಿ – ಜಿ.ಎಸ್. ಅಮೂರ, ಶ್ರೀಹರಿ ಪ್ರಕಾಶನ, ಧಾರವಾಡ, 1994.
2. ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ, ಎಲ್.ಜಿ.ಮೀರಾ, ಸಿ. ಎನ್. ರಾಮಚಂದ್ರನ ಅವರ ಮುನ್ನುಡಿ, ಪು–3.
3. ನಡುವೆ ಸುಳಿದ ಆತ್ಮ, ಎಮ್. ಎಸ್. ಆಶಾದೇವಿ, ಅಹರ್ನಿಶಿ ಪ್ರಕಾಶನ, 2011, ಪು–58.
4. ಪಿ. ಲಂಕೇಶ, ಅಕ್ಷರ ಹೊಸ ಕಾವ್ಯ, 1993, ಪು–165.
5. ಭಾರತೀಯ ಸ್ತ್ರೀವಾದ, ಮನು ಚಕ್ರವರ್ತಿ, ಅಕ್ಷರ ಪ್ರಕಾಶನ, 1993, ಪು–104–105.
6. ಪಿ. ಲಂಕೇಶ. ಅದೇ.
7. ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ, 2004, ಪು–9.
8. ಪಿ. ಲಂಕೇಶ, ಅದೇ.
9. ಮಧುಕೇಶ್ವರ ಅವರ ಚಿಂತನೆಗಳು, 'ಮಾನುಷಿ' ಪತ್ರಿಕೆಯ ಕೇಂದ್ರ ಆಶಯ.
10. ಪಿ. ಲಂಕೇಶ, ಅದೇ.
11. ದಿ. ಸೆಕೆಂಡ ಸೆಕ್ಸ್, 'ಸಿಮನ್ ದಿ ಬುವಾಳ ಅಭಿಪ್ರಾಯ,' ಮಹಿಳಾ ಅಧ್ಯಯನ ಭಾಗ–2, ಹೇಮಲತಾ ಎಚ್.ಎಮ್–2010
12. ನಡುವೆ ಸುಳಿವ ಆತ್ಮ, ಮುನ್ನುಡಿ, ಬಿ.ಎನ್. ಸುಮಿತ್ರಾಬಾಯಿ ಅಭಿಪ್ರಾಯ, ಪು–11.

ಆಕರ ಗ್ರಂಥಗಳು :

1. ಹೊಸ ಅಕ್ಷರ ಕಾವ್ಯ, ಪಿ ಲಂಕೇಶ, 1993.
2. ಸಾಹಿತ್ಯ ಕಥನ, ಡಿ.ಆರ್. ನಾಗರಾಜ, ಅಕ್ಷರ ಪ್ರಕಾಶನ, 2006. 3.ಸಾಹಿತಿ ಸಾಹಿತ್ಯ ವಿಮರ್ಶೆ, ಪಿ. ಲಂಕೇಶ, ಲಂಕೇಶ ಪ್ರಕಾಶಕರು, 2008.

ಈ ಲೇಖನದಲ್ಲಿರುವುದು ಲೇಖಕರ ಅಭಿಪ್ರಾಯಗಳು. ನಿಮ್ಮ ಅನಿಸಿಕೆಗಳಿಗೆ ಸ್ವಾಗತ. –ಸಂ.ಮ.



ಮೌನ ಮುರಿದಾಗ

■ ಸುರೇಖ

ನಾನು ಪವಿತ್ರಾ. ವಿಜಾಪೂರ ನಗರದಲ್ಲಿರುವ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತೇನೆ. ನನ್ನ ತಂದೆ ಕಾಶಪ್ಪ, ತಾಯಿ ಯಮನವ್ವ, ನಾವು ಆರು ಜನ ಅಕ್ಕ ತಂಗಿಯರು. ನಮ್ಮ ತಾಯಿ ನಾನು ನಾಲ್ಕು ವರ್ಷದವಳಿದ್ದಾಗ ಅನಾರೋಗ್ಯದಿಂದ ತೀರಿಕೊಂಡಳು. ಆಗ ನಮ್ಮ ತಂದೆ ಮತ್ತು ಅಜ್ಜಿ ನಮ್ಮ ಪಾಲನೆಮಾಡಿದರು. ತಂದೆ ತಾಯಿಗೆ ನಾನು ನಾಲ್ಕನೇ ಮಗಳಾಗಿದ್ದೆ. ನಾವು ತಾಯಿಯಿಲ್ಲದೆ ಬೆಳೆದವು. ನನಗೆ 15 ವರ್ಷವಿದ್ದಾಗ ಸೌತಿ ಮ್ಯಾಲ (2ನೇ ಮದುವೆ) ಮದುವೆ ಮಾಡಿದ್ದರು. ನನ್ನ ಗಂಡ ಮೊದಲೇ ಮದುವೆ ಮಾಡಿಕೊಂಡಿದ್ದ. ನನ್ನ ಗಂಡನ ಮೊದಲನೆಯ ಹೆಂಡತಿಯೇ ನಮಗೆ ಮುಂದು ನಿಂತು ಮದುವೆ ಮಾಡಿಸಿದಳು. ಯಾಕೆಂದರೆ ಆಕಿಗೆ ಹೆಣ್ಣು ಮಗು ಇತ್ತು, ನನ್ನ ಗಂಡನಿಗೆ ಗಂಡು ಮಗು ಬೇಕಾಗಿತ್ತು. ನನ್ನ ಗಂಡನ ಕಡೆಯವರು ವರದಕ್ಷಿಣೆ ಕೇಳಲಿಲ್ಲ. ಅದಕ್ಕೆ ನನ್ನ ತಂದೆ 'ವರದಕ್ಷಿಣೆ ಇಲ್ಲದೆ ಮಗಳ ಮದುವೆ ಯಾಗುತ್ತದೆ' ಎಂದು ಸುಮ್ಮನೆ ಎರಡನೆಯ ಮದುವೆಗೆ ಒಪ್ಪಿಗೆ ನೀಡಿದರು. ಗಂಡನ ಮನೆಗೆ ಬಂದ ಮೇಲೆ ಸೌತಿ ತೊಂದರೆ ಕೊಡಲಿಕ್ಕೆ ಪ್ರಾರಂಭಿಸಿದಳು. ಸ್ವಲ್ಪದಿನಗಳ ನಂತರ ಗಂಡನು ಆಕೆಯ ಜೊತೆ ಸೇರಿಕೊಂಡು ಕಿರುಕುಳ ಕೊಡುತ್ತಿದ್ದ. ಗಂಡ ಕುಡಿದು ಬಂದು ಹೊಡೆಯುವದು, ಅವಾಚ್ಯ ಶಬ್ದಗಳಿಂದ ಬಯ್ಯುತ್ತಿದ್ದ. ಕೆಲವು ದಿನಗಳ ನಂತರ ನನ್ನ ಗಂಡ ಹಾಗೂ ನನ್ನ ಸೌತಿಯ ನಡುವೆ ಜಗಳವಾಗಿ ಆಕೆ ತವರು ಮನೆಗೆ ಹೋದಳು. ಆಗ ನನ್ನ ಗಂಡ ಬೇರೆ ಹೆಂಗಸಿನ ಸಹವಾಸ ಮಾಡಿ ಅವಳ ಜೊತೆ ಮುಂಬೈಗೆ ಓಡಿ ಹೋದ. ಆಕೆಯ ಜೊತೆ 7 ವರ್ಷ ಇದ್ದು 4 ಜನ ಮಕ್ಕಳನ್ನು ಹೊಂದಿದ್ದ. 7 ವರ್ಷದ ನಂತರ ಬಂದು, "ನೀನು ಇಷ್ಟು ದಿನ ದುಡಿದಿದ್ದ ಹಣ ಕೊಡು" ಎಂದು ಜಗಳ ಮಾಡಿದ. ಒಂದು ದಿನ ಗಂಡ ಕುಡಿದು ಬಂದು "ನನ್ನ ಹೆಂಡತಿಯನ್ನು ನೀನೇ ಮನೆ ಬಿಟ್ಟು ಕಳಿಸಿದೆ"ಎಂದು ಜಗಳ ಮಾಡಿದ. ಆಗ ಗಂಡನ ಹಿಂಸೆ (ಕಿರಕುಳ) ತಾಳಲಾರದೆ ಮೈಮೇಲೆ ಸೀಮೆ ಎಣ್ಣಿ ಹಾಕಿ ಸುಟ್ಟು ಕೊಂಡೆ. ಸುಟ್ಟು ಕೊಂಡಾಗ ಸರಕಾರಿ ದವಾಖಾನೆಗೆ ಸೇರಿಸಿದರು. ಪೋಲಿಸರು ಹೇಗೆ ಸುಟ್ಟುಕೊಂಡೆ ಎಂದು ಪ್ರಶ್ನಿಸಿದಾಗ 'ಆಕಸ್ಮಿಕ ಬೆಂಕಿ ಹತ್ತಿಕೊಂಡಿತು' ಎಂದು ಹೇಳಿದೆ. ಗಂಡನ ವಿರುದ್ಧ ಹೇಳಿಕೆ ನೀಡಬೇಕೆಂದು ಅನಿಸಿದರೂ ಈ ಸಮಾಜಕ್ಕೆ ಹೆದರಿ ಗಂಡನ ವಿರುದ್ಧ ಯಾವುದೇ ಹೇಳಿಕೆ ನೀಡಲಿಲ್ಲ. ನಾನು ಮೈಸುಟ್ಟುಕೊಂಡು ಸರಕಾರಿ ದವಾಖಾನೆಯಲ್ಲಿ ಇದ್ದಾಗ, ಗಂಡ ಮನೆ ಬಿಟ್ಟು ಹೋದ. ಮತ್ತೆ ಗಂಡ ಮರಳಿ ಬರಲೇ ಇಲ್ಲ....... 3 ರಿಂದ 4 ವರ್ಷಗಳಾದ ಮೇಲೆ ಅವನ ಸಾವಿನ ವಿಷಯ ತಿಳಿದು ಬಂತು.

ನನ್ನ ಹೆಸರು ಬೇಬಿ. ನಾನು ವಿಜಾಪುರ ನಗರದ ಕೊಳಚೆ ನಿವಾಸಿ. ನಾನು ಜನಸಿದ್ದು ಕೂಡಾ ಕೊಳಚೆ ಪ್ರದೇಶದಲ್ಲಿ. ನನ್ನ ತಂದೆ ತಾಯಿಗೆ ನಾವು ಐದು ಜನ ಹೆಣ್ಣುಮಕ್ಕಳು. ನಾನು ನಾಲ್ಕನೆಯವಳು. ನಾನು ಒಂದು ವರ್ಷದವಳಿದ್ದಾಗ ತುಂಬಾ ಜ್ವರ ಬಂದು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಜ್ವರದಲ್ಲಿ ವೈದ್ಯರು ಇಂಜೆಕ್ಷನ್ ಮಾಡಿದ್ದರಿಂದ ಪೋಲಿಯೊ ಆಗಿ ಒಂದು ಕಾಲು ನಡೆಯಲು ಆಗುವುದಿಲ್ಲ. ಚಿಕ್ಕಂದಿನಿಂದ ಹೇಗೊ ಬೆಳೆದು ದೊಡ್ಡವಳಾದೆ, ಆದರೆ ತಂದೆ ತಾಯಿಗೆ ನನ್ನ ಮದುವೆ ಚಿಂತೆ ಕಾಡುತ್ತಿತ್ತು. ನನಗೆ 21ವರ್ಷವಾಗುತ್ತಿದ್ದಾಗ ನಮ್ಮ ಸಂಬಂಧಿಕರೊಬ್ಬರು ಸಿಂದಗಿಯಿಂದ ನನಗಾಗಿ ವರನನ್ನು ಕರೆದುಕೊಂಡು ಬಂದರು. ವರನನ್ನು ನೋಡಿ ತಂದೆ ತಾಯಿ ಒಪ್ಪಿಕೊಂಡು ಮದುವೆ ಮಾಡಿದರು. ಮದುವೆಯಲ್ಲಿ, ಅಡುಗೆ ಮಾಡುವ ಸಾಮಾನುಗಳು ಮತ್ತು ಕುಟುಂಬಕ್ಕೆ ಅವಶ್ಯಕತೆ ಇರುವ ವಸ್ತುಗಳನ್ನು 30 ಸಾವಿರ ರೂಪಾಯಿ ಸಾಲಮಾಡಿ ಕೊಡಿಸಿದರು. ಮದುವೆಯಾಗಿ ಸ್ವಲ್ಪದಿನ ಗಂಡ ಚನ್ನಾಗಿದ್ದ.ಅನಂತರ ಕಾರಣವಿಲ್ಲದೆ ಕಿರುಕುಳು ಕೊಡಲು ಪ್ರಾರಂಭಿಸಿದ. ಅದಕ್ಕೆ ಕಾರಣ ವೇನೆಂಬುದು ಅಕ್ಕ ಪಕ್ಕದವರಿಂದ ಗೊತ್ತಾಗ ತೊಡಗಿತು. ನನ್ನ ಗಂಡ ಮೊದಲೇ ಮದುವೆಯಾಗಿ ಆರು ಜನ ಮಕ್ಕಳನ್ನು ಹೊಂದಿದ್ದ ವಿಷಯ ನೆರೆಹೊರೆಯವರಿಂದ ಗೊತ್ತಾದಾಗ ಗಂಡನಿಗೆ ಕೇಳಿದೆ. ಕೇಳಿದಾಗ "ಹೌದು, ಮದುವೇನೂ ಆಗಿದೀನಿ, ಆರು ಜನ ಮಕ್ಕಳು ಅದಾವೂ, ಏನ್ ಮಾಡ್ಕೊತಿ ಮಾಡ್ಕೊ" ಎಂದು ಕುಡಿದು ಬಂದು ಬೈಯುವುದು, ಹೊಡೆಯುವುದು ಮಾಡುತ್ತಿದ್ದ. ಇಂತಹ ಸಮಯದಲ್ಲಿ ಎರಡು ತಿಂಗಳ ಗರ್ಭಿಣಿಯಾಗಿದ್ದೆ. ಗರ್ಭಿಣಿಯಾಗಿದ್ದ ವಿಷಯ ತಂದೆ ತಾಯಿಗೆ ತಿಳಿದಾಗ, ತಮ್ಮ ಮನೆಗೆ ಕರೆದುಕೊಂಡು ಬಂದರು. ಆಗ ಗಂಡನು ಕೂಡಾ ನನ್ನ ಜೊತೆ ತವರ ಮನೆಗೆ ಬಂದನು.

ಆಗ ನಾನು ನನ್ನ ಗಂಡನ ಮೊದಲನೇ ಮದುವೆ ವಿಷಯ ತಿಳಿಸಿದ. ನನ್ನ ತಂದೆ ತಾಯಿ ನನ್ನ ಗಂಡನಿಗೆ "ಯಾಕೆ ಮೋಸ ಮಾಡಿ ನನ್ನ ಮಗಳಿಗೆ ಮದುವೆ ಮಾಡಿಕೊಂಡೆ" ಎಂದು ಬೈದರು. ತಂದೆ ತಾಯಿ ಬೈದಿದ್ದಕ್ಕೆ ಮನೆಬಿಟ್ಟು ಹೋದವನು ಮತ್ತೆ ಮರಳಿ ಬರಲಿಲ್ಲ. ಈಗ ನನಗೆ ಒಂದು ವರ್ಷದ ಮಗ ಇದ್ದಾನೆ. ಆದರೂ ಗಂಡ ಬಂದು ಮಗನನ್ನು ನೋಡಲಿಲ್ಲ. ಮಗನನ್ನು ನನ್ನ ತಂದೆ ತಾಯಿ ಹತ್ತಿರ ಬಿಟ್ಟು ನನ್ನ ಜೀವನ ಸಾಗಿಸಲು ಹೋಟೆಲಿನಲ್ಲಿ ಕಸ ಮತ್ತು ಪಾತ್ರೆತೊಳೆಯುವ ಕೆಲಸಕ್ಕೆ ಹೋಗುತ್ತೇನೆ. ಈ ಕೆಲಸದಿಂದ ನನ್ನ ಬದುಕನ್ನು ಸಾಗಿಸುತ್ತಿದ್ದೇನೆ.

ಈ ಎರಡು ಪ್ರಕರಣಗಳನ್ನು ಗಮನಿಸಿದಾಗ ಹೆಣ್ಣು ಹೆತ್ತವರಿಗೆ ಭಾರ, ಮದುವೆಯಾದವರಿಗೆ ಕಾಲಿನ ಕಸವಾಗಿಹೋಗಿದ್ದಾಳೆ. ಹೆಣ್ಣಿನ ಜೀವಕ್ಕೆ ಬೆಲೆಯೇ ಇಲ್ಲದಾಗಿದೆ. ಹೆತ್ತವರು ತಮ್ಮ ಜವಾಬ್ದಾರಿಯಿಂದ ಮುಕ್ತರಾಗಬೇಕೆಂದು ಎರಡನೆಯ ಮದುವೆ ಎಂಬುವುದನ್ನು ಲೆಕ್ಕಿಸದೆ ತಮ್ಮ ಮಕ್ಕಳ ಇಷ್ಟ ಕಷ್ಟಗಳನ್ನು ತಿಳಿಯದೆ ಮದುವೆಗೆ ಒಪ್ಪಿಗೆಯನ್ನು ನೀಡುತ್ತಾರೆ. ಕೊಟ್ಟ ಮನೆಯಲ್ಲಿ ತಮ್ಮ ಮಗಳು ಸಂತೋಷದಿಂದ ಇರುವಳೊ, ಇಲ್ಲವೊ ಎಂಬುದನ್ನೂ ಕೂಡಾ ವಿಚಾರಿಸದೆ ಜವಾಬ್ದಾರಿ ಮುಕ್ತರಾಗುತ್ತಾರೆ. ಈ ಸಮಾಜದಲ್ಲಿ ಹೆಣ್ಣು ಬದುಕಬೇಕಾದರೆ ಹೆಣ್ಣಿನ ಜೀವನದಲ್ಲಿ ಪುರುಷನ ಅವಶ್ಯಕತೆ ಇಷ್ಟೊಂದು ಇದೆಯೇ? ಎಂಬ ಪ್ರಶ್ನೆ ಕಾಡುತ್ತದೆ. ಹೆಣ್ಣು ದುಡಿಯಬಲ್ಲಳು, ತನ್ನ ಜೀವನವನ್ನು ಸಾಗಿಸಬಲ್ಲಳು ಆದರೆ ಈ ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣನ್ನು ತನ್ನ ಅಧೀನವಾಗಿ ಬಾಳುವಂತೆ ಮಾಡಿಬಿಟ್ಟಿದೆ. ಹೆಣ್ಣಿಗೆ ಗಂಡ ಎಷ್ಟೇ ಕಷ್ಟಗಳನ್ನು ಕೊಟ್ಟರು ಅದನ್ನು ಸಹಿಸಿಕೊಂಡು ಅವನ ಅಧೀನವಾಗಿ ಬಾಳಲು ಇಚ್ಛಿಸುತ್ತಾಳೆ. ಇದಕ್ಕೆ ಸಾಮಾಜೀಕರಣ ವ್ಯವಸ್ಥೆಯೇ ಕಾರಣವಾಗಿದೆ.

ನಮ್ಮ ಸಮಾಜದಲ್ಲಿ ಒಪ್ಪಿತ ಮೌಲ್ಯವಾಗಿರುವಂತೆ ಗಂಡು ಎಷ್ಟು ಬೇಕಾದರು ಹೆಣ್ಣನ್ನು ಮೋಸ ಮಾಡಿ ಮದುವೆ ಮಾಡಿಕೊಳ್ಳಬಹುದು. ಆದರೆ ಹೆಣ್ಣು ಗಂಡಿನ ಹಾದಿ (ದಾರಿ) ಹಿಡಿದಳೆಂದರೆ ಅವಳನ್ನು ಸಮಾಜದಲ್ಲಿ ಬದುಕಲು ಬಿಡುವುದಿಲ್ಲ. ಸಮಾಜವು ಪುರುಷನಿಗೆ ಎಲ್ಲದರಲ್ಲೂ ಸಮ್ಮತಿಯನ್ನು ನೀಡುತ್ತದೆ. ಒಟ್ಟಾರೆ ಈ ಪುರುಷ ಆಲೋಚನೆಗಳಿಂದ ಕೂಡಿರುವ ಈ ವ್ಯವಸ್ಥೆಯಲ್ಲಿ ಹೆಣ್ಣು ಎಷ್ಟೇ ಆಧುನಿಕತೆಗೆ ತೆರೆದು ಕೊಳ್ಳುತ್ತಿದ್ದಾಳಾದರೂ ಹೆಣ್ಣು ಎಂಬ ಕಾರಣಕ್ಕೆ ಅನುಭವಿಸುತ್ತಿರುವ ನೋವು ಹೇಳಲು ಅಸಾಧ್ಯವಾಗಿದೆ.

ಲಿಂಗದ ಕಾರಣಕ್ಕೆ ಹೆಣ್ಣು ಅನುಭವಿಸುವ ನೋವು ಒಂದು ಕಡೆಗಾದರೆ, ವರ್ಗ ಜಾತಿಗಳಲ್ಲಿ ಹಂಚಿ ಹೋಗಿರುವ ಹೆಣ್ಣು ಅನುಭವಿಸುತ್ತಿರುವ ನೋವು ಸಹ ಕಡಿಮೆಯೇನಲ್ಲ. ಜಾತಿಯನ್ನೇ ಪರಿಗಣಿಸಿ ಹೇಳುವುದಾದರೆ ನಾವು ದಲಿತ ಮತ್ತು ಮಹಿಳಾ ಸಮಸ್ಯೆಯನ್ನು ಸೇರಿಸಿ ಮಾತಾಡುತ್ತೇವೆ. ಆದರೆ ದಲಿತ ಪುರುಷ ವರ್ಗ, ತಮ್ಮ ಹಕ್ಕುಗಳನ್ನು ಪಡೆದುಕೊಳ್ಳುತ್ತಲೇ ತಮ್ಮ ಕರ್ತವ್ಯವನ್ನು ಮರೆಯುತ್ತಿದ್ದಾರೆ. ತಮಗಾದ ಅನ್ಯಾಯದ ವಿರುದ್ಧ ಮಾತಾಡುವ ಇವರು ತಮ್ಮ ಹೆಣ್ಣು ಮಕ್ಕಳಿಗೆ ಅನ್ಯಾಯ ಮಾಡುವುದನ್ನು ಗಮನಿಸಿದರೆ 'ಬೇಲಿಯೆ ಎದ್ದು ಹೊಲ ಮೇದಂತಿದೆ.' ಹಾಗಾದರೆ ಈಗ ಹೊಲದ ಪರಿಸ್ಥಿತಿಯಲ್ಲಿರುವ ದಲಿತ ಹೆಣ್ಣು ಯಾರ ಕಡೆ ನ್ಯಾಯ ಕೇಳಬೇಕು? ಈ ಮೇಲಿನ ಪ್ರಕರಣಗಳು ನಮಗೆ ತಿಳಿದ ಹೆಣ್ಣುಮಕ್ಕಳು ತಾವೇ ಹೇಳಿಕೊಂಡ ಕಥೆಗಳು ಮಾತ್ರ.. ಆದರೆ ಇಂತಹ ಅನೇಕ ಕಥೆಗಳು ನಮ್ಮ ಕಣ್ಣಿಗೆ ಕಾಣದ ಹೆಣ್ಣು ಜೀವಗಳು, ತಮ್ಮ ಮರ್ಯಾದೆಗೆ ಅಂಜಿ ಹೇಳದೆ ಇರುವ ಕಥೆಗಳು ಇನ್ನೆಷ್ಟಿವೆಯೋ......... ❑



ಕಹಾನಿ

■ಶೀತಲ ಭಟ್

ಕಮರ್ಷಿಯಲ್ ಮತ್ತು ಆರ್ಟ್ ಸಿನೆಮಾಗಳೆಂದು ಸಿನೆಮಾಗಳನ್ನು ಪ್ರತ್ಯೇಕಿಸಿ, ಅದದಕ್ಕೆ ಪ್ರತ್ಯೇಕ ಗ್ರಾಮರ್ ಹಾಗೂ ನೋಡುಗ ಸಮುದಾಯವನ್ನು ಸೃಷ್ಟಿಸಿಬಿಟ್ಟಿರುವುದಕ್ಕೆ ಉತ್ತರವಾಗಿ ಕಹಾನಿ ಮೂಡಿ ಬಂದಿದೆ. ಕಮರ್ಷಿಯಲ್ ಚಿತ್ರಗಳ ಎಲ್ಲ ಗಿಮಿಕ್, ಕುತೂಹಲ ಹುಟ್ಟಿಸುವ ತಿರುವುಗಳನ್ನೂ ಇಟ್ಟುಕೊಂಡು ವಿವೇಕದ ಗೆರೆ ದಾಟದ ಚಿತ್ರವನ್ನು ಸುಜಯ್ ಘೋಷ್ ನಿರ್ದೇಶಿಸಿದ್ದಾರೆ.

ಹೆಣ್ಣಿನ ಅಸಹಾಯಕತೆ, ಕೋಮಲತೆಗಳನ್ನೇ ವಿಜೃಂಭಿಸುತ್ತಾ ಬಂದಿರುವ ಈ ಸಿನಿಮಾ ಇತಿಹಾಸದಲ್ಲಿ, ಕೆಲವೇ ಕೆಲವು ವಿಭಿನ್ನವಾಗಿ ನಿಲ್ಲುವ ಚಿತ್ರಗಳಲ್ಲಿ ಕಹಾನಿ ಒಂದು. ಹಾಗೆಂದು ಆಕೆಯನ್ನು ಇದಕ್ಕೆ ಸಂಪೂರ್ಣ ವಿರುದ್ಧವಾಗಿ. ಲೋಹ ಪುರುಷಿಯಾಗಿ ಕೂಡ ಬಿಂಬಿಸದೇ ಆಕೆಯ ಭಾವತೀವ್ರತೆಯನ್ನು, ಜಾಗೃತ ತನ್ಮಯತೆಯನ್ನು ಚಿತ್ರಸುವಲ್ಲಿ ಕಹಾನಿ ಯಶಸ್ವಿಯಾಗಿದೆ.

ವ್ಯಕ್ತಿಗಳು ತಮ್ಮದೇ ಕತೆಗಳನ್ನು ಹುಟ್ಟಿಸುತ್ತಾ, ಕತೆಯೊಳಗೆ ತಾವೇ ಹೊಸ ರೂಪ ಪಡೆಯುತ್ತಾ, ಕೊನೆಗೆ ತಾವೇ ಕತೆಯಾಗುವ, ಮತ್ತೆ ಬೇರೆಯದೇ ವ್ಯಕ್ತಿಯಾಗುವ ಈ ಕಣ್ಣು ಮುಚ್ಚಾಲೆ ಆಟದಲ್ಲಿ ಏಕೈಕ ಮಹಿಳಾ ಪಾತ್ರವಾದ ಚಿತ್ರದ ನಾಯಕ ಮತ್ತು ನಾಯಕಿ ವಿದ್ಯಾಬಾಲನ್, ಯಾರ ಊಹೆಗೂ ನಿಲುಕದ, ಹೆಣ್ಣಿನ ಒಳಲೋಕದ ಸಂಕೀರ್ಣತೆಯನ್ನು ತಮ್ಮ ನಟನೆಯ ಸೂಕ್ಷ್ಮತೆಗಳಲ್ಲಿ ಎತ್ತರಕ್ಕೇರಿಸುತ್ತಾರೆ.

ತನ್ನ ಕಳೆದು ಹೋದ ಗಂಡನನ್ನು ಹುಡುಕುತ್ತಾ ಗರ್ಭಿಣಿ ಹೆಂಗಸೊಬ್ಬಳು ಲಂಡನ್‌ನಿಂದ ಕಲ್ಕತ್ತಾಗೆ ಬರುವುದರೊಂದಿಗೆ ಆರಂಭವಾಗುವ ಕತೆ ಮತ್ತೆ ಮತ್ತೆ ಸತ್ಯ ಅಸತ್ಯಗಳನ್ನು ಅದಲುಬದಲಾಗಿಸಿ ವೀಕ್ಷಕರನ್ನು ಬೆಚ್ಚಿ ಬೀಳಿಸುತ್ತಲೇ ಮುಂದು ವರೆಯುತ್ತದೆ. ವ್ಯವಸ್ಥೆಯಲ್ಲಿನ ಅವ್ಯವಸ್ಥೆ, ಹಿಂಸೆ, ದ್ವೇಷಗಳ ಅನಾವರಣದ ನಡುವೆ ಮಾನವೀಯತೆ ಅಲ್ಲಲ್ಲಿ ಮಾತ್ರ ಇಣುಕು ಹಾಕುತ್ತದೆ. ಇದನ್ನು ನಟರುಗಳು ಜಾಗರೂಕತೆಯಿಂದ ನಿಭಾಯಿಸಿದ್ದಾರೆ.

ನೈತಿಕತೆ ಅನೈತಿಕತೆಗಳ ಬಗ್ಗೆ ಆರಂಭದಲ್ಲೆ ಅಸ್ಪಷ್ಟವಾಗಿ ಮಾತನಾಡುತ್ತ ಹೋಗುವ ಚಿತ್ರ, ಕೊನೆಗೂ ಅದನ್ನು ಕಪ್ಪು ಬಿಳುಪಾಗಿಸದೆ, ಅವುಗಳ ವಿವಿಧ ಆಯಾಮಗಳನ್ನು ಮುಖಾಮುಖಿಯಾಗಿಸಿ, ವ್ಯಕ್ತಿ ಮಟ್ಟದ ಬೇರೆ ಬೇರೆ ವ್ಯಾಖ್ಯಾನವನ್ನು ನೀಡುತ್ತದೆ. ಖಾನ್‌ನಿಗೆ ಹಂತಕರನ್ನು ಯಾವ ಮಾರ್ಗದಲ್ಲಾದರೂ ಹಿಡಿಯುವುದೇ ನೈತಿಕ ಎಂದಾದರೆ, ರಾಣಾನಿಗೆ ಗರ್ಭಿಣಿ ಹೆಂಗಸ ಕನಸು, ಬದುಕು ಕೂಡ ಮುಖ್ಯ ಎಂದೆನಿಸುತ್ತದೆ. ನಾಯಕಿಗೆ ತನ್ನ ಗಂಡನ ಆಸೆ, ಸೇಡುಗಳೇ ಪ್ರಧಾನವಾಗುತ್ತವೆ.

ಕೆಲವು ಕಡೆ ಚಿತ್ರದ ರೊಮಾಂಚಕ ತಿರುವುಗಳ ಕಡೆಗೇ ಹೆಚ್ಚು ಗಮನ ಕೊಟ್ಟಂತೆ ಅನ್ನಿಸುತ್ತದೆ. ಸಾಮಾನ್ಯ ಮಹಿಳೆಯ ಸಾಹಸಗಾಥೆಯನ್ನು ಯಾವತ್ತಿನಂತೆ ದೈವತ್ವಕ್ಕೇರಿಸಿ ಅಥವಾ ಹೋಲಿಸಿ ಸರಳೀಕರಿಸುವ ಪ್ರಯತ್ನವೂ ನಡೆದಿದೆ.

ಆದರೆ ಇತ್ತೀಚಿಗೆ ಮಹಿಳಾ ಕೇಂದ್ರಿತ ಚಿತ್ರಗಳು ಹೆಚ್ಚುತ್ತಿದ್ದರೂ ಪುನಃ ಆಕೆಯ ದೇಹದ ಮೇಲೇ ಗಮನ ಸೆಳೆದು ದುಡ್ಡು ಮಾಡಲು ಪ್ರಯತ್ನಿಸುವ ಚಿತ್ರಗಳ ನಡುವೆ ಭಿನ್ನ ಪ್ರಯತ್ನವಿದು. ❑



ಹೆಣ್ಣು ಮತ್ತು ಹತ್ಯೆ

■ಚಂದ್ರಿಕಾ ಪಿ.

'ಕವಿರತ್ನ ಕಾಳಿದಾಸ' ನಾನು ಬಹುಶಃ ಆರನೇ ಕ್ಲಾಸಿನಲ್ಲಿದ್ದಾಗ ನೋಡಿದ ಸಿನೆಮಾ. ಅದರಲ್ಲಿ ಒಬ್ಬ ವೇಶ್ಯೆ ಬಿಡಿಸಲು ಕಠಿಣವಾದ ಪ್ರಶ್ನೆಯೊಂದಕ್ಕೆ ಉತ್ತರವನ್ನ ಹೇಳ್ತಾಳೆ. ಅದರ ಹಿಂದಿನಕಥೆಯೆ ಬೇರೆ. ಆದರೆ ಅಲ್ಲಿ ಯಾರು ಪ್ರಶ್ನೆಯನ್ನು ಹಾಕಿರುತ್ತಾನೋ ಅವನು ಹೇಳುವ ಮಾತು ಮಾತ್ರ ಇನ್ನೂ ನನಗೆ ನೆನಪಿದೆ. ಇಂಥಾ ಕಠಿಣವಾದ ಪ್ರಶ್ನೆಗೆ ಒಬ್ಬ ಹೆಣ್ಣು ಅದರಲ್ಲೂ ವೇಶ್ಯೆ ಉತ್ತರ ಹೇಳುತ್ತಾಳೆಂದರೆ ನಂಬಲಸಾಧ್ಯವಾದ್ದು ಎನ್ನುತ್ತಾನೆ. ಈ ಮಾತು ಯಾಕೆ ಅಷ್ಟು ಸಣ್ಣ ವಯಸ್ಸಿನಲ್ಲೆ ನನ್ನ ಮನಸ್ಸಿನಲ್ಲಿ ಕೂತು ಬಿಟ್ಟಿತು ಎಂದು ಗೊತ್ತಿಲ್ಲ. ಕಿತ್ತೂರು ಚೆನ್ನಮ್ಮ, ಶಾರದಾದೇವಿ, ಮದರ್ ತೆರೇಸಾ ಹೀಗೆ ಅನೇಕ ತ್ಯಾಗಮಯೀ ಹೆಣ್ಣುಗಳನ್ನ ಮನಸ್ಸಿನಲ್ಲಿ ತುಂಬಿಕೊಳ್ಳುತ್ತಿದ್ದ ಕಾಲದಲ್ಲಿ ಇಂಥಾ ಒಂದು ಡೈಲಾಗ್ ನನ್ನ ತಲೆಯನ್ನ ಹೊಕ್ಕಿದ್ದರಲ್ಲಿ ನನ್ನ ಒಳಗೆ ಇದ್ದ ಅಚ್ಚರಿಯೂ ಕೂಡಾ ಕಾರಣವಾಗಿತ್ತು ಅನ್ನಿಸುತ್ತದೆ. ಆದರೆ ಅನಾದಿ ಕಾಲದಿಂದಲೂ ಸಮಾಜ ಮತ್ತು ನಮ್ಮ ಸಂಸ್ಕೃತಿಗಳು ಹೆಣ್ಣು ಎನ್ನುವ ಅಚಿಂತ್ಯವಾದ ಭಾವಕ್ಕೆ ಏನೆಲ್ಲಾ ವೇಶವನ್ನು ತೊಡಿಸುವ ಪ್ರಯತ್ನ ಮಾಡಿತ್ತು ಎನ್ನುವುದು ನಿಜಕ್ಕೂ ಖೇದದ ಸಂಗತಿಯೆ

ಜೀವ ಸಂಕುಲದ ಉಗಮದಲ್ಲಿ ಅಭಿವೃದ್ದಿಯಲ್ಲಿ ಹೆಣ್ಣು ಪ್ರಮುಖ ಪಾತ್ರ ವಹಿಸುತ್ತಿರುವುದು ತಿಳಿದಿರುವ ಸಂಗತಿ. ಹೆಣ್ಣು ಇಲ್ಲ ಎಂದರೆ ಜೀವಾಭಿವೃದ್ಧಿ ಎನ್ನುವುದೇ ಇಲ್ಲವಾಗಿ ಎಷ್ಟೋ ಜೀವ ಸಂತತಿಗಳೇ ಅಳಿದು ಹೋಗುತ್ತಿದ್ದವು. ಮಾನವನ ನಾಗರೀಕತೆಯ ಅಸ್ಥಿತ್ವದಲ್ಲಿ ಹೆಣ್ಣಿನ ಪಾತ್ರ ಎನ್ನುವುದು ಮಹತ್ವದ್ದು ಎಂದೆ ನಿರ್ಧರಿಸಿ ಮಾತೃ ಆರಾಧನೆಯ ಪದ್ಧತಿಯೂ ಜಾರಿಗೆ ಬಂದವು. ಋಗ್ವೇದ ಕಾಲದಲ್ಲಿ ಹೆಣ್ಣು ಗಂಡು ಎನ್ನುವ ಬೇಧವೇ ಇಲ್ಲದೆ ವಿಚಾರಗೋಷ್ಟಿ, ಯಾಗ ಯಜ್ಞ, ತಪಸ್ಸು ನಡೆಯುತ್ತಿದ್ದುದರ ಬಗ್ಗೆ ನಮಗೆ ಉಲ್ಲೇಖಗಳು ಸಿಗುತ್ತವೆ. ಸಿಂಧೂ ಬಯಲಿನ ನಾತರೀಕತೆಯ ಸ್ತ್ರೀ ಆರಾಧನೆ ಮತ್ತು ಶಿವಲಿಂಗ ಕಲ್ಪನೆಯಲ್ಲಿ ಸ್ತ್ರೀ ಪ್ರಾಮುಖ್ಯತೆಯನ್ನು ನೋಡಬಹುದಾಗಿದೆ

ನಂತರ ಕಾಲದಲ್ಲಿ ಅವಳ ಪ್ರಾಬಲ್ಯವನ್ನ ಕೆಳಕ್ಕೆ ತಳ್ಳಿ ಅವಳನ್ನು ಎರಡನೆ ದರ್ಜೆಯ ಮತ್ತು ಪುರುಷನ ಜೊತೆ ಮಾತ್ರ ಅಸ್ಥಿತ್ವ ಪಡೆವ ಮಟ್ಟಕ್ಕೆ ಅವಳನ್ನು ತರಲಾಯಿತು ಎನ್ನುವುದು ಇತಿಹಾಸದ ಬೆಳವಣಿಗೆಯಲ್ಲಿ ಎಲ್ಲರೂ ಓದಿದ್ದೇವೆ. ಗಂಡನಿಲ್ಲದೆ ಅವಳಿಗೆ ಬದುಕುವ ಹಕ್ಕೇ ಇಲ್ಲ ಎಂದು ಸತಿ ಕಳಿಸಿದ ಇದೇ ಸಮಾಜ ಹೆಣ್ಣಿನ ಸ್ಥಾನಮಾನವನ್ನು ನಿಧಾನಕ್ಕೆ ಇಳಿಸುತ್ತಲೇ ಬಂದಿತು. ಗಂಡನ್ನು ಆಳುವ ಮತ್ತು ಹೆಣ್ಣನ್ನು ಆಳಿಸಿಕೊಳ್ಳುವ ಪರಿಕಲ್ಪನೆಯಲ್ಲಿ ನೋಡುವ ಪರಿಪಾಠ ಆರಂಭವಾಯಿತು.

ನಮ್ಮವಿಧ್ಯಾಭ್ಯಾಸದ ಅರಿವು, ಅದರಿಂದ ಮೂಡಿದ ಪ್ರಜ್ಞೆ, ಅವಳಿಗೆ ಸಿಕ್ಕಿರುವ ರಾಜಕೀಯ ಸ್ಥಾನ ಮಾನ ಎಲ್ಲವೂ ಹೆಣ್ಣಿನ ಸ್ಥಾನಮಾನವನ್ನು ಹೆಚ್ಚಿಸುತ್ತದೆಯೇ ಎಂದರೆ ಉತ್ತರ ನಿರಾಶಾದಾಯಕವಾಗಿಯೇ ಇದೆ. ಹೆಣ್ಣು ಎನ್ನುವುದನ್ನ ಒಂದು ಪ್ರಜ್ಞೆ ಎಂದು ನೋಡಲಾಗದ ಸಮಾಜ ಅವಳನ್ನ ಪುರುಷನ ಅವಶ್ಯಕತೆಯಲಿ ಒಂದು ಎಂದೇ ನಿರ್ಧರಿಸಿದೆ. ಇದೇ ಕಾರಣಕ್ಕೆ ಹೆಣ್ಣು ನಿರಂತರ ಶೋಷಣೆಗೆ ಒಳಗಾಗುತ್ತಲೆ ಇದ್ದಾಳೆ.

ಸ್ತ್ರೀ ಹತ್ಯೆ ಮಹಾ ಪಾಪ ಎನ್ನುವುದನ್ನು ಹೇಳುವ ಭಾರತೀಯ ಸಮಾಜದಲ್ಲಿ ಸ್ತ್ರೀ ಶಿಶು ಹತ್ಯೆ ಎನ್ನುವುದು ಬಹಳ ಹಿಂದಿನಿಂದಲೂ ಇದ್ದೇ ಇತ್ತು. ಬಹುಶಃ ಮಧ್ಯ ಕಾಲೀನ ಸಮಾಜದಲ್ಲಿ ಇದು ಅತಿಯ ಮಟ್ಟವನ್ನೂ ಮುಟ್ಟಿತೆನ್ನಬಹುದು. ಇದರ ಹಿಂದೆ ಬಹುದೊಡ್ಡ ತರ್ಕವೇ ಇದೆ. ಆತ್ಮಕ್ಕೆ ಹೆಣ್ಣು ಅಥವಾ ಗಂಡು ಎನ್ನುವ ಬೇಧ ಇಲ್ಲ ಎನ್ನುವ ನಮ್ಮ ಆಧ್ಯಾತ್ಮ ನೆಲೆಗಳು ಹೆಣ್ಣಿಗೆ ಮುಕ್ತಿ ಇಲ್ಲ, ಮುಕ್ತಿ ಪಡೆಯಲು ಗಂಡಾಗೇ ಹುಟ್ಟ ಬೇಕು ಎನ್ನುವುದನ್ನ ಒತ್ತಿ ಹೇಳುತ್ತದೆ. ಗಂಡು ಮಾತ್ರ ಮೋಕ್ಷಕ್ಕೆ, ಮುಕ್ತಿಯ ಮಾರ್ಗವನ್ನು ನಿರ್ದೇಶಿಸಲು ಸಾಧ್ಯ ಎನ್ನುವುದನ್ನು ಬಲವಾಗಿ ನಂಬಿದ ಈ ಸಮಾಜ ಆರಂಭದಿಂದಲೂ ಗಂಡಿಗೆ ಪ್ರಾಧಾನ್ಯತೆಯನ್ನು ಕೊಡುತ್ತಲೇ ಬಂತು. ಬರಿಯ ಹಿಂದೂ ಧರ್ಮ ಮಾತ್ರವಲ್ಲ, ಅದರಿಂದ ಸಿಡಿದೆದ್ದ ಜೈನ ಧರ್ಮ ಕೂಡಾ ಇದನ್ನೇ ಹೇಳುತ್ತಾ ಬಂದಿತು. ಮುಸ್ಲಿಮರಲ್ಲೂ ಇದಕ್ಕಿಂತ ಬೇರೆಯಾದ ಸ್ಥಿತಿ ಇಲ್ಲ.

ಇಂಥಾ ನೆಲೆಗಳಲ್ಲಿ ರೂಪುಗೊಂಡ ನಮ್ಮ ಮನಃಸ್ಥಿತಿ ಹೆಣ್ಣು ಭ್ರೂಣ ಹತ್ಯೆಗೆ ಸಿದ್ಧವಾಯಿತು. ಇನ್ನೂ ಭೂಮಿಗೆ ಬರದ ಮುಗ್ಧ ಕಂದಮ್ಮಗಳ ಮಾರಣ ಹೋಮ ನಿರಂತರವಾಗಿ ನಡೆಯಿತು. ಇದಕ್ಕೆ ಸಾಕ್ಷಿಯಾಗಿ ಮೋರಿಗಳಲ್ಲಿ ಇಂದಿಗೂ ದೊರಕುತ್ತಿರುವ ಹೆಣ್ಣು ಕಂದಮ್ಮಗಳ ಶವಗಳೇ ಸಾಕ್ಷೀ. ನನಗೆ ಮುಕ್ತಿಯನ್ನು ಕರುಣಿಸುವ ಗಂಡುಮಗು ಬೇಕು ಎನ್ನುವ ಹಟಕ್ಕೆ ಬಿದ್ದು ಇನ್ನೂ ಅರಳಬೇಕಿದ್ದ ಎಷ್ಟೋ ಕಂದಮ್ಮಗಳು ಕಣ್ಮುಚ್ಚಿದ್ದರಿಂದ ಗಂಡು ಹೆಣ್ಣಿನ ಅನುಮಾತದಲ್ಲಿ ಇರಬೇಕಾದ ಪ್ರಮಾಣ ಏರುಪೇರಾಯಿತು.

ನಮ್ಮ ಸಂವಿಧಾನ ಎಷ್ಟೋ ರಕ್ಷಣೆಯನ್ನು ಹೆಣ್ಣಿಗೆ ಒದಗಿಸಿಕೊಟ್ಟರೂ ತೆರೆಮರೆಯಲ್ಲಿ ಸ್ತ್ರೀಶಿಶು ಹತ್ಯೆ ಎನ್ನುವುದು ನಿರಂತರವಾಗಿ ನಡೆಯುತ್ತಲೇ ಬಂದಿದೆ. ಲಿಂಗ ಸಮಾನತೆಯು ಈ ಹೊತ್ತಿಗೂ ಚಲಾವಣೆಯಲ್ಲಿ ಬಂದಿಲ್ಲ. ಹೆಣ್ಣಿನ ಬುದ್ಧಿವಂತಿಕೆಯ ಬಗ್ಗೆ ಅನುಮಾನಗಳು ಗಂಡಿನಲ್ಲಿ ಇದ್ದೇ ಇದೆ. ಎಲ್ಲಾಕ್ಕಿಂತ ಹೆಚ್ಚಾಗಿ ಗಂಡನ್ನ ಆಧರಿಸಿಯೇ ಇರಬೇಕಾದ ಸ್ಥಿತಿಯನ್ನು ತಾನೇ ಸೃಷ್ಟಿಸಿದ ಪುರುಷ ಅವಳನ್ನ ಹೊರೆ ಎಂದೇ ನೋಡಲಾರಂಭಿಸದ. ಹೀಗೆ ಹೊರೆಯಾದ ಹೆಣ್ಣನ್ನು ತನಗೆ ಬೇಕಿದ್ದರೆ ಉಳಿಸಿಕೊಳ್ಳುವ ಇಲ್ಲದಿದ್ದರೆ ಸಾಯಿಸುವ ಹಕ್ಕೂ ತನಗೇ

ಇದೆಯೆಂದು ಭಾವಿಸಿದ. ಹೀಗೆ ಭಾವಿಸಿದ ಪರಿಣಾಮವೇ ನಾವೆಲ್ಲಾ ದಂಗಾಗಿ ನೋಡಿದ ನೇಹಾ ಅಫ್ರಿನ್ ಅಂಥಾ ಮುಗ್ಧ ಮಗುವಿನ ಹತ್ಯೆ. ನಾಳಿನ ಭವಿಷ್ಯದ ಕಗ್ಗೊಲೆ

ನೇಹಾಳ ಸಾವನ್ನ ಒಂದು ಪ್ರಕರಣ ಅಂತ ಮಾತ್ರ ತೆಗೆದುಕೊಳ್ಳಲು ಸಾಧ್ಯವಿಲ್ಲ. ಗಂಡು ಅಹಮಿಕೆಯಲ್ಲಿ ಕಮರಿ ಹೋದ ಎಷ್ಟೋ ಜನರಲ್ಲಿ ಇದೂ ಒಂದು ಎಂದು ಪರಿಗಣಿಸಲು ಸಾಧ್ಯವಿಲ್ಲ. ಯಾಕೆಂದರೆ ಇದು ಅನುಮಾನ ದಿಂದ ಹೆಂಡತಿಯನ್ನು ಕೊಂದ ಗಂಡಿನ ಕಥೆ ಅಲ್ಲ. ಬದುಕುವ ಹಕ್ಕು ತನಗೂ ಇದೆ ಎಂದು ಬೇರೆ ಜಾತಿ ಹುಡುಗನ ಜೊತೆ ಹೋಗಿ ಮನೆಯ ಮರ್ಯಾದೆಯನ್ನು ಕಳೆದಿದ್ದರಿಂದ ಮರ್ಯಾದಾ ಹತ್ಯೆಗೀಡಾದ ಬೆಳೆದ ಹೆಣ್ಣಿನ ಕಥೆ ಕೂಡಾ ಅಲ್ಲ. ಏನೂ ಅರಿಯದ ಹಸುಕಂದಮ್ಮ ಹೆಣ್ಣಾಗಿ ಹುಟ್ಟಿದ್ದೇ ತಪ್ಪು ಎನ್ನುವ ಕಾರಣಕ್ಕೆ ಅಕಾರಣವಾದ ದೌರ್ಜನ್ಯಕ್ಕೆ ನಲುಗಿ ತನ್ನ ಜೀವವನ್ನೇ ತೆತ್ತ ಬಹು ದೊಡ್ಡ ನೋವಿನ ಕಥೆ. ತಾನೇ ಜಗತ್ತಿಗೆ ಕೈಹಿಡಿದು ಕರೆತಂದ ತಂದೆ ತನ್ನ ಹಕ್ಕು ಎನ್ನುವಂತೆ ಕೊಂದಿದ್ದು. 'ನಾಳೆ ನಾನು ಹೇಳಿದ ಹಾಗೆ ಇವಳು ಕೇಳಲ್ಲ ಅದಕ್ಕೆ ಇವಳು ಇರಬಾರದು' ಎನ್ನುವ ಆ ತಂದೆಯ ಧೋರಣೆ ನಿಜಕ್ಕೂ ಆಘಾತಕಾರಿಯಾದ್ದು.

ಉತ್ತರ ಭಾರತದಲ್ಲಿ ಜಮೀನ್ದಾರೀ ಪದ್ಧತಿ ಜಾರಿ ಯಲ್ಲಿರುವ ಹಾಗೂ ದಕ್ಷಿಣ ಭಾರತದ ಕೆಲ ಪ್ರದೇಶಗಳಲ್ಲಿ ಇಂದಿಗೂ ಸ್ತ್ರೀ ಹತ್ಯೆ ಸಾಮಾನ್ಯವಾಗಿದೆ. ಪ್ರತಿಭಟಿಸಲೇ ಸಾಧ್ಯವಾಗದ ಸ್ಥಿತಿಯಲ್ಲಿ ಹೆಣ್ಣನ್ನು ಇರಿಸುವುದಲ್ಲದೆ ಪ್ರತಿಭಟಿಸುವ ಹೆಣ್ಣನ್ನು ಸಮಾಜವೇ ತಿರಸ್ಕಾರದಿಂದ ನೋಡುತ್ತದೆ. ಇದನ್ನೆಲ್ಲಾ ಹಾದಿರಂಪ ಮಾಡಿಕೊಳ್ಳಬೇಕೇ? ಮನೆಯ ಗುಟ್ಟು ಮನೆಯಲ್ಲೇ ಇರಬೇಕು ಎನ್ನುವುದು ಹೆಣ್ಣಿಗೆ ನೀಡುವ ಉಪದೇಶದ ಮಾತುಗಳಾಗಿವೆ.

ಮನೆಯಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳ ನಡುವೆ ಇರುವ ತಾರತಮ್ಯದ ಭಾವವನ್ನು ಮಾನಸಿಕ ಹಿಂಸೆಯ ಬಹುದೊಡ್ಡ ಮಜಲು ಎಂದೇ ಭಾವಿಸಲಾಗಿರುವ ಈ ಹೊತ್ತಿನಲ್ಲಿ ಇಂಥಾ ಹತ್ಯೆಗಳು ನಮ್ಮಲ್ಲಿ ದಿಗ್ಭ್ರಮೆಯನ್ನು ಮೂಡಿಸುತ್ತದೆ. ಬದಲಾಗುತ್ತಿರುವ ಈ ಸಮಾಜದಲ್ಲಿ ಇನ್ನೂ ಉಳಿದಿರುವ ಸ್ತ್ರೀ ಬಗ್ಗೆಗಿನ ಧೋರಣೆಗಳು, ಸಣ್ಣ ಕಾರಣಕ್ಕಾಗಿ ಹೆಣ್ಣನ್ನ ಹಿಂಸೆಗೊಳ ಮಾಡುತ್ತಲೆ ಬಂದಿದೆ. ಸರಕಾರದ ಯಾವ ಸಬಲೀಕರಣ ಯೋಜನೆಯೂ ನಾಲ್ಕು ಗೋಡೆಯ ಒಳಗೆ ಕೆಲಸಕ್ಕೆ ಬರುತ್ತಿಲ್ಲ. ಮೂರು ತಿಂಗಳ ಮಗುವಿನ ಮೇಲೆ ಅತ್ಯಾಚಾರ ಮಾಡುವ ವಿಕೃತ ಮನಸ್ಸಿಗೆ ಕಾರಣ ಏನು ಎಂದು ಯೋಚಿಸಿದರೆ ಮನಸ್ಸು ಮುದುರಿ ಹೋಗುತ್ತದೆ. ಪುರುಷನ ನಿರಂತರ ದಾಹಕ್ಕೆ ಬಲಿಯಾಗುವ ಪುಟ್ಟ ಬಾಲಕಿಯರ ಭವಿಷ್ಯ ನೆನೆದರೆ ಮನಸ್ಸು ಕುಗ್ಗಿ ಹೋಗುತ್ತದೆ. ಹೆಣ್ಣು ಅಂದರೆ ಬಯಕೆಗೆ ಆಹಾರವಾಗುವ ವಸ್ತುವಲ್ಲ. ಅವಳ ಜೀವನ ಯಾರ ಕೈಲೋ ಇಲ್ಲ. ಅದನ್ನ ಈ ಸಮಾಜ ಅರ್ಥ ಮಾಡಿಕೊಳ್ಳಬೇಕಿದೆ.

❑



ಗರ್ಭಪಾತ


ಒಂದಿಷ್ಟು ಸಿರಿಂಜು
ಮಾತ್ರೆ
ಗ್ಲೌಸು ತೊಟ್ಟ ಕೈಗಳು
ಗರ್ಭದ ಒಳಗನ್ನು ತಡಕುವಾಗ
ಅಳು ನಗು ಏನೂ ಅರಿಯದ
ಚುಕ್ಕಿಯಾದ ಚುಕ್ಕಿ
ಹಾಗೆ ಹೊಳಪು ಕಳೆದುಕೊಳ್ಳುತ್ತದೆ

ಮೋಡಗಳು ಆಕಾಶದಲ್ಲಿ ಅಡ್ಡಗಟ್ಟಿ
ಧೋ ಎಂದು ಸುರಿದ ಮಳೆಗೆ
ಮೊಳಕೆ ಮೂಡಿದ್ದ ಬತ್ತಕ್ಕೆ ಈಗ ಆಯಾಸ

ಕತ್ತಲಲ್ಲಿ ಹತ್ತದ ದೀಪ
ದೂರದಲ್ಲಿ ಉರಿವ ಕೊಳ್ಳಿಯ ಅಸ್ಪಷ್ಟ ಜ್ವಾಲೆ

ಹೇಳಬೇಕಾಗಿದೆ
ಈ ರಾತ್ರ ಕಳೆದರೆ ಒಡಲಲ್ಲೇ ಸದ್ದಿಲ್ಲದೆ
ಆರಿ ಹೋಗುವ ಲಕ್ಷಾಂತರ ಕಂದಮ್ಮಗಳ ಕಥೆಯ

ಪುಟ್ಟ ಹೆಜ್ಜೆಯ ಗುರುತು
ಕೆನ್ನೆ ಸವರುವ ಮೃದು ಕೈ
ಅಲೌಕಿಕವಾದ ಒಡಲಿಂದ ಜಾರಿ
ಮತ್ತೆ ಮಿಥುನಕ್ಕೆ ತೆರೆಯುತ್ತದೆ
ಪುಟ್ಟ ಕೈಗಳ ಚಾಚಿ ನನಗೆ ಬಳೆ ತೊಡಿಸು ಎನ್ನುತ್ತದೆ
ಮಗು ಕನಸಿನಲ್ಲಿ.



ಭ್ರಷ್ಟಚಾರಿಗಳಿಗೆ ಮೌನ ಬಹಿಷ್ಕಾರ

■ ಹೇಮಲತಾ.ಎಚ್.ಎಮ್

ಭ್ರಷ್ಟಚಾರದ ಹಗರಣ, ಪ್ರಕರಣಗಳನ್ನು ಕೇಳುತ್ತಿರುವಾಗ, ನೋಡುತ್ತಿರುವಾಗ ನನ್ನ ಮನಸ್ಸು ಇದಕ್ಕೆ ಕಾರಣ ಹಾಗೂ ಪರಿಹಾರಗಳನ್ನು ಹುಡುಕುತ್ತಾ ಚಿಂತಿಸುತ್ತಿರುತ್ತದೆ. ಅದನ್ನು ಒಂದು ಚೌಕಟ್ಟಿಗೆ ತಂದು ಇತರರೊಂದಿಗೆ ಹಂಚಿಕೊಳ್ಳಲು ಇಚ್ಚಿಸುತ್ತೇನೆ.

ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುವ ಕಾರಣಗಳನ್ನು ಹುಡುಕಿದರೆ ಮಾನವರ ಮೂಲ ಪ್ರವೃತ್ತಿ, ನಮ್ಮ ಸಾಮಾಜಿಕ, ಆರ್ಥಿಕ, ರಾಜಕೀಯ ವ್ಯವಸ್ಥೆಗಳಲ್ಲಿ ಕಾಣಬಹುದು. ಕೆಲವು ಮನುಷ್ಯರಲ್ಲಿ ಕಂಡುಬರುವ ದುರಾಸೆ, ಅತಿಯಾದ ಮಹಾತ್ವಾಕಾಂಕ್ಷೆ, ಶ್ರೇಷ್ಠತಾ ಮನೋಭಾವ, ಮೇಲರಿಮೆ, ಅಧಿಕಾರ ಲಾಲಸೆ, ಬುದ್ಧಿವಂತಿಕೆಯ ಪ್ರದರ್ಶನ, ಸ್ವಕೇಂದ್ರಿತ ನಿಲವು, ಇತರರನ್ನು ಕೀಳಾಗಿ ನೋಡುವುದು, ಇತರರಿಂದ ತಮ್ಮನ್ನು ಭಿನ್ನವಾಗಿಸಿಕೊಳ್ಳುವುದು ಮುಂತಾದ ಗುಣಗಳು ಭ್ರಷ್ಟಾಚಾರಕ್ಕೆ ಈಡು ಮಾಡಿಕೊಳ್ಳುತ್ತವೆ.

ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಭೌದ್ಧಿಕ ಕೆಲಸಗಳಿಗೆ ಅತಿಯಾದ ಮಹತ್ವ ನೀಡಿ ಅದಕ್ಕೆ ಹೆಚ್ಚಿನ ಸಂಭಾವನೆ ನೀಡುವುದನ್ನು ಕಾಣುತ್ತೇವೆ. ಕೆಲಸಗಳನ್ನು ಕೀಳಾಗಿಸಿ ಅತಿ ಕಡಿಮೆ ಸಂಭಾವನೆ ನೀಡುವುದನ್ನು ಕಾಣುತ್ತೇವೆ. ಕೆಲಸಗಳ ಮೌಲ್ಯಮಾಪನದಲ್ಲಿ ಅಂತರವಿರಬೇಕು ನಿಜ ಅದರೆ ಅದು ಸಂಪತ್ತಿನ ಸಂಗ್ರಹಕ್ಕೆ ದಾರಿ ಮಾಡಿಕೊಟ್ಟು ಶ್ರೀಮಂತರು ಇನ್ನು ಹೆಚ್ಚು ಶ್ರೀಮಂತರಾಗುವುದು, ಬಡವರು ಬಡವರಾಗಿಯೇ ಉಳಿಯುವಂತಾಗಬಾರದು. ಸಂಘಟಿತ ವಲಯದಲ್ಲಿ ಉನ್ನತ ಅಧಿಕಾರಿಗಳ ಹಾಗೂ ಇತರ ಹಂತಗಳ ನೌಕರರ ವೇತನದಲ್ಲಿ, ಖಾಯಂ ಹಾಗೂ ತಾತ್ಕಲಿಕ ಹುದ್ದೆಗಳಲ್ಲಿ ದುಡಿಯುತ್ತಿರುವವರ ವೇತನದಲ್ಲೂ ಅಪಾರವಾದ ಅಂತರವಿದೆ. ಇಲ್ಲಿ ಬೆಲೆ ಏರಿಕೆಗೆ ತಕ್ಕಂತೆ ವೇತನ ಹೆಚ್ಚಾದಷ್ಟು ಆದಾಯ, ಸಂಪತ್ತು ಇಲ್ಲದವರು ಹೇಗಾದರೂ ಅವುಗಳನ್ನು ಪಡೆಯಲು ಪ್ರಯತ್ನಿಸುತ್ತಾ ಭ್ರಷ್ಟಾಚಾರದ ಕಡೆ ವಾಲುತ್ತಾರೆ. ಇರುವವರು ಅದನ್ನು ಉಳಿಸಿಕೊಳ್ಳಲು ಕಾಪಾಡಿಕೊಳ್ಳಲು ಜೊತೆಗೆ ತಮ್ಮ ಮುಂದಿನ ಪೀಳಿಗೆಗೂ ಸಂಗ್ರಹಿಸಿಡಲು ಭ್ರಷ್ಟರಾಗುತ್ತಾರೆ.

ಶ್ರೀಮಂತರು, ಅಧಿಕಾರಿಗಳು, ರಾಜಕಾರಣಿಗಳು ಉದ್ಯಮಿಗಳು, ಚಿತ್ರತಾರೆಯರು, ಕಾರ್ಪೊರೇಟ್ ವಲಯದ ನೌಕರರು ನಡೆಸುವ ಜೀವನ ಶೈಲಿ, ಹಣ ಖರ್ಚುಮಾಡುವ ರೀತಿ, ಐಷರಾಮ ಜೀವನ ಇತರ ಜನರಿಗೆ ಮಾದರಿಯಾಗಿರುತ್ತಿವೆ. ಇವರನ್ನು ಅನುಸರಿಸಲು ಸಾಕಷ್ಟು ಹಣ ಸಂಪತ್ತು ಬೇಕು. ಇದನ್ನು ಸಂಗ್ರಹಿಸಲು ಜನ ತಪ್ಪು ದಾರಿಗಳನ್ನು ಹಿಡಿಯುತ್ತಾರೆ. ಕಳೆದೆರಡು ದಶಕಗಳಿಂದ ಜಾಗತೀಕರಣ ಹಾಗೂ ಪಾಶ್ಚಿಮಾತೀಕರಣದ ಪ್ರಭಾವದಿಂದ ನಮ್ಮ ಜನರ ಮನೋಭಾವ ಜೀವನದ ಉದ್ದೇಶ, ಜೀವನ ಶೈಲಿ, ಎಲ್ಲವೂ ಬದಲಾಗುತ್ತಿವೆ. ಅದರಲ್ಲೂ ಕೊಳ್ಳಬೇಕ ಸಂಸ್ಕೃತಿ ಪರಿಸರ ನಾಶ ಮಾಡುತ್ತಿರುವುದರ ಜೊತೆಗೆ ಮಾನವ ಸಂಬಂಧ, ಸಹಕಾರ ಮನೋಭಾವ ನಿಸ್ವಾರ್ಥ ಜೀವನ ಹಾಗೂಇತರ ಮೌಲ್ಯಗಳನ್ನು ಹಾಳುಗೆಡುತ್ತಿವೆ. ಶ್ರಮವಿಲ್ಲದೇ ಸುಲಭವಾಗಿ ಹಣ ಸಂಪಾದಿಸುವುದೇ ಜೀವನದ ಗುರಿಯಾಗುತ್ತಿದೆ. ಜನರು ಹೇಗಾದರೂ ಸಂಪತ್ತನ್ನುಗಳಿಸಲಿ ಅದರ ಬಗ್ಗೆ ಯಾರು ತಲೆಕೆಡಿಸಿಕೊಳ್ಳುವುದಿಲ್ಲ. ಅವರ ಶ್ರೀಮಂತಿಕೆಗೆ ಮಾರು ಹೋಗಿ ಗೌರವಿಸುತ್ತಾರೆ ಅಷ್ಟೊಂದು ಗೌರವ ಮನ್ನಣೆ ಸಿಗುವುದಾದರೆ ತಪ್ಪುದಾರಿಯಾದರೂ ಸರಿ ಯಾಕೆ ಸಂಪತ್ತು ಸಂಗ್ರಹಿಸಬಾರದು ಅಂತ ಅನಿಸುತ್ತದೆಯೇನೋ?

ಹೀಗೆ ಇನ್ನೂ ಅನೇಕ ಕಾರಣಗಳಿಂದ ಭ್ರಷ್ಟಾಚಾರ ಅನ್ನುವುದು ತಳ ಮಟ್ಟದಿಂದ ಹಿಡಿದು ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದ ವರೆಗೂ ಹಬ್ಬಿದೆ. ಇದನ್ನು ನಿವಾರಿಸಲು ಜಾರಿಗೆ ತರಲು ಸಾಧ್ಯವಿರುವ ಕೇಂದ್ರ ಸೂಚನೆಗಳನ್ನು ಗುರುತಿಸಬಹುದು. ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ತೊಡೆದು ಹಾಕಲು ಸಾಧ್ಯವಿಲ್ಲ. ಆದರೆ ಅದನ್ನು ಕಡಿಮೆ ಮಾಡಿ ಅದರಿಂದ ಉಂಟಾಗುವ ಅನಾಹುತಗಳ ತೀವ್ರತೆಯನ್ನು ಕಡಿಮೆ ಮಾಡಬಹುದು. ನಮಗೆ ಅನುಕೂಲವಾಗುವವರೆಗೆ ನಮ್ಮ ಕೆಲಸ ವಾಗುವವರೆಗೆ ತೊಂದರೆ ಅಡ್ಡಿಗಳನ್ನು ನಿವಾರಿಸಿಕೊಳ್ಳಲು, ನಮಗೆ ಕೊಡಲು ಸಮರ್ಥ್ಯವಿರುವವರೆಗೆ ಲಂಚವನ್ನು ಒಪ್ಪಿಕೊಳ್ಳುತ್ತೇವೆ. ಉದಾ: ನಮ್ಮ ಕೆಲಸವೊಂದು ಕಾನೂನಿನ ಚೌಕಟ್ಟಿನಲ್ಲೇ ಆಗಬಹುದಾಗಿರುತ್ತದೆ. ಆದರೆ ಲಂಚಕೊಟ್ಟರೆ ಬೇಗ ಆಗುತ್ತದೆ. ಕೊಡದಿದ್ದರೆ ಆಗದೆಯಿರ ಬಹುದು ಎಂದಾದರೆ ಅಥವಾ ಲಂಚಕೊಡುವುದರಿಂದ ಕೆಲಸವಾಗಿ ಅದು ನಮಗೆ ಹೆಚ್ಚು ಲಾಭತರುವುದುದಾದರೆ ಯಾಕೆ ಲಂಚಕೊಡ ಬಾರದು ಎಂದು ಅನಿಸುತ್ತದೆ. ಲಂಚಕೊಡದೆ ಕೆಲಸವಾಗದೇ ನಮಗೆ ನಷ್ಟ ಆಗುತ್ತದೆ ಅನ್ನುವುದಾದರೆ ಲಂಚಕೊಟ್ಟು ಕೆಲಸ ಯಾಕೆ ಮಾಡಿಸಿಕೊಳ್ಳಬಾರದೆನಿಸುತ್ತದೆ. ಅದು ನಮ್ಮ ಜೀವನದ ಅಳಿವು ಉಳಿವಿನ ಪ್ರಶ್ನೆಯಾಗಳಂತೂ ಲಂಚ ನೀಡಬೇಕಾಗುತ್ತದೆ. (ಆಸ್ಪತ್ರೆಗಳಲ್ಲಿ, ಪಿಂಚಣಿ ಪಡೆಯಲು, ಸರಕಾರದ ಯೋಜನೆಗಳನ್ನು ಪಡೆಯಲು) ಇದು ಕೆಳಹಂತದಿಂದ ಮೇಲಿನ ಹಂತದವರೆಗೆ ನಡೆಯುತ್ತಿರುತ್ತದೆ. ಇದನ್ನು ಪಡೆಯಲು ಉನ್ನತ ಅದಿಕಾರಿಗಳ ರಾಜಕಾರಣಿಗಳು ಹಾಗೂ ಸ್ಥಳೀಯ ನಾಗರೀಕರನ್ನು ಒಳಗೊಂಡ ತನಿಖಾ ತಂಡ ನಿರಂತರವಾಗಿ ಭೇಟಿ ನೀಡುತ್ತಿರಬೇಕು. ಅಗ ನೌಕರರು ಸ್ವಲ್ಪ ಅಂಜಿಕೆಯಿಂದ ಇರುತ್ತಾರೆ. ಅಳಿವು ಉಳಿವಿನ ಪ್ರಶ್ನೆಯಿಲ್ಲದಿದ್ದರೆ ನಾವು ವೈಯಕ್ತಿಕವಾಗಿ ನಿರ್ಧರಿಸ ಬೇಕಾಗುತ್ತದೆ. ಭ್ರಷ್ಟತನದಲ್ಲಿ ನಾವು ಹೆಚ್ಚಿಗೆ ಸಂಪಾದಿಸುವ ಅಥವಾ ಅಧಿಕಾರ ಪಡೆಯುವ ಅವಶ್ಯಕತೆ ಇದೆಯೇ? ಸಂಪತ್ತು ಅಧಿಕಾರ ವಿಲ್ಲದಿದ್ದರೆ ಸಮಾಜದಲ್ಲಿ ಸ್ಥಾನ ಕಡಿಮೆಯಾಗುತ್ತದಾ? ನಾವು ಯಾವುದಕ್ಕೆ ಮಹತ್ವ ನೀಡುತ್ತೇವೆ? ಆದಾಯ ಸಂಪತ್ತು, ಅಧಿಕಾರಕ್ಕೆ ಹೆಚ್ಚಿನ ಬೆಲೆ ಕೊಟ್ಟರೆ ನಾವು ಅಂತಹ ಬೆಲೆಯನ್ನು ಪಡೆಯಲು ಹೆಚ್ಚು ಆದಾಯ, ಸಂಪತ್ತು, ಅಧಿಕಾರವನ್ನು ಹೊಂದಬೇಕು, ಅದನ್ನು ಪಡೆಯಲು ತಪ್ಪು ಹಾದಿಯನ್ನು ತುಳಿಯಬೇಕಾಗುತ್ತದೆ. ಆದುದರಿಂದ ನಾವು ಮೊದಲು ಶ್ರೀಮಂತಿಕೆ ಅದರ ಆಡಂಬರಕ್ಕೆ ಅತಿಯಾದ ಬೆಲೆಕೊಡುವುದನ್ನು ನಿಲ್ಲಿಸಬೇಕು.

ಅನ್ಯಾಯದಿಂದ ಸಂಪತ್ತು ಸಂಗ್ರಹಿಸಿದ್ದಾರೆ ಎಂದು ಗೊತ್ತಾದ ವ್ಯಕ್ತಿಗಳನ್ನು ಮೌನವಾಗಿ ಬಹಿಷ್ಕಾರಿಸಬೇಕು. ನೇರವಾಗಿ ಆಪಾದಿಸಲು, ದೂಷಿಸಲು ಆಗುವುದಿಲ್ಲ. ಅವರೊಂದಿಗೆ ಆತ್ಮೀಯ ಸಂಬಂಧ ಇಟ್ಟುಕೊಳ್ಳಬಾರದು, ಅವರು ಆಹ್ವಾನಿಸುವ ಸಮಾರಂಭಗಳಿಗೆ ಹೋಗಬಾರದು. ಅವರು ನೀಡುವ ಉಡುಗೊರೆಗಳನ್ನು ಜಾಣತನದಿಂದ ನಿರಾಕರಿಸಬೇಕು. ಆಗ ತಮ್ಮನ್ನು ನಿರ್ಲಕ್ಷಿಸುತ್ತಾರೆ, ಮೌನವಾಗಿ ತಿರಸ್ಕರಿಸುತ್ತಾರೆ ಅನ್ನುವುದು ಭ್ರಷ್ಟವ್ಯಕ್ತಿಗಳಿಗೆ ಅರಿವಾಗಬೇಕು.

ಸೂಕ್ತ ಅರ್ಥಿಕ ನೀತಿಯ ಮೂಲಕ ಸಂಘಟಿತ ವಲಯ ಹಾಗೂ ಅಸಂಘಟಿತ ವಲಯಗಳ ನಡುವಿನ ವೇತನ, ಸೌಲಭ್ಯಗಳ ಅಂತರ ಕಡಿಮೆ ಮಾಡಬೇಕು. ಗಾಂಧೀಜಿಯವರ ಸಪ್ತ ಸಾಮಾಜಿಕ ಪಾಪಗಳು, ಬುದ್ಧ, ಬಸವ, ಏಸುಕ್ರಿಸ್ತ, ಅಂಬೇಡ್ಕರ್ ಹಾಗೂ ಇತರ ತತ್ವಜ್ಞಾನಿಗಳ ಕಥೆ ದೃಷ್ಟಾಂತಗಳನ್ನು ಶಾಲಾ ಪಠ್ಯಕ್ರಮದಲ್ಲಿ ಅಧಿಕ ಪ್ರಮಾಣದಲ್ಲಿ ಸೇರಿಸಬೇಕು. ಶಾಲಾ ದಿನಗಳಲ್ಲಿ ನೀತಿಭೋದನೆ ತರಗತಿಗಳನ್ನು ಕಡ್ಡಾಯವಾಗಿ ನಡೆಸಬೇಕು. ಮಕ್ಕಳಿಗೆ ಬೋರ್ ಅನಿಸಿದರೂ ಅವರ

ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ. ಮುಂದೆ ಜೀವನದಲ್ಲಿ ಅವರಿಗೆ ಗೊತ್ತಿಲ್ಲದಂತೆ ಮೌಲ್ಯಗಳನ್ನು ಅಳವಡಿಸಿಕೊಳ್ಳುತ್ತಾರೆ.

ಭ್ರಷ್ಟ ವ್ಯಕ್ತಿಗಳನ್ನು ನಿಗ್ರಹಿಸಬೇಕೆಂದರೆ ಅವರ ಮಕ್ಕಳಲ್ಲಿ ಭ್ರಷ್ಟಾಚಾರ ವಿರೋಧಿ ನಿಲುವನ್ನು ಬೆಳೆಸಬೇಕು. "ನಾವು ಮಕ್ಕಳಿಗೋಸ್ಕರವೆ ಇಷ್ಟೆಲ್ಲ ಮಡುತ್ತಿರುವುದು" ಎಂದು ಸಮರ್ಥಿಸಿಕೊಳ್ಳುತ್ತಾರಲ್ಲ, ಆ ಮಕ್ಕಳೆ ಅನ್ಯಾಯದಿಂದ ಗಳಿಸಿದ ಸಂಪತ್ತು ಬೇಡವೆಂದರೆ ಏನು ಮಾಡುತ್ತಾರೆ? ಮಕ್ಕಳೇ ಅವರನ್ನು ಕೀಳಾಗಿ ನೋಡುವಂತೆ ಮಾಡಬೇಕು.

ನಮ್ಮೆದುರಿಗೆ ಬಡವರಿದ್ದಾರೆಂದರೆ ಅದಕ್ಕೆ ನಾವು ಕಾರಣವಾಗುತ್ತೇವೆ ಅನ್ನುವ ಅತೃಪ್ತ ಮನೋಭಾವ ಸಂಪತ್ತು ಇರುವವರಲ್ಲಿ ಮೂಡಬೇಕು. ತಮ್ಮ ಶ್ರಮ, ಬುದ್ಧಿವಂತಿಕೆ, ಬಂಡವಾಳದಿಂದ ಹೆಚ್ಚಿಗೆ ಗಳಿಸಿರಬಹುದು. ಆದರೆ ಆ ಗಳಿಕೆಗೆ ಇತರರ ಕೊಡುಗೆಯು ಇರುತ್ತದೆ. ಬೇರೆಯವರೂ ಶ್ರಮ ಪಡುತ್ತಿರುತ್ತಾರೆ. ಆದರೆ ಅವರಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುತ್ತಿರುವುದಿಲ್ಲ. ಹೆಚ್ಚಿಗೆ ಇರುವವರು ತಮ್ಮ ಬಳಿ ಅಗತ್ಯಕ್ಕಿಂತ ಹೆಚ್ಚಿಗಿರುವುದನ್ನು ಇತರರೊಂದಿಗೆ ಹಂಚಿಕೊಳ್ಳಬೇಕು. ಹಾಗೆಂದು ಸುಮ್ಮನೆ ದಾನ ಮಾಡುವುದಲ್ಲ. ಯಾರು ನಮಗಾಗಿ, ನಮ್ಮ ಅನುಕೂಲಕ್ಕಾಗಿ ಶ್ರಮವಹಿಸುತ್ತಾರೊ ಅವರಿಗೆ ಸೂಕ್ತ ಸಂಭಾವನೆ ನೀಡಬೇಕು. ಅನೇಕ ಜನರು ನಮಗೆ ಕೆಲಸಮಾಡಿಕೊಡುತ್ತಾರೆ, ಉದಾ; ರಿಪೇರಿ ಮಾಡುವವರು, ಮನೆಗೆಲಸ ಮಾಡುವವರು, ಹಣ್ಣು ತರಕಾರಿ ಮಾರುವವರು, ಗಾಡಿ, ಆಟೋ ಓಡಿಸುವವರು ಹೀಗೆ ಯಾರು ದೈಹಿಕ ಶ್ರಮದ ಕೆಲಸ ಮಾಡುತ್ತಾರೊ ಅವರಿಗೆ ಸೂಕ್ತ ಸಂಭಾವನೆ ಕೊಡಬೇಕು. ಅವರ ಬಳಿ ಚೌಕಾಸಿ ಮಾಡಬಾರದು. ಅದೆ ಕೆಲಸ ನಾವು ಮಾಡುವುದಾದರೆ ಎಷ್ಟು ಸಂಭಾವನೆ ಪಡೆಯತ್ತಿದ್ದೆವು ಅಥವಾ ನಾವು ಈಗ ಮಾಡುತ್ತಿರುವ ಕೆಲಸಕ್ಕೆ ಎಷ್ಟು ಸಂಭಾವನೆ ಪಡೆಯುತ್ತಿದ್ದೇವೆ ಅನ್ನುವ ಪ್ರಜ್ಞೆಯಿರಬೇಕು.

ಭ್ರಷ್ಟಾಚರದ ವಿರುದ್ಧ ಸಾರ್ವಜನಿಕ ಪ್ರಜ್ಞೆ ಮೂಡುತ್ತಿರುವುದು ಶುಭಸೂಚನೆ. ಆದರೆ ನಿರೀಕ್ಷಿಸಿದ ಮಟ್ಟದಲ್ಲಿ ಪರಿಣಾಮಕಾರಿಯಾಗುತ್ತಿಲ್ಲ. ಭ್ರಷ್ಟರನ್ನು ಜನರೊಂದಿಗೆ ಮುಖಾಮುಖಿಯಾಗಿಸಬೇಕು. ಕೆಲವು ವಾಹಿನಿಗಳು ಮಾಡುತ್ತಿವೆ. ಆದರೆ ಅವರು ಜಾಣತನದಿಂದ ನುಣುಚಿ ಕೊಳ್ಳುತ್ತಿದ್ದಾರೆ. ಅವರ ಆಸ್ತಿ ವಿವರ ಮೊದಲು ಎಷ್ಟಿತ್ತು . ಅಧಿಕಾರಕ್ಕೆ ಬಂದ ಮೇಲೆ ಎಷ್ಟಾಯಿತು ಅನ್ನುವುದನ್ನು ಪ್ರಕಟಿಸಬೇಕು, ಪ್ರಶ್ನಿಸಬೇಕು (ಯಾರು ಪ್ರಶ್ನಿಸಬೇಕು?) ಸಾರ್ವಜನಿಕ ವಲಯದಲ್ಲಿ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತುವುದರ ಜೊತೆಗೆ ವೈಯಕ್ತಿಕ ಜೀವನದಲ್ಲಿ ಕೆಲವು ಸಂಕಲ್ಪ, ಕ್ರಿಯೆಗಳ ಮೂಲಕ ಪ್ರತ್ಯೇಕವಾಗಿ ಅಥವಾ ಪರೋಕ್ಷವಾಗಿ ಭ್ರಷ್ಟಾಚಾರದ ವಿರುದ್ಧ ನಿಲುವು ತಾಳಬೇಕು ಉದಾ: ಸರಳ ಜೀವನ ನಡೆಸುತ್ತೇವೆ. ಅಗತ್ಯಕ್ಕಿಂತ ಹೆಚ್ಚಿಗೆ ವಸ್ತುಗಳನ್ನು ಸಂಗ್ರಹ ಮಾಡುವುದಿಲ್ಲ. ನಮ್ಮ ಜೀವನದಲ್ಲಿ ಏನು ಬೇಕು ಎಷ್ಟು ಬೇಕು ಅನ್ನುವುದಕ್ಕೆ ಮಿತಿಯ ಗೆರೆ ಹಾಕಿಕೊಳ್ಳುವುದು, ಶ್ರಮಪಟ್ಟು ಆದಾಯ ಗಳಿಸಬೇಕು, ಸಾರ್ವಜನಿಕ ಹಣ ಯಾವಾಗಲೂ ಸಾರ್ವಜನಿಕರಿಗೆ ಸೇರಬೇಕು, ಭೂಮಿ ಮೇಲಿರುವ ಸಂಪತ್ತು ಅಲ್ಲಿ ವಾಸಿಸುವ ಎಲ್ಲಾ ಜೀವರಾಶಿಗಳಿಗೆ ಸೇರಿದ್ದು, ನಮ್ಮ ವೈಯಕ್ತಿಕ ಲಾಭಕ್ಕಾಗಿ ಅಲ್ಲ ಅನ್ನುವ ಭಾವನೆ ಬೆಳೆಸಿಕೊಳ್ಳಬೇಕು. ವರ್ತಮಾನದಲ್ಲಿ ಜನರು ಮೂಲಭೂತ ಅವಶ್ಯಕತೆಗಳೇ ಇಲ್ಲದೇ ಪರದಾಡುತ್ತಿರುವಾಗ ನಾವು ಇನ್ನೂ ಹುಟ್ಟದೇ ಇರುವ ಮಕ್ಕಳಿಗಾಗಿ ಸಂಪತ್ತು ಕೂಡಿಡುವುದು ಮಹಾಪಾಪ ಎಂಬ ಭಾವನೆ ಮೂಡಿ ಬರಬೇಕು. ಈ ಎಲ್ಲಾ ಅಂಶಗಳು ನಮ್ಮ ಸಾಮಾಜೀಕರಣದ ಭಾಗವಾಗಬೇಕು.

ಜನರಲ್ಲಿ ಮೂಡನಂಬಿಕೆಗಳನ್ನು ಬೆಳೆಸುವಂತಹ ಜೋತಿಷ್ಯ, ಪೂಜೆ, ಹೋಮ ಹವನ, ತರ್ಕರಹಿತ ಆಚರಣೆಗಳನ್ನು ಚರ್ಚೆ, ತಿಳುವಳಿಕೆಗಳ ಮೂಲಕ ಹೋಗಲಾಡಿಸಬೇಕು. ಅವುಗಳನ್ನು ಭ್ರಷ್ಟಾಚಾರದ ವ್ಯಾಪ್ತಿಯೊಳಗೆ ತರುವಂತಾಗಬೇಕು. ಉದಾ: ಕೇರಳದ ಪದ್ಮನಾಭ ದೇವಸ್ಥಾನದಲ್ಲಿ ಒಂದು ಲಕ್ಷ ಕೋಟಿ ಮೌಲ್ಯದ ಚಿನ್ನ ಅನುತ್ಪಾದಕವಾಗಿ ಒಂದೆಡೆ ಸೇರಿದೆ ಎಂದರೆ ಅದು ಹೇಗೆ ಉತ್ಪತ್ತಿ ಯಾಯಿತು? ಎಷ್ಟು ಜನರು ಅದಕ್ಕೆ ಶ್ರಮಪಟ್ಟಿದ್ದಾರೆ? ಅದು ಯಾರಿಗೆ ಸೇರಬೇಕು ಎನ್ನುವ ಪ್ರಶ್ನೆಗಳನ್ನು ಎತ್ತಿ ಚರ್ಚಿಸಬೇಕು. ಆ ಚಿನ್ನ ಭೂಮಿಯಿಂದ ತಾನಾಗಿ ಬಂದು ದೇವಸ್ಥಾನದಲ್ಲಿ ಶೇಖರಣೆಯಾಗಿಲ್ಲ. ಸಾವಿರಾರು ಜನರ ಶ್ರಮದ ಫಲವಿದು. ಅಂದ ಮೇಲೆ ಅದು ಜನರಿಗೆ ಸೇರಬೇಕು. ಸಾರ್ವಜನಿಕವಾಗಿ ಬಳಕೆಯಾಗ ಬೇಕು. ದೇವರು, ಹಾವು, ಜ್ಯೋತಿಷ್ಯ ಎಂದು ಹೇಳುತ್ತಾ ಅದನ್ನು ಮುಚ್ಚಿಡುವುದು ಭ್ರಷ್ಟಾಚಾರವೇ ಸರಿ. ಸಂವಿಧಾನದಲ್ಲಿ ಹೇಳುವಂತೆ ಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಪ್ರಯತ್ನವಾಗಬೇಕು. ಕಳೆದ ಎರಡು ದಶಕಗಳಿಂದ ಜನರಲ್ಲಿ ವೈಜ್ಞಾನಿಕ ಮನೋಭಾವ ಕಡಿಮೆಯಾಗಿ ಮೂಡನಂಬಿಕೆಗಳಿಗೆ ಮೊರೆಹೋಗುತ್ತಿರುವುದು ವಿಷಾದನೀಯ. ಇದಕ್ಕೆ ನಮ್ಮ ಆರ್ಥಿಕ ಹಾಗೂ ಅಭಿವೃದ್ಧಿ ನೀತಿಗಳು ಪೂರಕವಾಗಿವೆ. ಅನಿಶ್ಚಿತತೆ, ವಿಪರೀತ ಸ್ಪರ್ಧೆ, ಅಳಿವು ಉಳಿವಿನ ಪರಿಸ್ಥಿತಿ, ಕೊಳ್ಳುಬಾಕ ಸಂಸ್ಕೃತಿ ಮುಂತಾದವು ಗಳನ್ನು ವಾಸ್ತವದ ಹಿನ್ನಲೆಯಲ್ಲಿ ಪರಿಶೀಲಿಸಿ ಹೋಗಲಾಡಿಸಲು ಪ್ರಯತ್ನಿಸದೆ, ಮೂಡನಂಬಿಕೆ ಕಡೆಗೆ ವಾಲುವಂತೆ ಮಾಡಲಾಗುತ್ತದೆ. ಈ ಹಿನ್ನಲೆಯಲ್ಲಿ ಟಿ.ವಿ. ಚಾನಲ್‌ಗಳಲ್ಲಿ ಬಿತ್ತರಿಸುವ ಜ್ಯೋತಿಷ್ಯ ಕಾರ್ಯಕ್ರಮಗಳನ್ನು ಮೊದಲು ನಿಷೇಧಿಸಬೇಕು.

ಹೀಗೆ ವೈಯಕ್ತಿಕ ಹಾಗೂ ಸಾಮುದಾಯಿಕ ಹಂತಗಳೆರಡರಲ್ಲೂ ಭ್ರಷ್ಟಾಚಾರ ವಿರೋಧಿ ನಿಲವು ಹಾಗೂ ಕಾರ್ಯಗಳನ್ನು ಕೈಗೊಂಡರೆ ಭ್ರಷ್ಟಾಚಾರವನ್ನು ಕಡಿಮೆ ಮಾಡಬಹುದು. ಕೊನೆಯಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಭ್ರಷ್ಟಾಚಾರವನ್ನು ನೋಡುವುದಾದರೆ ಅನೇಕ ಸಾಮನ್ಯೀಕರಣ, ಆಪಾದನೆ, ತಪ್ಪುಪರಿಕಲ್ಪನೆಗಳಿರುವುದು ಕಂಡುಬರುತ್ತದೆ. ಮಹಿಳೆಯರು ಪುರುಷರಷ್ಟು ಭ್ರಷ್ಟರಲ್ಲ, ಪುರುಷರು ಭ್ರಷ್ಟರಾಗುವುದಕ್ಕೆ ಸ್ತ್ರೀಯರೇ ಕಾರಣ, ಪುರುಷರು ಭ್ರಷ್ಟರಾಗದಂತೆ ತಡೆಯುವುದು ಸ್ತ್ರೀಯರ ಕೈಯಲ್ಲಿದೆ, ಮಹಿಳೆಯರು ರಾಜಕೀಯ, ಆಡಳಿತ ಅಧಿಕಾರಕ್ಕೆ ಬಂದರೆ ಭ್ರಷ್ಟಾಚಾರ ಕಡಿಮೆಯಾಗುತ್ತದೆ ಇತ್ಯಾದಿ. ಸಾಮಾನ್ಯ ವ್ಯಕ್ತಿಗಳಾಗಿ ಮಹಿಳೆಯರು ಪುರುಷರಷ್ಟೇ ಭ್ರಷ್ಟರಾಗುವ ಸಾಧ್ಯತೆಗಳಿವೆ. ಆದರೆ ಅವರನ್ನು ಸಾಮಾಜೀಕರಿಸುವ ರೀತಿ, ಅವರು ಜೀವಿಸುತ್ತಿರುವ ಪರಿಸ್ಥಿತಿ, ಅವರು ಜೀವನವನ್ನು ನೋಡುವ ಧೃಷ್ಟಿಕೋನ, ಅವರ ಪಾತ್ರ ಮುಂತಾದವುಗಳು ಬಹುಶಃ ಅವರನ್ನು ಪುರುಷರಿಗಿಂತ ಕಡಿಮೆ ಭ್ರಷ್ಟರನ್ನಾಗಿ ಮಾಡಬಹುದೇನೋ. ಆದರೂ ರಾಜಕೀಯ ಅಧಿಕಾರ ಹೊಂದಿದ ಕೆಲವೇ ಮಹಿಳೆಯರಲ್ಲಿ ಕೆಲವರು ಭ್ರಷ್ಟಾಚಾರ ಮಾಡಿರುವು ದನ್ನು ನೋಡಿದರೆ ಪುರುಷರಿಗಿಂತ ಕಡಿಮೆಯಿಲ್ಲ ಅನಿಸುತ್ತದೆ. ಸ್ತ್ರೀ ಪಕ್ಷಪಾತ ದೃಷ್ಟಿಯಿಂದ ನೋಡಿದರೆ ಮಹಿಳೆಯರು ಪುರುಷರಷ್ಟು ಭ್ರಷ್ಟರಾಗುವುದಿಲ್ಲ ಎಂದು ಹೇಳಬಹುದು.

ಇನ್ನು ಪುರುಷರು ಲಂಚಕೋರರಾಗುವುದಕ್ಕೆ ಹೆಂಡತಿ, ತಾಯಿ ಮಕ್ಕಳು ಕಾರಣರಗುತ್ತಾರೆ, ಅವರ ಆಸೆಗಳನ್ನು ಪೂರೈಸುವುದಕ್ಕೆ, ಅವರನ್ನು ಸಂತೋಷದಿಂದ ಇಡುವುದಕ್ಕೆ ಪುರುಷರ ಲಂಚತೆಗೆದು ಕೊಳ್ಳುತ್ತಾರೆ ಎಂಬ ವಾದವು ಇದೆ. ಪುರುಷರಿಗೆ ಸಂಪತ್ತುಗಳಿಸಬೇಕು, ಉನ್ನತ ಅಧಿಕಾರ ಬೇಕು, ಸಮಾಜದಲ್ಲಿ ಮನ್ನಣೆ ಪಡೆಯಬೇಕೆಂಬ ಹಂಬಲವಿರುವುದಿಲ್ಲವೆ? ಎಷ್ಟು ಪುರುಷರು ತಮ್ಮ ಆದಾಯ, ಸಂಪತ್ತುಹೇಗೆ ಬಂತು ಅಂತ ಮನೆಯವರಿಗೆ ತಿಳಿಸಿರುತ್ತಾರೆ? ಗಂಡಸಿನ ವ್ಯವಹಾರದಲ್ಲಿ ಸ್ತ್ರೀಯರು ತಲೆ ಹಾಕಬಾರದು ಎಂಬ ನಿಯಮವೇ ಹೆಚ್ಚಾಗಿ ಜಾರಿಯಲ್ಲಿರಬೇಕಾದರೆ ಪುರುಷರು ಭ್ರಷ್ಟರಾಗದಂತೆ ತಡೆಯಲು ಹೇಗೆ ಸಾಧ್ಯ? ಭ್ರಷ್ಟತನವನ್ನು ಸಮರ್ಥಿಸಿಕೊಳ್ಳುವ ಪುರುಷರು ಸ್ತ್ರೀಯರು ಪೂರಕವಾಗಿರುತ್ತಾರೇನೋ? ಕಪ್ಪುಹಣವನ್ನು ಬಳಕೆ ಮಾಡುವುದಕ್ಕೆ ಸ್ತ್ರೀಯರು ದಾಳಗಳಾಗಬಹುದು. ಅದೇನೇ ಇರಲಿ ಯಾವುದನ್ನು ಸಾಮಾನ್ಯೀಕರಿಸಲು ಸಾಧ್ಯವಿಲ್ಲ. ರಾಜಕೀಯ, ಆಡಳಿತ ಅಧಿಕಾರಕ್ಕೆ ಬರುವಂತಹ ಮಹಿಳೆಯರು ಭ್ರಷ್ಟರಾಗುವುದು ಬೇಡ ಎಂದು ಆಶಿಸೋಣ.

❑



ಮಹಿಳೆ ಮತ್ತು ನ್ಯಾಯ: ಅಮೆರಿಕದ ಒಂದು ಪಕ್ಷಿನೋಟ

■ **ಸುಮಿತ್ರ ಆಚಾರ್ಯ,** ವಕೀಲರು, ಬೆಂಗಳೂರು

ಫೆಬ್ರವರಿ-28' 2011ರಿಂದ ಮಾರ್ಚ್-18' 2011ರವರೆಗಿನ ಅಂತರಾಷ್ಟ್ರೀಯ ಸಂದರ್ಶನಕಾರರ ನಾಯಕತ್ವ ಕಾರ್ಯಕ್ರಮದ ಭಾಗವಾಗಿ ಅಮೆರಿಕದ ಶಿಕ್ಷಣ ಮತ್ತು ಸಂಸ್ಕೃತಿ ವ್ಯವಹಾರ ಕಛೇರಿ, ಅಮೇರಿಕ ರಾಜ್ಯ ಇಲಾಖೆ ನಡೆಸಿದ 'ಮಹಿಳೆ ಮತ್ತು ನ್ಯಾಯ' ಈ ವಿಷಯದ ಬಗ್ಗೆ ತಿಳಿದುಕೊಂಡ ಕೆಲವು ವಿಷಯಗಳನ್ನು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಹಂಚಿಕೊಳ್ಳುವುದು ಸೂಕ್ತವೆನಿಸುತ್ತಿದೆ. ಈ ಲೇಖನವು ಅಮೆರಿಕದ ಮಹಿಳೆಯು ಕೌಟುಂಬಿಕ ಹಿಂಸೆಯನ್ನು ಎದುರಿಸುವಲ್ಲಿ ಯಾವ ರೀತಿಯ ಶ್ರಮ ವಹಿಸುತ್ತಿದ್ದಾಳೆ ಎಂಬುದರ ಬಗ್ಗೆ ಹೆಚ್ಚಿನ ಗಮನ ನೀಡುತ್ತದೆ.

ಶ್ರೀಮತಿ. ಎಲಿಜಬೆತ್ ಲಿಯು, ಸ್ಟಾಫ್ ಅಟಾರ್ನಿ, ಡೊಮೆಸ್ಟಿಕ್ ವೈಲೆನ್ಸ್, ಲೀಗಲ್ ಎಂಪವರ್‌ಮೆಂಟ್ ಅಂಡ್ ಅಪೀಲ್ಸ್ ಪ್ರಾಜೆಕ್ಟ್‌ರವರ ಪ್ರಕಾರ ಅಮೆರಿಕದಲ್ಲಿ 1994ರ ಮಹಿಳೆ ವಿರುದ್ಧ ಹಿಂಸೆ ಕಾಯಿದೆಯಡಿ ನೊಂದ ಮಹಿಳೆಯರು ಕ್ರಿಮಿನಲ್ ಮತ್ತು ಸಿವಿಲ್ ನ್ಯಾಯಾಲಯಗಳಲ್ಲಿ ವ್ಯಾಜ್ಯ ದಾಖಲು ಮಾಡಬೇಕಾಗಿರುತ್ತದೆ. ಪ್ರತಿ 5 ವರ್ಷಕ್ಕೊಮ್ಮೆ ಈ ಕಾನೂನಿನ ನವೀಕರಣ ಆಗುತ್ತಾ ಇರಬೇಕಾಗಿದೆ. ಈ ಕಾನೂನು ಜಾರಿಗೊಳಿಸುವ ವಿರುದ್ಧ ಎಲ್ಲಾ ದೇಶಗಳಂತೆಯೇ ಅಮೆರಿಕದಲ್ಲಿಯೂ ವಿರೋಧವಿತ್ತು. ಏಕೆಂದರೆ, ಇದು ಮನೆಯ ವಿಷಯವಾಗಿದ್ದು, ಖಾಸಗಿ ಒಡೆತನದಲ್ಲಿ ಪರಿಹಾರವನ್ನು ಪಡೆದುಕೊಳ್ಳಬೇಕು ಎಂಬ ಭಾವನೆ ಜಾಸ್ತಿ ಇದೆ. ಅಲ್ಲದೇ, ಒಂದೊಮ್ಮೆ ಗಂಡನಿಂದ ಸಮಸ್ಯೆಯಾದರೆ ಅವನನ್ನು ಬಿಟ್ಟರಾಯಿತು, ಎಲ್ಲ ಸಮಸ್ಯೆ ಪರಿಹಾರ ಆದಂತೆ ಎನ್ನುವ ಧೋರಣೆಯೂ ಇದೆ. ಮೂಲಭೂತ ಸಂಪ್ರದಾಯಸ್ಥ ಜನರ ಸಂಖ್ಯೆಯೂ ಜಾಸ್ತಿ ಇರುವುದರಿಂದ ಮಹಿಳೆಗೆ ಕಾನೂನಿನ ಸಂಪೂರ್ಣ ಆಶ್ರಯ ದೊರಕುವಲ್ಲಿ ಅಲ್ಲಿಯೂ ಹೋರಾಟ ದಿನಂಪ್ರತಿ ನಡೆಯುತ್ತಿದೆ.

ಈ ಕಾನೂನಿನ ಒಂದು ಉಪಯೋಗವೆಂದರೆ ಒಂದು ರಾಜ್ಯದ ರಕ್ಷಣಾ ಆದೇಶವನ್ನು ಇನ್ನೊಂದು ರಾಜ್ಯದಲ್ಲಿ ಜಾರಿ ತರಬಹುದು. ಅಲ್ಲಿ ಅಗತ್ಯವಿರುವ ಮಹಿಳೆಯರಿಗೆ ಆಶ್ರಯವನ್ನು ತುರ್ತಾಗಿ ಒದಗಿಸುವರು. ಏಕೆಂದರೆ ವ್ಯಾಜ್ಯ ದಾಖಲಿಸಿದ ಕೂಡಲೇ ನೊಂದ ಮಹಿಳೆ ಎಲ್ಲವನ್ನೂ ಕಳೆದುಕೊಳ್ಳುವ ಸಾಧ್ಯತೆಗಳು ಅಲ್ಲಿ ಜಾಸ್ತಿ ಇದೆ.ಅವಳ ನೈತಿಕತೆ ಪ್ರಶ್ನಿಸಿ ಅವಮಾನಿಸುವುದು ಕೂಡ ಸಾಮಾನ್ಯವಾಗಿದೆ. ಹೀಗೆ ದೂರು ಸಲ್ಲಿಸಿದ ಮಹಿಳೆಯ ನಡತೆಯ ಬಗ್ಗೆ ಬೇಕಾಬಿಟ್ಟಿಯಾಗಿ ಬರೆಯುವುದು, ಅವಮಾನ ಗೊಳಿಸುವುದನ್ನು ಅಮೆರಿಕದ ಸಾಕ್ಷಿನೀತಿ ನಿಷೇಧಿಸುತ್ತದೆ. ನ್ಯಾಯ ಇಲಾಖೆ, ಮಹಿಳಾ ವಿರುದ್ಧ ಅಪರಾಧ ವಿಭಾಗವು ವಿಶೇಷವಾಗಿ ಮಹಿಳೆ ವಿರುದ್ಧ ಹಿಂಸೆ ಕಾಯಿದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಶ್ರಮಿಸುತ್ತಿದೆ ಮತ್ತು ಹಲವಾರು ಯೋಜನೆಯನ್ನು ಹಮ್ಮಿಕೊಂಡಿದೆ.

ಡಿವಿ ಲೀಪ್ ಸಂಸ್ಥೆ ತಾರತಮ್ಯ ಧೋರಣೆಗಳಿಂದ ಹೊರಬಂದು ಕೆಳಗಿನ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲಿನ ನ್ಯಾಯಾಲಯಕ್ಕೆ ದಾವೆ ಹೂಡಲು ಕೌಟುಂಬಿಕ ಹಿಂಸೆಗೆ ಒಳಗಾದ ಮಹಿಳೆಗೆ ಸಹಕಾರ ನೀಡುತ್ತದೆ. ವಕೀಲರಿಗೆ ಕೂಡ ತರಬೇತಿ ನೀಡಲಾಗುವುದು ಮತ್ತು ನ್ಯಾಯಾಧೀಶರಿಗೂ ಕೂಡ ಕೌಟುಂಬಿಕ ಹಿಂಸೆ ವಿಷಯಗಳಲ್ಲಿ ಉತ್ತಮ ಆಚರಣೆ ಬಗ್ಗೆ ತರಬೇತಿ ನೀಡುವರು.

ಅಲ್ಲದೆ ಲೈಂಗಿಕ ದೌರ್ಜನ್ಯ ವಿರುದ್ಧ ಕಾರ್ಯಕ್ರಮ ಜಾರಿಯಲ್ಲಿದ್ದು, ಅದು ವಿಶೇಷವಾಗಿ ಹೆಚ್ಚಿನ ಪುರುಷರನ್ನು ಸೇರಿಸಿಕೊಂಡು ಕೆಲಸ ಮಾಡುತ್ತದೆ. ಯುವಜನತೆಯನ್ನು ಗಮನದಲ್ಲಿರಿಸಿ, ಅವರ ಹೆಚ್ಚಿನ ಭಾಗವಹಿಸುವಿಕೆಯೇ ಉದ್ದೇಶವಾಗಿರಿಸಿ, ಸಂಘ ಸಂಸ್ಥೆಗಳು ಆ ಮೂಲಕ ಹೆಚ್ಚಾಗಿ ಮಹಿಳೆಯ ಮೇಲೆ ನಡೆಯುವ ಲೈಂಗಿಕ ಹಿಂಸೆಯನ್ನು ನಿಲ್ಲಿಸುವ ಭರವಸೆಯೊಂದಿಗೆ ಕೆಲಸ ಮಾಡುತ್ತಿವೆ. ಅಮೆರಿಕದಲ್ಲಿ ಹಿಂಸೆ ಮಾಡಿದ ಗಂಡನಲ್ಲಿ ಪಿಸ್ತೂಲ್ ಇದ್ದರೆ, ಆತನ ಲೈಸೆನ್ಸನ್ನು ಕೂಡಲೇ ರದ್ದು ಮಾಡಲಾಗುವುದು.

ಆದರೂ ನ್ಯಾಯಾಧೀಶರು ಕೌಟುಂಬಿಕ ಹಿಂಸೆಯನ್ನು ಅಪರಾಧವೆಂದು ನಿರಾಕರಿಸುವ ಸಂದರ್ಭಗಳು ಜಾಸ್ತಿ ಇದೆ. ನೊಂದ ಮಹಿಳೆಗೆ ಸರ್ಕಾರಿ ಆಶ್ರಯಗೃಹ ಸೇವೆ ಅಮೆರಿಕಾದ ಎಲ್ಲಾ ಭಾಗಗಳಲ್ಲೂ ನಡೆಯುತ್ತಿಲ್ಲ. ಅಲ್ಲದೇ, ಸರ್ಕಾರ ತಾನಾಗಿಯೇ ಜವಾಬ್ದಾರಿ ತೆಗೆದುಕೊಂಡು ಉತ್ತಮ ಸೇವೆಯನ್ನು ನೀಡುತ್ತಿಲ್ಲ. ಕೌಟುಂಬಿಕ ಹಿಂಸೆಯನ್ನು ಅಮೇರಿಕ ಅಪರಾಧವೆಂದು ಇನ್ನೂ ಸಂಪೂರ್ಣವಾಗಿ ಗುರುತಿಸಿಲ್ಲ. ವಿಚ್ಛೇದನದ ನಂತರವೂ ಅಲ್ಲಿನ ಮಹಿಳೆಯ ಮೇಲೆ ವಿಚ್ಛೇದಿತ ಗಂಡನಿಂದ ಹಿಂಸೆ ಮುಂದುವರೆಯುತ್ತದೆ. ಅವಳ ರಕ್ಷಣೆಗೆ ಯಾವ ಕಾನೂನಿನಲ್ಲಿಯೂ ಉತ್ತರವಿಲ್ಲದಾಗಿದೆ. ಹಿಂಸೆ, ಅತ್ಯಾಚಾರ ನಡೆಸಿದವರು ಹಿಂಸೆಯಿಂದ ನೊಂದವರನ್ನು ಪರಿಹಾರಧನ ನೀಡಿ, ಬಾಯಿಮುಚ್ಚಿಸುವ ಕಾರ್ಯವು ನಿರಂತರವಾಗಿ ನಡೆಯುತ್ತದೆ. ಇದು ಪುರುಷ ದಬ್ಬಾಳಿಕೆಯ ಇನ್ನೊಂದು ಮಜಲನ್ನು ತೋರಿಸುತ್ತದೆ.

ನ್ಯಾಯಾಂಗ ಮತ್ತು ಪೊಲೀಸ್ ಇಲಾಖೆಗಳಲ್ಲಿ ಪುರುಷ ಪ್ರಧಾನತೆ ಜಾಸ್ತಿ ಇರುವುದರಿಂದ ಮಹಿಳಾ ವಿರುದ್ಧ ಹಿಂಸೆ ಕಾಯಿದೆಯಿದ್ದರೂ ಅದರ ಸದುಪಯೋಗ ಮಹಿಳೆಗೆ ಸಿಗುತ್ತಿಲ್ಲ. ನ್ಯಾಯಲಯದಿಂದ ಉತ್ತಮ ಆದೇಶ ಪಡೆಯುವುದು ಕಷ್ಟದ

ಕೆಲಸ. ನ್ಯಾಯಾಧೀಶರು ವಕೀಲರಾಗಿ ಸೇವೆ ಸಲ್ಲಿಸಿರಬೇಕಾದ ಅವಶ್ಯಕತೆ ಇಲ್ಲದಿರುವುದೂ ಕೂಡ ಬಹುಶ: ಉತ್ತಮ ನ್ಯಾಯ ಪರಿಪಾಲನೆಗೆ ಅಡ್ಡಿಯಾಗುತ್ತದೆ. ಅವರ ಪುರುಷಪರ ಧೋರಣೆಗಳು ಹಾಗೂ ಕಾನೂನಿನ ಉತ್ತಮ ಅರಿವಿನ ಅಭಾವ ಮಹಿಳೆಯನ್ನು ಕಾನೂನಿನ ದುರುಪಯೋಗ ಮಾಡುವ ರೀತಿಯಲ್ಲಿ ದೋಷಿಯಾಗಿ ಪರಿಗಣಿಸುತ್ತದೆ.

ಕೌಟುಂಬಿಕ ಹಿಂಸೆಯಿಂದ ಗಂಭೀರವಾಗಿ ಹಾನಿಗೊಂಡ ಮಹಿಳೆಗೆ ಮನೆನಿರ್ಮಾಣ ಇಲಾಖೆಯಿಂದ ಮನೆ ಒದಗಿಸುವ ಸೌಲಭ್ಯವಿದೆ. ಅಲ್ಲದೇ, ಕೌಟುಂಬಿಕ ನ್ಯಾಯ ವಿಷಯಗಳಲ್ಲಿ ಪಡೆದ ಶುಲ್ಕದಲ್ಲಿ ಸ್ವಲ್ಪ ಪ್ರಮಾಣ ಕೌಟುಂಬಿಕ ಹಿಂಸೆಯಿಂದ ನರಳುತ್ತಿರುವ ಮಹಿಳೆಯರಿಗಾಗಿ ಮೀಸಲಿಟ್ಟ ಕೌಟುಂಬಿಕ ಹಿಂಸೆ ನಿಧಿಗೆ ತಲುಪುತ್ತಿದೆ. ಈ ಕಾರ್ಯ ನಮ್ಮಲ್ಲಿಯೂ ಆದರೆ ಉತ್ತಮ. ಅನೇಕ ನೊಂದ ಮಹಿಳೆಯರು ಉತ್ತಮ ಭವಿಷ್ಯದ ಭರವಸೆ ಸಿಕ್ಕಂತಾಗಿ ಹಿಂಸೆ ವಿರುದ್ಧ ಧ್ವನಿ ಎತ್ತಲು ಸಹಾಯಕವಾಗುವುದು.

ಮಹಿಳೆಯು ತನಗೆ ಕುಟುಂಬದಲ್ಲಿ ಹಿಂಸೆ ನಡೆಯುತ್ತಿದೆ ಎಂದು ಪ್ರಶ್ನಿಸುವುದೇ ಭಾರತ ಸೇರಿದಂತೆ ಹಲವು ದೇಶಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕ ನೆಲೆಯಲ್ಲಿ ಮಹಿಳೆಗೆ ಕಳಂಕ ಮತ್ತು ತೊಂದರೆಯನ್ನು ತರುತ್ತದೆ. ಹಾಗಾಗಿ ಹೆಚ್ಚಿನ ಮಹಿಳೆಯರು ಇಂದಿಗೂ ಹಿಂಸೆಯನ್ನು ಮೌನವಾಗಿ ಸಹಿಸಿಕೊಂಡು ಬದುಕುತ್ತಿದ್ದಾರೆ. ಹಿಂಸೆ ಎದುರಿಸುವ ನಿಟ್ಟಿನಲ್ಲಿ ಸಹಕರಿಸುವ ಸಮಾಜ ಎಂದು ನಿರ್ಮಾಣವಾಗುವುದು? ಮಹಿಳೆಯರ ತಾಳ್ಮೆ ಪರೀಕ್ಷಿಸಲಾಗುತ್ತಿದೆ.

ಹಿಂಸೆ ಅನುಭವಿಸಿದ ಮಹಿಳೆಯನ್ನು ಪುನಃ ಅವಳ ಕುಟುಂಬ ದೊಂದಿಗೆ ಸೇರಿಸುವ ಕೆಲಸ ಕೂಡ ಕೌಟುಂಬಿಕ ಸಮಾಲೋಚನೆಗಳ ನಂತರ ನಡೆಯುತ್ತಿದೆ. ಆದರೆ ಸಮಾನತೆಯ ನಿಯಮವನ್ನು ಪಾಲಿಸಿ ಸಮಾಲೋಚನೆಗಳು ನಡೆಯುತ್ತಿಲ್ಲ. ಈ ನಿಲುವಿನೊಂದಿಗೆ ಸಮಾಲೋಚನೆ ನಡೆಸುವ ಅವಶ್ಯಕತೆ ಇದೆ.


ಅಮೆರಿಕದಲ್ಲಿ ಹಿಂಸೆಗೆ ಒಳಗಾದ ಮಹಿಳೆಗೆ ಒಂದೇ ಒಂದು ಆಶ್ರಯ ತಾಣವಿದ್ದು, ಹಲವಾರು ಕಡೆ ಆಶ್ರಯ ತಾಣಗಳೇ ಇಲ್ಲ. ಅಲ್ಲದೇ, ಕೇವಲ 90 ದಿನಗಳು ಆಶ್ರಯವು ಲಭ್ಯವಿದ್ದು, ಅಲ್ಲಿ ಸೇರುವ ಮಹಿಳೆಯವರಿಗೆ ತಮ್ಮ ಭವಿಷ್ಯದ ಚಿಂತೆಯು ಕಾಡುತ್ತಿರುತ್ತದೆ. ಹಾಗಾಗಿ, ಆಶ್ರಯವನ್ನು ಬಳಸುವವರು ಕಡಿಮೆ. ಕೌಟುಂಬಿಕ ಹಿಂಸೆಯ ವಿಷಯಗಳಲ್ಲಿ ಮಹಿಳೆಯರನ್ನೇ ಎಲ್ಲರೂ ದೂರುವ ಪರಿಸ್ಥಿತಿ ಅಲ್ಲಿದೆ. ಕುಟುಂಬದಲ್ಲಿ ಹಿಂಸೆ ಇದ್ದಲ್ಲಿ, ಹೊರಗೆ ನಡೆಯಿರಿ, ಅಲ್ಲಿದ್ದು ಯಾಕೆ ಹೋರಾಟ ಎನ್ನುವ ಮನಸ್ಥಿತಿ ಪುರುಷ ಜನಾಂಗವನ್ನು ಸಮರ್ಥಿಸುತ್ತದೆ ಎನ್ನುವುದು ವಿಷಾದನೀಯ. ಹಿಂಸೆಯ ವಿರುದ್ಧ ಧ್ವನಿಯೆತ್ತುವ ಮಹಿಳೆಯರು ಪ್ರೋತ್ಸಾಹ ಸಿಗದೇ ಸಂಕಟ ಅನುಭವಿಸುವ ಮತ್ತು ನ್ಯಾಯಾಲಯದಿಂದ ಬರಿಗೈಯಿಂದ ಹೊರಬರುವ ವಾತಾವರಣ ಉಸಿರುಗಟ್ಟಿಸುತ್ತದೆ. ಹಿಂಸೆಯಿಂದ ಮರಣ ಹೊಂದುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ. ಹಿಂಸೆಯನ್ನು ತಾವಾಗಿ ಎದುರಿಸುವ ಮಹಿಳೆಯರು ಜೈಲು ಸೇರಿದ್ದಾರೆ.

ಹಲವು ಸಂಘಸಂಸ್ಥೆಗಳು ಕೌಟುಂಬಿಕ ಹಿಂಸೆಗಳ ವಿರುದ್ಧ ಕೆಲಸ ಮಾಡುತ್ತಿದ್ದು, ರಕ್ಷಣೆ, ಪ್ರೋತ್ಸಾಹ ಮತ್ತು ಮುಖ್ಯವಾಗಿ ಭಾವನಾತ್ಮಕ ನೋವುಗಳ ಗುಣಪಡಿಸುವಲ್ಲಿ ಶ್ರಮವಹಿಸುತ್ತಿವೆ. ಮಹಿಳೆಯನ್ನು ತನಗಾದ ಹಿಂಸೆಗಳ ಬಗ್ಗೆ ನ್ಯಾಯಾಲಯದಲ್ಲಿ ಮುಕ್ತವಾಗಿ ಹೇಳಿಕೆ ಒದಗಿಸಲು ಧೈರ್ಯ ತುಂಬುವುದೇ ಒಂದು ಕ್ಲಿಷ್ಟಕರ ಕೆಲಸವಾಗಿದೆ. ಮಹಿಳೆಯ ಹಿಂಸೆಯ ವಿಷಯಕ್ಕಿಂತಲೂ ಹೆಚ್ಚಾಗಿ ಮಕ್ಕಳ ವಿಷಯದಲ್ಲಿ ಹೆಚ್ಚಿನ ವ್ಯಾಜ್ಯಗಳು ಮತ್ತು ಗಂಭೀರವಾದ ಹೋರಾಟಗಳು ನ್ಯಾಯಾಲಯದಲ್ಲಿ ನಡೆಯುತ್ತಿರುವುದು ಕಂಡುಬರುತ್ತದೆ. ಜೀವನಾಂಶದ ವಿಷಯ ಬಂದಾಗ ಗಂಡನಾದವನು ತನ್ನ ಆಸ್ತಿ ಮತ್ತು ಆದಾಯ ದಾಖಲೆಗಳನ್ನು ಅಡಗಿಸಿಡುವುದು ಸರ್ವೆ ಸಾಮಾನ್ಯವಾಗಿರುವುದರಿಂದ, ಜೀವನಾಂಶ ಪಡೆಯುವುದು ಸ್ವಂತ ಆದಾಯವಿಲ್ಲದ ಹಾಗೂ ಗಂಡಂದಿರು ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವ ಸಂದರ್ಭಗಳಲ್ಲಿ ದುಸ್ತರವಾಗುತ್ತಿದೆ.

ಮಹಿಳಾ ವಿಷಯದಲ್ಲಿ ಲಿಂಗ, ಜನಾಂಗಕ್ಕೆ ಅನುಗುಣವಾಗಿ ಹಕ್ಕುಗಳೂ ಕೂಡ ದೊರೆಯದ ಪರಿಸ್ಥಿತಿ ಕಂಡುಬರುತ್ತದೆ. ಮಹಿಳೆಯರು ತಮ್ಮ ಬಣ್ಣದಿಂದ ಹೆಚ್ಚಿನ ಅಪರಾಧದ ಹೊರೆಯನ್ನು ನ್ಯಾಯಾಲಯ ದಿಂದ ಹೇರಲ್ಪಟ್ಟ ಹಲವು ವ್ಯಾಜ್ಯಗಳ ಬಗ್ಗೆ ಎಲ್.ಜಾನ್ಸನ್‌ರವರು ತಮ್ಮ ಪುಸ್ತಕ ಇನ್ನರ್ ಲೈವ್ಸ್ : ವಾಯಿಸಸ್ ಆಫ್ ಆಫ್ರಿಕನ್ ಅಮೆರಿಕನ್ ವುಮೆನ್ ಇನ್ ಪ್ರಿಸನ್‌ದಲ್ಲಿ ಮನಮುಟ್ಟುವ ಹಾಗೆ ತಿಳಿಸಿದ್ದಾರೆ. ಅವರು ಹೇಳುತ್ತಾರೆ–ಅಮೆರಿಕವನ್ನು ಖಂಡಿತವಾಗಿಯೂ ನಾವು ಅನುಸರಣೆ ಮಾಡಬಾರದು. ಆದರೆ ವ್ಯವಸ್ಥೆಯನ್ನು ಉತ್ತಮಪಡಿಸುವಲ್ಲಿ ನಮ್ಮ ಹೋರಾಟವನ್ನು ಇನ್ನೂ ತೀವ್ರಗೊಳಿಸಬೇಕು. ಏಕೆಂದರೆ ಮಹಿಳಾ ಪರ ಸರ್ಕಾರಿ ಮತ್ತು ಸಾರ್ವಜನಿಕ ವ್ಯವಸ್ಥೆಗಳು ಕಡಿಮೆ ಇದ್ದರೂ ಗುಣಮಟ್ಟ ಚೆನ್ನಾಗಿದೆ.

ಮಹಿಳೆಯರ ಪರಿಸ್ಥಿತಿಯನ್ನು ಸುಧಾರಿಸಲು ಅಮೆರಿಕದ ಮೇಲೆ ಭಾರತ ಒತ್ತಡ ಹೇರುವ ದಿನ ಬೇಗ ಬರಲಿ ಎಂದು ಆಶಿಸೋಣವೆ? ಅಮೆರಿಕದ ಜನರ ಪ್ರಕಾರ ಅಮೆರಿಕದಲ್ಲಿ ಮಹಿಳೆ ಮತ್ತು ನ್ಯಾಯ ವ್ಯವಸ್ಥೆ ಚೆನ್ನಾಗಿದೆ ಹಾಗೂ ಮಹಿಳೆಯರ ರಕ್ಷಣೆಯಾಗುತ್ತಿದೆ ಎಂದು ಖಂಡಿತ ಹೇಳಲು ಸಾಧ್ಯವಿಲ್ಲ. ಆದರೆ ಅವರ ಪ್ರಕಾರ 10 ವರ್ಷಗಳ ಹಿಂದಕ್ಕೆ ಹೋಲಿಸಿದರೆ ಇಂದಿನ ಸ್ಥಿತಿ ಉತ್ತಮವಾಗಿದೆ.

ಅಮೆರಿಕದಲ್ಲಿಯ 'ಮಹಿಳೆ ಮತ್ತು ನ್ಯಾಯ' ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳಲು 14 ದೇಶಗಳಿಂದ ಭೇಟಿ ನೀಡಿದ ಸದಸ್ಯರುಗಳ ತಂಡ ಪ್ರತಿ ಸಭೆಗಳಲ್ಲಿ ಹೇಳಿಕೊಂಡ ವಿಷಯವೆಂದರೆ ಅಮೆರಿಕವು ಇನ್ನೂ ಕೂಡ ಮಹಿಳೆಯರ ವಿರುದ್ಧ ತಾರತಮ್ಯ ತೊಲಗಿಸುವಲ್ಲಿ ಅಂತರರಾಷ್ಟ್ರೀಯ ಒಡಂಬಡಿಕೆಗೆ ತನ್ನ ಹಸ್ತಾಕ್ಷರ ಹಾಕದೇ ಇರುವುದು. ಒಡಂಬಡಿಕೆಯು 1981 ಸೆಪ್ಟಂಬರ್ 03 ರಂದು ಜಾರಿಗೆ ಬಂದು 99 ದೇಶಗಳು ಹಸ್ತಾಕ್ಷರ ಹಾಕಿದರೂ ಅಮೇರಿಕ ಇಂದಿಗೂ ತನ್ನ ಹಸ್ತಾಕ್ಷರ



ನೀಡಿಲ್ಲ. ಹಾಗಾಗಿ ಇಂದಿಗೂ ಅಲ್ಲಿಯ ಮಹಿಳೆಯರಿಗೆ ಹಿಂಸೆ ಮುಕ್ತ ಸಮಾಜ ದೊರೆಯದಿರುವುದು. ಇದರಿಂದಾಗಿ ಅವರ ಮಹಿಳೆ ಮತ್ತು ನ್ಯಾಯವ್ಯವಸ್ಥೆಯ ಬಗ್ಗೆ ನಮಗೆ ತಿಳುವಳಿಕೆ ನೀಡುವ ಪ್ರಸ್ತಾವನೆಯನ್ನು ಅರ್ಥೈಸಿಕೊಳ್ಳಲು ನಮಗೆಲ್ಲರಿಗೂ ಮುಜುಗರವುಂಟು ಮಾಡುತ್ತಿರುವುದುರ ಬಗ್ಗೆ ಖೇದ ವ್ಯಕ್ತಪಡಿಸುತ್ತಿದ್ದೆವು.

ಅಮೇರಿಕದ ಅಧ್ಯಕ್ಷ ಬರಾಕ್ ಒಬಾಮಾರಿಂದಾಗಿ ನೆನೆಗುದಿಗೆ ಬಿದ್ದ ಮಹಿಳಾ ವಿಷಯಗಳು ಪುನಶ್ಚೇತನಗೊಳ್ಳುತ್ತಿವೆ ಎನ್ನುವ ಭರವಸೆ ಅಲ್ಲಿಯ ಮಹಿಳೆಯರಿಗಿದೆ. ಸಮಾನವೇತನ ಮತ್ತು ಮಹಿಳೆಯರ ವಿರುದ್ಧ ತಾರತಮ್ಯ ತೊಲಗಿಸುವಲ್ಲಿ ಅಂತರರಾಷ್ಟ್ರೀಯ ಒಡಂಬಡಿಕೆ ಬೇಗನೆ ಅಮೇರಿಕದಿಂದ ಗುರುತಿಸಲ್ಪಡಲಿ, ಜೀವಂತವಾಗಲಿ ಎಂದು ಆಶಿಸೋಣ.

ಅಂತರರಾಷ್ಟ್ರೀಯ ಮಹಿಳೆಯರ ಹಕ್ಕುಗಳ ಚಲನಾವೀಕ್ಷಣೆ (ಇಂಟರ್‌ನ್ಯಾಷನಲ್ ವುಮೆನ್ಸ್ ರೈಟ್ಸ್ ಆಕ್ಷನ್ ವಾಚ್) ಇದರ ನಿರ್ದೇಶಕ ಮಾರ್ಷಾ ಫ್ರೀಮಾನ್‌ರವರ ಪ್ರಕಾರ ಈ ಸಂಸ್ಥೆಯ, ಸಂಯುಕ್ತ ರಾಷ್ಟ್ರಗಳಿಗೆ ಮಹಿಳೆಯರ ವಿರುದ್ಧ ತಾರತಮ್ಯ ತೊಲಗಿಸುವಲ್ಲಿ ಅಂತರರಾಷ್ಟ್ರೀಯ ಒಡಂಬಡಿಕೆ ಬಗ್ಗೆ ವರದಿ ಕಳುಹಿಸುವಲ್ಲಿ ನೆರವು ನೀಡುವುದರ ಮೂಲಕ ಪ್ರಮುಖ ಪಾತ್ರ ವಹಿಸುತ್ತಿದೆ. ಅಮೇರಿಕದಲ್ಲಿನ ರಾಜಕೀಯ ಸಂಸ್ಕೃತಿಯನ್ನು ಸಂಯುಕ್ತ ರಾಷ್ಟ್ರಗಳ ಒಡಂಬಡಿಕೆಯ ಮೂಲಕ ಉತ್ತೇಜಿಸುವುದು ಹಾಗೂ ಮಹಿಳಾ ಅಭಿವೃದ್ಧಿ ಮತ್ತು ಸಮಾನತೆಯನ್ನು ಅಂತರರಾಷ್ಟ್ರೀಯ ಮಾನವ ಹಕ್ಕು ನಿಯಮ ಮತ್ತು ಪ್ರಕಾರ್ಯಗಳನ್ನು ಅನುಸರಿಸುವುದರಿಂದ ಮಾತ್ರ ಕಾರ್ಯರೂಪಕ್ಕೆ ತರಬಹುದು ಎನ್ನುವುದೇ ಇದರ ಮೂಲಮಂತ್ರ. ಎಲ್ಲಾ ಅಂತರರಾಷ್ಟ್ರೀಯ ಮಾನವ ಹಕ್ಕುಗಳನ್ನು ಕುರಿತ ಒಡಂಬಡಿಕೆಯಲ್ಲಿ ಮಹಿಳಾಪರ ಹಕ್ಕುಗಳ ಬಗ್ಗೆಯೂ ಗಮನಹರಿಸುವಂತೆ ಕಾರ್ಯ ನಡೆಸುತ್ತಾರೆ. ಇವರ ಪ್ರಕಾರ ಬೇರೆಯವರಿಗೆ ತಮ್ಮ ಕಾರ್ಯದ ನೆಲವನ್ನು ಊಳಲು ಬಿಡುವುದನ್ನು ಯಾರೂ ಪ್ರೋತ್ಸಾಯಿಸದೇ ಇರುವಲ್ಲಿಯ ಧೋರಣೆಗಳೇ ಅಮೇರಿಕ ಇಂದಿಗೂ ಮಹಿಳೆಯರ ವಿರುದ್ಧ ತಾರತಮ್ಯ ತೊಲಗಿಸುವಲ್ಲಿ ಅಂತರರಾಷ್ಟ್ರೀಯ ಒಡಂಬಡಿಕೆಗೆ ಹಸ್ತಾಕ್ಷರ ಹಾಕದೇ ಇರುವ ಮುಖ್ಯ ಕಾರಣವಾಗಿದೆ ಎನ್ನುತ್ತಾರೆ. ಅಮೇರಿಕ ನಿರಂತರವಾಗಿ ಸಂಶಯಾಸ್ಪದ ನಿಲುವನ್ನು ಸಂಯುಕ್ತ ರಾಷ್ಟ್ರ ಒಡಂಬಡಿಕೆಗಳ ಮೇಲೆ ತಾಳುತ್ತಲೇ ಇದೆ. ತನ್ನ ಸಾರ್ವಭೌಮತ್ವ ಎಲ್ಲಕ್ಕಿಂತ ಮಿಗಿಲು ಎಂದು ಅಮೇರಿಕ ಅಂತರರಾಷ್ಟ್ರೀಯ ಒಡಂಬಡಿಕೆಗೆ ಹಸ್ತಾಕ್ಷರ ಹಾಕದೇ ಇರುವುದು ಹಾಗೂ ಸಂಯುಕ್ತ ರಾಷ್ಟ್ರಗಳ ಒಡಂಬಡಿಕೆಯಿದ ದೂರ ಉಳಿದಿರುವುದು ಪ್ರಶ್ನಾರ್ಹವಾಗಿದೆ.

ಅಮೇರಿಕದಲ್ಲಿ ಕೌಟುಂಬಿಕ ದೌರ್ಜನ್ಯದ ವಿರುದ್ಧ ಕಾಯಿದೆ ಅನೇಕ ಮೂಲಭೂತ ಸಂಪ್ರದಾಯಿಸ್ಥ ನಿಲುವುಗಳಿಂದಾಗಿ ಹಿಂಸೆಯನ್ನು ನಿಲ್ಲಿಸುವಲ್ಲಿ ಸೋಲುತ್ತಿದೆ. ಅಲ್ಲದೇ, ಮಹಿಳೆಯ ಮೇಲೆ ಲೈಂಗಿಕ ಹಲ್ಲೆ ವಿರುದ್ದದ ಚಳುವಳಿ ಕೌಟುಂಬಿಕ ಹಿಂಸೆಯಿಂದ ಮಾರುದೂರದಲ್ಲಿದೆ. ಇವುಗಳಿಗೆ ಸಂಬಂಧ ಕಲ್ಪಿಸುವಲ್ಲಿ ಲೀಗಲ್ ಎಂಪವರ್‌ಮೆಂಟ್ ಅಂಡ್ ಅಪೀಲ್ಸ್ ಪ್ರಾಜೆಕ್ಟ್ಸ್ ಸಂಸ್ಥೆಯು ಶ್ರಮಿಸುತ್ತಿದೆ.

ಅಮೇರಿಕದ ಜೈಲಿನಲ್ಲಿರುವ 10ರಲ್ಲಿ 9ರಷ್ಟು ಜನರು ಕೌಟುಂಬಿಕ ಹಿಂಸೆಗೆ ಗುರಿಯಾದವರೇ ಆಗಿರುತ್ತಾರೆ. ಆ ಹಿಂಸೆಯನ್ನು ಸಹಿಸಿ, ಬದುಕಿರುತ್ತಾರೆ ಮತ್ತು ಹೆಚ್ಚಾಗಿ ಇಂತಹ ಸಂದರ್ಭದಲ್ಲಿ ಪೊಲೀಸ್ ಸರಿಯಾಗಿ ತನಿಖೆ ನಡೆಸದೇ, ಅಪರಾಧಿ ಎಂಬ ಪಟ್ಟ ಕಟ್ಟಿ, ಸರ್ಕಾರಿ ವಕೀಲರಿಂದ ನಡೆದ ವಿಷಯಗಳ ಸರಿಯಾದ ಪ್ರಸ್ತಾಪವಿಲ್ಲದೇ ನ್ಯಾಯಾಲಯವು ಹಿಂಸೆ ಅನುಭವಿಸಿದ ಮಹಿಳೆಯನ್ನೇ ದೋಷಿಯಾಗಿ ಪರಿಗಣಿಸುತ್ತಿದೆ. ಏವನ್ ಗ್ಲೋಬಲ್ ಸೆಂಟರ್ ಫಾರ್ ವುಮೆನ್ ಅಂಡ್ ಜಸ್ಟಿಸ್ ಅಟ್ ಕಾರ್ನೆಲ್ ಯೂನಿವರ್ಸಿಟಿ ಲಾ ಸ್ಕೂಲ್, ಕಾರ್ನೆಲ್ ಈ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸುತ್ತಿದೆ. ಅಮೇರಿಕದಲ್ಲಿ ಪ್ರತಿ 8.1 ಸೆಕೆಂಡ್‌ಗೆ ಮಹಿಳೆಯ ಮೇಲೆ ದೈಹಿಕ ದೌರ್ಜನ್ಯ, 1.5 ಸೆಕೆಂಡ್‌ಗಳಿಗೆ ಮಾತಿನ ಅಥವಾ ಭಾವನಾತ್ಮಕ ದೌರ್ಜನ್ಯ ನಡೆಯುತ್ತಿದೆ. ಎಲ್ಲಾ ದೇಶಗಳಲ್ಲೂ ಕೌಟುಂಬಿಕ ಸ್ತರಗಳಲ್ಲಿ ಹೆಚ್ಚಿನ ಮಹಿಳೆಯರು ಹಿಂಸೆ ಅನುಭವಿಸುತ್ತಿದ್ದಾರೆ. ನ್ಯಾಯಾಲಯದ ಎದುರು ಕೆಲವೇ ಮಹಿಳೆಯರು ರಕ್ಷಣೆಗಾಗಿ ಹೋಗುತ್ತಾರೆ. ಆದರೆ, ತಮ್ಮ ಭವಿಷ್ಯ, ರಕ್ಷಣೆ, ಪ್ರಾಣಭಯ, ಮಕ್ಕಳ ಜವಾಬ್ದಾರಿ ಮತ್ತು ತನ್ನನ್ನೇ ದೋಷಿಯಾಗಿ ಪರಿಗಣಿಸುವ ಮನೋಭಾವಗಳಿಂದಾಗಿ ಹೆಚ್ಚಿನ ಮಹಿಳೆಯರು ದೂರು ಕೊಡದೇ, ಹಿಂಸೆಯೊಂದಿಗೆ ಸಾಮರಸ್ಯದಿಂದ ಬದುಕುತ್ತಿದ್ದಾರೆ. ಸರ್ಕಾರವೂ ಕೂಡ ಮಹಿಳೆಯರ ರಕ್ಷಣಾ ವಿಷಯದಲ್ಲಿ ಅತಿಯಾದ ಉದಾಸೀನ ತೋರುತ್ತಿದ್ದು, ಉತ್ತಮ ಸೌಲಭ್ಯ, ನೆರವುಗಳನ್ನು ಸಕಾಲಕ್ಕೆ ಕಲ್ಪಿಸದೇ ಮಹಿಳೆ ಅತೀ ಕಷ್ಟಪರಿಸ್ಥಿತಿಯಲ್ಲಿ ನೇಣಿಗೆ ಶರಣಾಗುವ ಪರಿಸ್ಥಿತಿಯನ್ನು ಉಂಟುಮಾಡುತ್ತಿರುವುದು ದೊಡ್ಡ ದುರಂತ.

ರಾಜಕೀಯ ಹಂತದಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಿಸಿ ಮಹಿಳೆಯರ ಸಮಸ್ಯೆಗೆ ಸ್ಪಂದಿಸುವ ಅವಕಾಶ ಹೆಚಿಸುವಲ್ಲಿ ಮೇರಿಲ್ಯಾಂಡ್‌ನಲ್ಲಿ ಸಕ್ರಿಯ ಹೋರಾಟ ನಡೆಯುತ್ತಿದೆ. ಮೇರಿಲ್ಯಾಂಡ್ ಸಾರ್ವತ್ರಿಕ ಸಭೆಯಲ್ಲಿ ಶೇ.31ರಷ್ಟು ಮಹಿಳೆಯರಿದ್ದು, ಮಹಿಳೆಯರ ಜೀವನದ ಮೇಲೆ ಪರಿಣಾಮ ಬೀರುವ ವಿಷಯಗಳ ನೀತಿಸಂಹಿತೆಯನ್ನು ರೂಪಿಸುವಲ್ಲಿ ಸಕ್ರಿಯವಾಗಿ ಭಾಗವಹಿಸಿ, ಮಹಿಳಾ ಭಾಗವಹಿಸುವಿಕೆಯನ್ನು ಇಂತಹ ವಿಷಯಗಳಲ್ಲಿ ಹೆಚ್ಚಿಸಿ, ಮಹಿಳಾ ನ್ಯಾಯವನ್ನು ಅಭಿವೃದ್ಧಿಪಡಿಸಿ, ಮಹಿಳಾ ಕಾಕಸ್ ಅನ್ನು ರಚಿಸಿ, ಮಹಿಳೆಯರ ಬಾಳಿಗೆ ಧೈರ್ಯ ಮತ್ತು ಭರವಸೆಯನ್ನು ಮೂಡಿಸುತ್ತಿದೆ.

ಅಮೇರಿಕ ಸರ್ಕಾರದ ವರದಿಯ ಪ್ರಕಾರ ಕೌಟುಂಬಿಕ ಹಿಂಸೆ ತಡೆ ಮತ್ತು ಸೇವೆಗಳ ಕಾಯಿದೆ-1984 ರಲ್ಲಿ ದೇಶಾದ್ಯಂತ ಹಿಂಸೆ ವಿರುದ್ಧ ಸ್ಪಂದಿಸುವ ಕಾರ್ಯವನ್ನು, ಮಹಿಳೆಯರಿಗೆ ಆಶ್ರಯ ಒದಗಿಸುವ ಮತ್ತು ಸಮುದಾಯಗಳೊಂದಿಗೆ ವಿವಿಧ ಕಾರ್ಯಕ್ರಮದಿಂದ ಜಾಗೃತಿ ಮೂಡಿಸುವ ಕಾರ್ಯವನ್ನು ನಡೆಸುತ್ತಿದೆ. ಈ ಕಾಯಿದೆಯಿಂದಾಗಿ ಜೊತೆಗಾರನಿಂದ ಆಗುತ್ತಿರುವ ಹಿಂಸೆ ಶೇ.63ರಷ್ಟು ಇಳಿಮುಖವಾಗಿದೆ ಮತ್ತು ನಿಕಟ ಜೊತೆಗಾರನಿಂದ ಕೊಲ್ಲಲ್ಪಡುವ ಮಹಿಳೆಯ ಸಂಖ್ಯೆ ಶೇ.24 ಕಡಿಮೆಯಾಗಿದೆ. (2008, ಅಮೇರಿಕ ನ್ಯಾಯ ಇಲಾಖೆ). ಅಮೇರಿಕದಲ್ಲಿ ಪ್ರತಿದಿನ ಸರಾಸರಿ 03 ಮಹಿಳೆಯರು ತಮ್ಮ ಹಿಂದಿನ ಅಥವಾ ಇಂದಿನ ಜೊತೆಗಾರನಿಂದ ಕೊಲೆಯಾಗುತ್ತಿದ್ದಾರೆ. (ನ್ಯಾಯಕಛೇರಿ-2001)

15.5 ಮಿಲಿಯನ್ ಮಕ್ಕಳು ಈ ಹಿಂಸೆಗಳನ್ನು ನೋಡಿ, ಬೆಳೆಯುತ್ತಿದ್ದು ಅವರ ಜೀವನ ರೂಪಿಸಲು ವಿಶೇಷ ಸೇವೆಗಳ ಅಗತ್ಯತೆ ಇದೆ. ಇಂತಹ ಮಕ್ಕಳು ಆತ್ಮಹತ್ಯೆ, ಮಧ್ಯ ಮತ್ತು ಮಾದಕದ್ರವ್ಯಗಳ ಸೇವನೆ, ಮನೆಯಿಂದ ಪಲಾಯನ, ಚಿಕ್ಕವಯಸ್ಸಿನಲ್ಲಿ ವೇಶ್ಯಾವೃತ್ತಿಗೆ ಇಳಿಯುವುದು ಮತ್ತು ಲೈಂಗಿಕ ದೌರ್ಜನ್ಯದಲ್ಲಿ ಭಾಗಿಗಳಾಗುವ ಸಂದರ್ಭ ಜಾಸ್ತಿಯಾಗಿರುತ್ತದೆ.

ಅಮೇರಿಕ ಕೌಟುಂಬಕ ಹಿಂಸೆಗಳನ್ನು ಎದುರಿಸುತ್ತಿರುವ ಕುಟುಂಬದ ನೆರವಿಗೆ ಮತ್ತು ನೊಂದವರ ವೈದ್ಯಕೀಯ ಸೇವೆಗಳಿಗೆ ಡಾಲರ್ 5.8 ಬಿಲಿಯನ್ ಮತ್ತು ಡಾಲರ್ 4.1 ಬಿಲಿಯನ್ಸ್ ಅನ್ನು ಕ್ರಮವಾಗಿ ವೆಚ್ಚ ಮಾಡಿದೆ. (2003, ರಾಷ್ಟ್ರೀಯ ಹಾನಿತಡೆ ಮತ್ತು ನಿಯಂತ್ರಣ ಕೇಂದ್ರ)

ಕೌಟುಂಬಿಕ ಹಿಂಸೆಯನ್ನು ಆಫ್ರಿಕ-ಅಮೆರಿಕನ್ನರ ಸಮಾಜದಲ್ಲಿ ತೊಡೆದುಹಾಕುವಲ್ಲಿ, ಅದರ ವಿರುದ್ಧ ಜಾಗೃತಿ ಮೂಡಿಸಿ, ಸಮಾಜವನ್ನು ಸಬಲಗೊಳಿಸುವಲ್ಲಿ 1993ರಿಂದ ಪಂಡಿತರ ಮತ್ತು ಪ್ರಾಯೋಗಿಕ ತಜ್ಞರುಗಳು ಸಂಸ್ಥೆಯನ್ನು ನಡೆಸುತ್ತಿದ್ದು, ಇನ್ಸ್ಟಿಟ್ಯೂಟ್ ಆನ್ ಡೊಮೆಸ್ಟಿಕ್ ವೈಲೆನ್ಸ್ ಇನ್ ದಿ ಆಫ್ರಿಕನ್-ಅಮೆರಿಕನ್ ಕಮ್ಯುನಿಟಿ ಸಂಸ್ಥೆಯು ಶ್ರಮಿಸುತ್ತಿದೆ. ಈ ಸಂಸ್ಥೆಯು ಈ ಸಮಸ್ಯೆಗೆ ಮುಖ್ಯ ವಾಹಿನಿಯ ಪರಿಹಾರಗಳನ್ನು ಹೊಂದಿಸುವುದು ಸಾಧ್ಯವಿಲ್ಲ. ಅವರ ಸನ್ನಿವೇಶಗಳು, ಸಮಸ್ಯೆಗಳು ವಿಶೇಷವಾಗಿದ್ದು, ಅದನ್ನು ಗಮನದಲ್ಲಿರಿಸಿ, ಪರಿಹಾರ ಒದಗಿಸಬೇಕೆಂದು ಪ್ರತಿಪಾದಿಸುತ್ತಿದ್ದಾರೆ.

ಯಂಗ್ ವುಮೆನ್ ಕ್ರಿಶ್ಚಯನ್ ಅಸೋಸಿಯೇಷನ್, ಕ್ಲೀವ್‌ಲ್ಯಾಂಡ್ ಸಂಸ್ಥೆಯು 18ರಿಂದ 24 ವರ್ಷದವರಿಗೆ ವಿಶೇಷ ವಸತಿ ಮತ್ತು ಬೆಂಬಲ ನೀಡುತ್ತದೆ. ಸದರಿ ಅಮೆರಿಕದ ಸರ್ಕಾರಿ ಗೃಹಗಳಲ್ಲಿ 18 ರಿಂದ 20 ವರ್ಷದವರೆಗೆ ಮಾತ್ರ ಆಶ್ರಯ ನೀಡುತ್ತಾರೆ. ಹಾಗಾಗಿ ಈ ನಿಟ್ಟಿನಲ್ಲಿ ಇಂತಹ ಬೆಂಬಲ ಅರ್ಥಪೂರ್ಣವೆನಿಸಿದೆ. ಸರ್ಕಾರಿ ಆಶ್ರಯದಲ್ಲಿರುವಾಗ ಸ್ವಂತವಾಗಿ ದುಡಿದು ತಿನ್ನುವಷ್ಟು ಕುಶಲತೆಯನ್ನು ರೂಪಿಸಿಕೊಳ್ಳಲು ಬೆಂಬಲ ಸಿಗದ ಸಂದರ್ಭಗಳೇ ಜಾಸ್ತಿ. ಹಾಗಾಗಿ ಇಂತಹ ನೆರವು ಅಗತ್ಯ. ಇಲ್ಲಿನ ಆಶ್ರಯ ಪಡೆದ ಮಹಿಳೆಯರಿಗೆ ಪೌರಸಂಸ್ಥೆಗಳಲ್ಲಿಯೂ ಕೆಲಸ ಗಳಿಸುವಲ್ಲಿ ಸಹಕಾರ ದೊರೆತು ಈ ನಿಟ್ಟಿನಲ್ಲಿ ಜಯಗಳಿಸಿದ್ದಾರೆ. ಸಂಸ್ಥೆಯಲ್ಲಿ ಎಲ್ಲರಿಗೂ ಸಮಾನತೆ ವಾಸ್ತವವಾಗಲಿ, ಸವಾಲಲ್ಲ ಎನ್ನುವ ನಿಲುವಿನಿಂದ ದುಡಿಮೆ ಸಾಗಿದ್ದು ವಿಧ್ಯಾಭ್ಯಾಸ ಪಡೆಯಲು, ಆಶ್ರಯವಿಲ್ಲದಂತೆ ಆಗದಂತೆ ತಡೆಯಲು ಮತ್ತು ಜೀವನ ಹಾಗು ನೌಕರಿ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸಲು ಸಹಾಯ ಮಾಡುತ್ತಾರೆ.

ಕೌಟುಂಬಿಕ ಹಿಂಸೆ ಮತ್ತು ದೌರ್ಜನ್ಯವು ಅಂತರರಾಷ್ಟ್ರೀಯ ಮಟ್ಟದಲ್ಲಿ ಎಲ್ಲಾ ಕುಟುಂಬವು ಎದುರಿಸುತ್ತಿರುವ ಸಮಸ್ಯೆಯಾಗಿದ್ದು, ಕುಟುಂಬವನ್ನು ಹಿಂಸೆಮುಕ್ತಗೊಳಿಸುವಲ್ಲಿ ಹೆಚ್ಚಿನ ಕಾರ್ಯ ನಡೆಸುವ ಅಗತ್ಯವಿದೆ.

ಅಲ್ಲಿಯ ಆಡಳಿತ ನೀತಿಗಳಲ್ಲಿ ಆದಷ್ಟು ಮಹಿಳೆಯರ ವಿಷಯ ಗಳಿಗೂ ಪ್ರಾಮುಖ್ಯತೆ ಕೊಡುವತ್ತ, ಅಮೆರಿಕದ ರಾಜ್ಯ ನೀತಿ ಸಲಹೆಗಾರರು ಶ್ರಮಿಸುತ್ತಿದ್ದಾರೆ. ಎಲ್ಲಾ ದೇಶಗಳಲ್ಲೂ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಎಲ್ಲಾ ವಿಷಯಗಳಲ್ಲೂ ಕೊಡುವಂತೆ ಆದಷ್ಟು ಶ್ರಮ ವಹಿಸುತ್ತಿದ್ದಾರೆ. ಅಂತರರಾಷ್ಟ್ರಿಯ ಮಟ್ಟದಲ್ಲಿ ಪೋಷಕರಿಂದ ನಡೆಯುವ ಮಕ್ಕಳ ಅಪಹರಣ, ದತ್ತು ವಿಷಯಗಳನ್ನು ಕೂಲಂಕುಷವಾಗಿ ಪರೀಕ್ಷಿಸಲಾಗುತ್ತದೆ.

1963ರಿಂದ ಮಹಿಳೆಗೆ ಸಮಾನ ವೇತನ ನೀಡಬೇಕೆನ್ನುವ ಕಾನೂನು ಇದ್ದರೂ ಕೂಡ ಅಮೇರಿಕದಲ್ಲಿ ನಮ್ಮ ದೇಶದ ಹಾಗೆ ಅದರ ಪಾಲನೆ ಇಂದಿಗೂ ನಡೆಯುತ್ತಿಲ್ಲ. ಸಮಾನವೇತನ ನೌಕರಿ ಆಯೋಗದೆದುರು ದೂರನ್ನು ಸಲ್ಲಿಸುವ ಅವಕಾಶವಿದೆ. ಆದರೆ, ತಾರತಮ್ಯವನ್ನು ಪ್ರಶ್ನಿಸುವ ಮಹಿಳೆಯರು ತುಂಬಾ ಕಡಿಮೆ. ಇವತ್ತಿಗೂ ಕೂಡ ಅಮೇರಿಕದಲ್ಲಿ ಮಾತೃತ್ವ ಹಕ್ಕು ಮತ್ತು ಗರ್ಭಪಾತಗಳ ಬಗ್ಗೆ ಮಾತನಾಡುವುದು ಕಷ್ಟಸಾಧ್ಯ. ಮೂಲಭೂತ ಸಂಪ್ರದಾಯಸ್ಥ ಮನೋಭಾವದ ಜನರಿಂದಾಗಿ ಮಹಿಳಾಪರ ಕಾನೂನು ಬದಲಾವಣೆ ಗಳಿಲ್ಲದೆ ಅಧಿಕ ಮಹಿಳೆಯರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅಮೆರಿಕದ ಮುಕ್ತ ಸಮಾಜದಲ್ಲಿ ಈ ಹಕ್ಕುಗಳಿಗೆ ಪ್ರಾಮುಖ್ಯತೆ ಜಾಸ್ತಿ ಇದೆ. ಆದರೂ ಬದಲಾವಣೆಗಳು ಕನಸಾಗಿಯೇ ಉಳಿದಿವೆ.



14–16 ವರ್ಷದ ಬಾಲಕಿಯರು ಮುಕ್ತ ಸಮಾಜದಲ್ಲಿ ಲೈಂಗಿಕ ಆಸಕ್ತಿಗಳಲ್ಲಿ ಬಳಸಲ್ಪಟ್ಟು ಗರ್ಭಧರಿಸುವುದು ದೊಡ್ಡ ಸಮಸ್ಯೆಯಾಗಿದೆ. ಚಿಕ್ಕ ಪ್ರಾಯದಲ್ಲಿಯೇ ಈ ಹೆಣ್ಣುಮಕ್ಕಳು ಇಂತಹ ಸಂಬಂಧಗಳಿಂದ ಹಿಂಸೆಯನ್ನು ಕೂಡ ದೊಡ್ಡ ಪ್ರಮಾಣದಲ್ಲಿ ಅನುಭವಿಸುತ್ತಿದ್ದು, ಅವರಿಗೆ ಸೂಕ್ತ ಕಾನೂನಿನ ರಕ್ಷಣೆ ಇಲ್ಲವಾಗಿದೆ. ಆದರೆ, ಚಿಕ್ಕಪ್ರಾಯದಲ್ಲಿಯೇ ಗರ್ಭ ಧರಿಸುವ ಹೆಣ್ಣುಮಕ್ಕಳಿಗೆ ತಾಯಿಕರ್ತವ್ಯ ನಿರ್ವಹಿಸುವಲ್ಲಿ ಬೇಕಾದ ಕೌಶಲ್ಯವನ್ನು ಹೇಳಿಕೊಡುವ ವ್ಯವಸ್ಥೆ ಇದೆ. ಆದರೆ, ಗರ್ಭಪಾತವನ್ನು ಯಾರೂ ಬೆಂಬಲಿಸುವುದಿಲ್ಲ. ಗಾಢವಾದ ಸಂಪ್ರದಾಯಸ್ತ ನಂಬಿಕೆಗಳು ಹೆಣ್ಣುಮಕ್ಕಳನ್ನು ಅವರ ಬಾಲ್ಯದಿಂದ ವಂಚಿಸಿ, ತಾಯಿಯರನ್ನಾಗಿ ಮಾಡುತ್ತಿದೆ. ಇಂದಿಗೂ ದೈವನಂಬಿಕೆ ಯಿಂದ ಕೆಲಸ ಮಾಡುವ ಸಂಸ್ಥೆಗಳಿಗೆ ಮಾತ್ರ ಅತಿಯಾದ ಬೆಂಬಲ ಅಲ್ಲಿದೆ ಎನ್ನುವುದು ಸತ್ಯ. ಇದು ಮಹಿಳಾಪರ ನ್ಯಾಯಹೋರಾಟವನ್ನು ಕಠಿಣಗೊಳಿಸುತ್ತಿದೆ ಎನ್ನುವುದು ಅಷ್ಟೇ ಸತ್ಯ. ಅಲ್ಲದೆ ಅಮೆರಿಕದಲ್ಲಿ 60 ಮಂದಿ ಅತ್ಯಂತ ಹೆಚ್ಚು ಆದಾಯ ಗಳಿಸುವವರಲ್ಲಿ ಬರೀ 4 ಮಂದಿ ಮಾತ್ರ ಮಹಿಳೆ. ಉತ್ತರ ಒಹಿಯೊದಲ್ಲಿ 48 ಹೆಚ್ಚು ಆದಾಯವಿರುವ ಸಿಇಒರಲ್ಲಿ 4 ಮಂದಿ ಮಾತ್ರ ಮಹಿಳೆಯರು ಇರುವುದು ಸತ್ಯ.

ಭಾರತದಲ್ಲಿ ಸೇವೆಗಳ ಕೊರತೆಯಿಂದಾಗಿ ಹೆಚ್ಚಿನ ಮಹಿಳೆಯರು ಕೌಟುಂಬಕ ಹಿಂಸೆಯನ್ನು (ದೈಹಿಕ ಮತ್ತು ಮಾನಸಿಕ) ಮೌನವಾಗಿ ಅನುಭವಿಸುತ್ತಿರುವುದು ಸರ್ವೆ ಸಾಮಾನ್ಯವಾಗಿದೆ. ಹಿಂಸೆ ನೀಡುವ ಕುಟುಂಬದೊಂದಿಗೆ ಕೆಲಸ ಮಾಡುವಲ್ಲಿ ಸರ್ಕಾರ ಯಾವುದೇ ರೀತಿಯ ರೂಪುರೇಖೆಗಳನ್ನು ಹೊಂದಿಲ್ಲ. ಪೊಲೀಸ್ ಇಲಾಖೆಯು ಹಿಂಸೆಯನ್ನು ಪ್ರಶ್ನಿಸುವ ಮಹಿಳೆಯರಿಗೆ ಹಿಂಸೆಯನ್ನು ಸಹಿಸಿ, ಕುಟುಂಬದೊಂದಿಗೆ ಬದುಕುವ ಜವಾಬ್ದಾರಿ ಹೇರುತ್ತಿರುವುದು ಸಾಮಾನ್ಯವಾಗಿದೆ. ಈ ಹಿಂಸೆಯನ್ನು ಕಣ್ಣಾರೆ ನೋಡಿ, ಬೆಳೆಯುತ್ತಿರುವ ಪುಟ್ಟ ಮಕ್ಕಳಿಗಾಗಿ ವಿಶೇಷರೀತಿಯಲ್ಲಿ ಯಾವುದೇ ರೀತಿಯ ಸುಂದರ ಬದುಕನ್ನು ರೂಪಿಸುವಲ್ಲಿ ಬೆಂಬಲ ಸಿಗುತ್ತಿಲ್ಲ. ಹೀಗಾಗಿ, ಕುಟುಂಬದ ಹಿಂಸೆಯನ್ನು ತೊಡೆದುಹಾಕುವಲ್ಲಿ ಕುಟುಂಬದೊಂದಿಗೆ ಶ್ರಮಿಸಲು ನುರಿತ ಜನರಿರುವ ವಿಶೇಷ ಕೇಂದ್ರಗಳನ್ನು ಸ್ಥಾಪಿಸಿ, ಕುಟುಂಬದ ಸಾಮರಸ್ಯವನ್ನು ಕಾಯ್ದುಕೊಳ್ಳುವಲ್ಲಿ ಪ್ರೋತ್ಸಾಹ ನೀಡುವ ಅಗತ್ಯತೆ ಇದೆ. ಮಹಿಳೆಗೆ ಈ ರೀತಿಯ ಸೇವೆ ನೀಡಿದಲ್ಲಿ, ತನ್ನ ಜೀವನವನ್ನು ನೆಮ್ಮದಿಯಿಂದ ಸಾಗಿಸಲು ಸಹಕಾರಿಯಾಗುತ್ತದೆ. ಸರಕಾರಿ ವಸತಿ ಗೃಹಗಳು ನಮ್ಮಲ್ಲಿ ಮಹಿಳೆಯ ಬದುಕನ್ನು ಪುನರ್ ನಿರ್ಮಿಸಲು ಸೋತಿವೆ. ಹಾಗಾಗಿ ಮಹಿಳೆಯರ ಉತ್ತಮ ಭವಿಷ್ಯಕ್ಕಾಗಿ ಹೋರಾಟ ನಿರಂತರವಾಗಿ ನಡೆಯಬೇಕಾಗಿದೆ.

❑

ವಿಜ್ಞಾನ ಪ್ರಪಂಚದ ಅಜ್ಞಾತ ಪ್ರಚಂಡೆಯರು

■ಎಸ್.ಜಿ. ಸೀತಾರಾಮ್, ಮೈಸೂರು



ಮಹಿಳೆಯರು ಏನನ್ನೇ ಮಾಡಿದರೂ,
ಪುರುಷರಿಗಿಂತ ಅರ್ಧದಷ್ಟು ಚೆನ್ನಾಗಿ ಮಾಡಿದ್ದೇವೆ ಎಂದೆನಿಸಿಕೊಳ್ಳಲೂ,
ಅವರಿಗಿಂತ ಎರಡರಷ್ಟು ಚೆನ್ನಾಗಿ ಮಾಡಬೇಕು.
ಅದೃಷ್ಟವಶಾತ್, ಇದೇನೂ ಕಷ್ಟವಲ್ಲ.?

-ಷಾರ್ಲಟ್ ವ್ಹಿಟನ್

ನೊಬೆಲ್ ಪ್ರಶಸ್ತಿಯ ಮೂಲದಲ್ಲೇ ದ್ವಿಷಕ್ರಮವನ್ನು ಸ್ಥಾಪಿಸಿ, ಆ ಹೆಸರಿಗೇ ಲೋಕೋತ್ತರ ಘನತೆ-ಗೌರವಗಳನ್ನು ತಂದುಕೊಟ್ಟವರು ಆದ್ಯ ವೈಜ್ಞಾನಿಕೆ ಮೇರಿ ಕ್ಯೂರಿ. ಆದರೆ, ತದನಂತರದ ಅನೇಕ ಮಹೋನ್ನತ ವಿಜ್ಞಾನಸಾಧಕಿಯರು ಪ್ರಖ್ಯಾತರಾಗುವುದಿರಲಿ, ಕನಿಷ್ಠ ಗಮನವನ್ನೂ ಗಳಿಸದೆ, ಗುಟ್ಟಾಗಿ ಗತಿಸಿಹೋದುದು ಇತಿಹಾಸದ ಒಂದು ದುರಂತ. ಉದಾಹರಣೆಗಾಗಿ, ಮುಖ್ಯ ಜೀವರಾಸಾಯನಿಕ ದ್ರವ್ಯಗಳ ಸ್ವರೂಪ ನಿರ್ಣಯದಲ್ಲಿ ಕ್ಷ-ಕಿರಣ ತಂತ್ರಗಳ ಅಳವಡಿಕೆಗಾಗಿ 1964ರ ರಸಾಯನಶಾಸ್ತ್ರ ನೊಬೆಲ್ ಪಡೆದ, ಮತ್ತು ವಿಜ್ಞಾನ ಹಾಗೂ ಜಾಗತಿಕ ವಿದ್ಯಮಾನ ಕುರಿತ ಐತಿಹಾಸಿಕ ಪಗ್ವಾಷ್ ವಿಚಾರಗೋಷ್ಠಿಗಳಲ್ಲಿ ಕೇಂದ್ರಶಕ್ತಿಯಾಗಿದ್ದ ಡೋರತಿ ಹಾಡ್ಜ್‌ಕಿನ್ ಅವರ ಹೆಸರು ಎಷ್ಟು ಪರಿಚಿತವಾಗಿದೆ? ಅಂತೆಯೇ, ಮರೀಆ ಗಪರ್ಟ್-ಮೇಅರ್ ಎಂದರೆ ಯಾರೆಂಬುದನ್ನು ತಿಳಿಯಲಾದರೂ ಅದೆಷ್ಟು ಮಂದಿ ಲಕ್ಷಿಸಿದ್ದಾರು. (ಪರಮಾಣು ಕವಚ ರಚನೆ ಕುರಿತ ಫಲಿತಾಂಶಗಳಿಗಾಗಿ ಈಕೆ 1963ರ ಭೌತಶಾಸ್ತ್ರ ನೊಬೆಲ್‌ನ ಸಹ ವಿಜೇತರಾದರು ಮತ್ತು ಇಂದಿಗೂ ಮೇರಿ ಕ್ಯೂರಿ ತರುವಾಯದ 'ಜಗದೇಕ ಭೌತಶಾಸ್ತ್ರ ನೊಬೆಲ್ ಮಹಿಳೆ' ಎಂಬ ಪ್ರತಿಷ್ಠೆಯನ್ನುಳಿಸಿಕೊಂಡಿದ್ದಾರೆ.) ಅಮೆರಿಕದ ಮೊಟ್ಟಮೊದಲ ನೊಬೆಲ್ ಮಹಿಳೆ (ಗ್ಲೈಕಜನ್‌ನ ಶೀಘ್ರ ಪರಿವರ್ತನಾ ಮಾರ್ಗವನ್ನು ಗುರುತಿಸಿದ್ದಕ್ಕಾಗಿ) ಮತ್ತು ನೊಬೆಲ್ ಕೀರ್ತಿಮಂಟಪದಲ್ಲಿ ಪ್ರವೇಶ ಗೌರವ ಪಡೆದ ಪ್ರಪ್ರಥಮ ಮಹಿಳಾ ವೈದ್ಯಕೀಯ ವಿಜ್ಞಾನಿ ಗರ್ಟೀ ಕೋರೀ; ನರ ಬೆಳವಣಿಗೆಯ ಧಾತುವನ್ನು ಕಂಡು ಹಿಡಿದುದಕ್ಕಾಗಿ 1986ರ ವೈದ್ಯಕೀಯ ನೊಬೆಲ್ ಸನ್ಮಾನಕ್ಕೆ ಸಹಭಾಜನರಾಗಿ, ನೊಬೆಲ್ ಗಣ್ಯರ ಸರಣಿಯಲ್ಲಿಯೇ ಅತ್ಯಂತ ದೀರ್ಘಾಯುಯಾಗಿ ಇನ್ನೇನು 102ನೇ ಹುಟ್ಟುಹಬ್ಬವನ್ನು ಆಚರಿಸಲಿರುವ ಇಟ್ಲೀಯ ನರವಿಜ್ಞಾನ ತಜ್ಞೆ, ವಿಜ್ಞಾನವೃದ್ಧೆ ರೀಟಾ ಲೀವಿ-ಮಾಂಟ್ಲ್‌ಚೀನಿ – ಇವರಂಥವರನ್ನು ಕುರಿತೂ ಮೇಲಿನ ವಿಷಮ ಪ್ರಶ್ನೆಗಳನ್ನೇ ಮತ್ತೆ ಕೇಳಬಹುದು.

ವಿಜ್ಞಾನ ಧುರೀಣೆಯರು ಅಪ್ರಸಿದ್ಧರಾಗಿ ಉಳಿದರೇಕೆ ಎಂದೊಡನೆ ತಲೆಯೆತ್ತುವ ಒಂದು ಗಂಭೀರ ಪ್ರಶ್ನೆಯೆಂದರೆ, ಪದವಿ-ಪದಕಗಳನ್ನು, ಪ್ರಶಸ್ತಿ-ಪ್ರಶಂಸೆಗಳನ್ನು ನೀಡುವುದರಲ್ಲಿರುವ ಸ್ತ್ರೀ ವಿರೋಧಿ ವೃತ್ತಿಧೋರಣೆಯನ್ನು ಕುರಿತದ್ದು. ವಾಸ್ತವವಾಗಿ, ನೊಬೆಲ್ ಬಿರುದಾಂಕಿತೆಯರಾಗಿರಲಿ, ಬಿಡಲಿ, ತಾವು ಸ್ತ್ರೀಯರಾಗಿರುವ ಒಂದೇ ಜನ್ಮಜಾತ ಕಾರಣದಿಂದಾಗಿ, ಕಾಲಗತಿಯುದ್ದಕ್ಕೂ, ಎಲ್ಲ ಪ್ರತಿಭಾನ್ವಿತ ವಿಜ್ಞಾನವಂತೆಯರೂ, ಅವರವರ ವೃತ್ತಿಕ್ಷೇತ್ರವನ್ನು ಆಳುವ ಮಹಾಸ್ವಾಮಿಗಳ ಕೈಯಲ್ಲಿ ಒಂದಲ್ಲ ಇನ್ನೊಂದು ರೀತಿಯ ಅನಾದರ-ಅನ್ಯಾಯ, ಅಪಹಾಸ್ಯ-ಅಪಮಾನ, ಹಾಗೂ ಕಿರುಕುಳ-ಕ್ರೌರ್ಯಗಳಿಗೆ ತುತ್ತಾಗುತ್ತಲೇ ಬಂದಿದ್ದಾರೆ. ಹೀಗಾಗಿ, 1901ರಲ್ಲೇ ಪ್ರಾರಂಭವಾದ ವಿಜ್ಞಾನ ನೊಬೆಲ್ ಶ್ರೇಣಿಯಲ್ಲಿ ಈವರೆವಿಗೂ ಕೇವಲ 16 ಸ್ತ್ರೀಯರು ನೋಡಸಿಗುತ್ತಾರೆಂಬುದು ಅಷ್ಟೇನೂ ಆಶ್ಚರ್ಯಾಸ್ಪದವಾಗದು. ಈ ಸನ್ನಿವೇಶದಲ್ಲಿ ನಾಲ್ಕು ಸಾರ್ವಕಾಲಿಕ-ಶ್ರೇಷ್ಠ ವಿಜ್ಞಾನವೇತ್ತೆಯರನ್ನು ವಿಶೇಷವಾಗಿ ಪ್ರಸ್ತಾಪಿಸುವುದು ಉಚಿತವೆನಿಸುತ್ತದೆ. ವಿಜ್ಞಾನವಲಯದಲ್ಲಿ ಜನಶ್ರುತವಾಗಿರುವ ಆರೋಪಗಳಂತೆ, ಈ ನಾಲ್ವರಿಗೂ ಸಲ್ಲಬೇಕಿದ್ದ ನೊಬೆಲ್ ಹಿರಿಮೆ – ಗರಿಮೆಗಳ ಹಕ್ಕುಪಾಲನ್ನು, ಅವರದು 'ಸ್ತ್ರೀಜಾತಿ'ಎಂಬ ಒಂದೇ 'ಕಾರಣ'ದಿಂದ ಅವರಿಗೆ ನಿರಾಕರಿಸಲಾಯಿತು. ಈ ವಿಷಾದನೀಯ ಪಂಕ್ತಿಯಲ್ಲಿ ಬಹು ಪ್ರಕಟಿತ, ಪ್ರಚಲಿತ ಪ್ರಸಂಗವು ಬ್ರಿಟಿಷ್ ಆಣವಿಕ ಜೀವಭೌತಶಾಸ್ತ್ರವಿದೆ ಮತ್ತು ಕ್ಷ-ಕಿರಣ ಸ್ಫಟಿಕ ವಿಜ್ಞಾನಿ ರಾಸಲಿಂಡ್ ಫ್ರ್ಯಾಂಕ್ಲಿನ್ (1920–1958) ಅವರನ್ನು ಕುರಿತದ್ದಾಗಿದೆ. ಡಿ.ಎನ್.ಎ., ಆರ್.ಎನ್.ಎ., ವಿಷಾಣುಗಳು, ಕಲ್ಲಿದ್ದಲು, ಗ್ರ್ಯಾಫೈಟ್ ಇಂಥ ವಸ್ತುಗಳ ಆಣವಿಕ ವಿನ್ಯಾಸದ ಮರ್ಮವನ್ನು ಭೇದಿಸುವುದರಲ್ಲಿ ಕ್ರಾಂತಿಕಾರಿ ಕಾಣ್ಕೆ-ಕಾಣಿಕೆಗಳನ್ನು ಕೊಟ್ಟು, ಸಹಕರ್ಮಿ ಪುರುಷರ ನೊಬೆಲ್ ಬಹುಮಾನದಲ್ಲಿ ಭಾಗಿಯಾಗುವುದರಿಂದ ಮಾತ್ರ ವಂಚಿತರಾದ ಇವರು ಡಿ.ಎನ್.ಎ.ಯ ಗುಪ್ತ ಮಹಿಳೆ ಎಂದೇ ಕೀರ್ತಿಶೇಷರಾದರು. ನಮ್ಮದೇ ಅದ ಮೇರಿ ಕ್ಯೂರಿ ಎಂದು ಜಗದ್ವಂದ್ಯ ಐನ್‌ಸ್ಟೈನ್ ಮಹೋದಯರಿಂದಲೇ ವಂದಿಸಲ್ಪಟ್ಟು, ಅಗ್ರಮಾನ್ಯ ವಿಜ್ಞಾನಿ ಆಟೋಹಾನ್ ಅವರ ಸಹಯೋಗದೊಡನೆ ಪರಮಾಣು ವಿಭಜನೆಯನ್ನು ಸಾಧಿಸಿದ ಆಸ್ಟ್ರಿಯಾ-ಸಂಜಾತ ಸ್ವೀಡಿಷ್ ಭೌತಸಿದ್ಧಾಂತವರೇಣ್ಯೆ ಲೀಜ಼ ಮೈಟ್ನರ್ ಅವರನ್ನೂ ನೊಬೆಲ್-ವಿವಾದ ಸಾಹಿತ್ಯದಲ್ಲಿ

ಲಿಂಗಭೇದಭಾವದ ಬಲಿಪಶು ಎಂದು ಎತ್ತಿತೋರಲಾಗುತ್ತದೆ. ಇದೇ ಕಾರಣದಿಂದಾಗಿ ನೊಬೆಲ್ ಮನ್ನಣೆಗೆ ಅತಿಶಯವಾದ ಅರ್ಹತೆಯಿದ್ದೂ ಪಾತ್ರರಾಗದೇ ಹೊರಗುಳಿದ ಇನ್ನಿಬ್ಬರು ವಿಜ್ಞಾನವರಿಷ್ಠೆಯರೆಂದರೆ: ನವ್ಯಭೌತ ವಿಜ್ಞಾನಾಗ್ರೇಸರೆ ಮತ್ತು ಚೀನೀ ಮೇರಿ ಕ್ಯೂರಿ ಎಂದು ಶ್ಲಾಘಿಸಲ್ಪಟ್ಟು, ಲೋಕ ವಿಶ್ರುತ ಮ್ಯಾನ್‌ಹ್ಯಾಟ್ನ್ ಯೋಜನೆಯ ಧುರಂಧರೆಯಾಗಿ, ವಿಶ್ವದ ವಿರಾಡ್ರೂಪದ ಬಗ್ಗೆ ಅವರಿಗಿದ್ದ ಮೂಲನಕ್ಷೆಯನ್ನೇ ಬುಡಮೇಲಾಗಿಸಿದ, ಚೀನೀ-ಅಮೆರಿಕೀ ಭೌತವೈಜ್ಞಾನಿಕೆ ಚೆನ್-ಷುಂಗ್‌ವು(1912-1997) ಮತ್ತು ನೊಬೆಲ್-ಭೂತ ಪಲ್ಸಾರ್ ಅನ್ವೇಷಣೆಯಲ್ಲಿ ಮೇಲ್ವಿಚಾರಕ ಆ್ಯಂಟನಿ ಹ್ಯೂಯಿಷ್ ಅವರ ಸಹಭಾಗಿ, ಬ್ರಿಟಿಷ್ ರೇಡಿಯೋ ಭೌತಶಾಸ್ತ್ರಸಂಪನ್ನೆ ಜಾಸಲಿನ್ ಬರ್ನೆಲ್(1943).

ಬಹುಪ್ರತಿಷ್ಠ ನ್ಯೂ ಸಯನ್ಟಿಸ್ಟ್ ವಾರಪತ್ರಿಕೆಯು 2009ರಲ್ಲಿ ಮೇರಿ ಕ್ಯೂರಿ ಅವರನ್ನು ಚರಿತ್ರೆಯ ಅತ್ಯಂತ ಪ್ರೇರಣಾತ್ಮಕ ಮಹಿಳಾ ವಿಜ್ಞಾನಿ ಎಂದು ಘೋಷಿಸಿದಾಗ (ನ್ಯಾಯವಾಗಿ, ಮಹಿಳಾ ಎಂಬ ಲಿಂಗಸೂಚಿ ಪೂರ್ವಪ್ರತ್ಯಯವಿಲ್ಲದೆ, ನಿರ್ವಿಶೇಷವಾಗಿ, ಚರಿತ್ರೆಯ ಅತ್ಯಂತ ಪ್ರೇರಣಾತ್ಮಕ ವಿಜ್ಞಾನಿ ಎಂದೇ ಈ ವಿಜ್ಞಾನಯೋಗಿಯನ್ನು ಕೀರ್ತಿಸಬೇಕಿತ್ತು) ಅದರ ಮೊದಲ ಹತ್ತು ಪಟ್ಟಿಯಲ್ಲಿ, ಪೂರ್ವೋಕ್ತ ವ್ಯಕ್ತಿಗಳ ಜೊತೆಗೆ ಇನ್ನೂ ಹಲವು ವಿಜ್ಞಾನಘನರು ಸೇರಿದ್ದರು: ಆ್ಯಲೆಕ್ಸ್ಯಾಂಡ್ರಿಯದ ಹೈಪೇಶಾ (ಗಣಿತ ಕೋವಿದೆ), ಏಯ್ಡಾ ಕಿಂಗ್ (ಪ್ರಪಂಚದ ಜ್ಯೇಷ್ಠ ಮಹಿಳಾ ಪ್ರೋಗ್ರಾ್ಯಮರ್ ಮತ್ತು ಬ್ಯಾಬೇಜ್‌ನ 'ಆ್ಯನಲಿಟಿಕಲ್ ಎಂಜಿನ್' ಕಾರ್ಯದಲ್ಲಿ ಪ್ರಧಾನ ಪಾತ್ರಧಾರಿಯಾದ ಬ್ರಿಟಿಷ್ ಗಣಿತ ಪರಿಣತೆ), ಮೇರಿ-ಸೋಫೀ ಜರ್ಮೇನ್ ('ಸ್ಥಿತಿಸ್ಥಾಪಕ ಸಿದ್ಧಾಂತ' ಖ್ಯಾತಿಯ ಫ್ರೆಂಚ್ ಗಣಿತಜ್ಞೆ), ರೇಚಲ್ ಕಾರ್ಸನ್ (ಡಿ.ಡಿ.ಟಿ. ಮತ್ತಿತರ ಆತಂಕಕಾರಿ ಕೀಟಾಣುನಾಶಕಗಳ ನಿಷೇಧಕ್ಕೆ ಕಾರಣವಾದ ಸೈಲೆಂಟ್ ಸ್ಪ್ರಿಂಗ್ ಎಂಬ ಶಂಖನಾದಕರ ಪುಸ್ತಕವನ್ನು ವಿರಚಿಸಿದ ಅಮೆರಿಕೀ ಸಾಗರಿಕ ಜೀವವಿಜ್ಞಾನಿ) ಮತ್ತು ಜೇನ್ ಗುಡಾಲ್ ('ಚಿಂಪಾಂಜಿಮಾನವ'ನೊಡನೆ ಸಂಭಾಷಿಸುವ ಈ ಪ್ರಾಣಿವರ್ತನ ವೈಜ್ಞಾನಿಕೆಯ ಬಗ್ಗೆ ಕೇಳದವರೂ ಉಂಟೇ) ಈ ಪಟ್ಟಿಯ ಮೇಲೆ ಕಣ್ಣುರುಳಿಸುವಾಗ, ಇನ್ನೂ ಹಲವು ಚರಿತ್ರಾರ್ಹ ವಿಜ್ಞಾನ ವಿಶಾರದೆಯರು ನಮ್ಮ ಸ್ಮೃತಿಪಟಲವನ್ನು ಥಟ್ಟನೆ ತಟ್ಟುತ್ತಾರೆ: ಸಾಪೇಕ್ಷ ಸಿದ್ಧಾಂತ ಮತ್ತು ಅಮೂರ್ತ ಬೀಜಗಣಿತದ ಬೆಳವಣಿಗೆಗೆ ಪ್ರಾಣಾಧಾರ ಪೋಷಕಾಂಶಗಳನ್ನಿತ್ತ ಅತ್ಯುತ್ಕೃಷ್ಟ ಗಣಿತ ಪಂಡಿತೆ ಎಮಿ ನಟರ್ (1882-1935); ಪರ್ನಿಷಸ್ ಅನೀಮಿಯಾ ಚಿಕಿತ್ಸೆ ಕುರಿತ ಪರಿಶೋಧನೆಯಲ್ಲಿ ಪಾಲ್ಗೊಂಡಿದ್ದೂ, ಅದರ ನೊಬೆಲ್ ವೈಭವದಲ್ಲಿ ಮಾತ್ರ ಸಹಾಧ್ಯಾಯಿ ಜಾರ್ಜ್ ವಿಪ್ಲ್‌ರೊಡನೆ ಪಾಲ್ಗೊಳ್ಳಲಾಗದೇ ಹೋಗಬೇಕಾದ ರೋಗಲಕ್ಷಣ ವಿಜ್ಞಾನವಿಂದೆ ಫ್ರೀಡ ರಾಬ್‌ಶೆಲ್ಪ್-ರಾಬಿನ್ಸ್ (1893-1973); ಮೇರಿ ಕ್ಯೂರಿಯ ನಿಕಟ ಸಹವರ್ತಿಯಾಗಿ, ರಾಸಾಯನಿಕ ವಿಕಿರಣಪಟುತ್ವ ಕ್ಷೇತ್ರದಲ್ಲಿ ಮುಂದಾಳುವೂ, ಮತ್ತು ವೈಜ್ಞಾನಿಕ-ಶೈಕ್ಷಣಿಕ ಕ್ಷೇತ್ರಗಳಲ್ಲಿ ಸ್ತ್ರೀಅಧಿಕಾರದ ನಿಷ್ಠುರವಾದಿನಿಯೂ ಆಗಿದ್ದ ಎಲನ್ ಗ್ಲೆಡಿಟ್ಷ್ (1879-1968); ಮತ್ತು ರಾಯಲ್ ಸೊಸೈಟಿಯ ಪ್ರಥಮ ಮಹಿಳಾ ಫೆಲೋ, 'ಬ್ರಿಟಿಷ್ ಅಸೋಸಿಯೇಷನ್ ಫಾರ್ ದ ಅಡ್ವಾನ್ಸ್‌ಮೆಂಟ್ ಆಫ್ ಸಯನ್ಸ್' ಸಂಸ್ಥೆಯ ಪ್ರಪ್ರಥಮ ಅಧ್ಯಕ್ಷೆ, ಮೊದಲಾದ 'ಪ್ರಥಮ'ಗಳ ಮಾಲೆಯಿಂದ, ಜೊತೆಗೆ ಬಹುಮೂಲ್ಯ 'ಡೇವಿ ಪದಕ'ದಿಂದ ಅಲಂಕೃತಳಾಗಿದ್ದ ಸ್ಫಟಿಕ ವಿಜ್ಞಾನೋತ್ತಮೆ ಕ್ಯಾಥ್ಲೀನ್ ಲಾನ್ಸ್‌ಡೇಲ್ (1903-1971). ಸ್ತ್ರೀ-ಪ್ರತಿರೋಧಿ ಹೃದಯಕಾರ್ಪಣ್ಯವು ತುಚ್ಛ ಮಟ್ಟದಲ್ಲಿ ಮುಂದುವರೆದ ರಾಷ್ಟ್ರಗಳಲ್ಲೂ ಬೇರೂರಿತ್ತು, ಹಾಗೂ ಮಹಾನ್ ಪುರುಷ ವಿಜ್ಞಾನಿಗಳೂ ಈ ಅಲ್ಪತೆಯಿಂದ ಹೊರತಾಗಿರಲಿಲ್ಲ ಎಂಬುದನ್ನು ಈ ದಿನಗಳಲ್ಲಿ ಒಪ್ಪಿಕೊಳ್ಳುವುದು ಸುಲಭವಾಗದು. ಆದರೆ, ನೊಬೆಲ್ ಪ್ರಶಸ್ತಿ ಪ್ರದಾನದ ಉಚ್ಚಮಟ್ಟದಲ್ಲಿರಲಿ, ಇತ್ತೀಚಿನವರೆಗೂ ಪ್ರಾಥಮಿಕ ಶಾಲಾ ಮಟ್ಟದಲ್ಲೇ, ಬಾಲಕಿಯರಲ್ಲಿರುವ ವಿಜ್ಞಾನಚೇತನವನ್ನು ಆನಂದಿಸುವ ಬದಲು, ಕೂಡಲೆ ನಂದಿಸಲಾಗುತ್ತಿತ್ತು ಎಂಬುದೊಂದು ಕಟುಸತ್ಯ ಸಂಗತಿ.

ಶ್ರೀಮತಿಯರು ವಿಜ್ಞಾನಮತಿಯರಾದ ಮಾತ್ರಕ್ಕೇ, ಎಲ್ಲಿ 'ವಿಪರೀತಮತಿ'ಗಳೂ ಆಗಿಹೋದಾರೋ ಎಂಬ ಸಂದೇಹಮತಿಯು ಅಂದು ಪುರುಷಪರಿಣತಮತಿಗಳನ್ನಾವರಿಸಿತ್ತು. ಆದರೆ, ಸಮಾಧಾನವೆಂದರೆ, ನಾವೀಗ ಆ ಅಂಧಕಾಲದಿಂದ ದೂರದೂರ ಸಾಗಿಹೋಗುತ್ತಿದ್ದೇವೆ. ಇಂದು ವಿಜ್ಞಾನ ದಿಗಂತದಲ್ಲಿ ಮಹಿಳೆಯರು ಒಂದು ವಿಶಿಷ್ಟ, ವ್ಯಾಪಕ ಶಕ್ತಿಯಾಗಿ ಹೊರಹೊಮ್ಮಿದ್ದಾರೆ; ವೈಜ್ಞಾನಿಕಬೌದ್ಧಿಕತೆ-ಸೃಜನಶೀಲತೆಗಳ ಮುಂಚೂಣಿಯಲ್ಲೇ ನಿಂತು ಮಿಂಚುತ್ತಿದ್ದಾರೆ. 2009ರ ನೊಬೆಲ್ ಶಿಖರಾಗ್ರವನ್ನು ಮೆಟ್ಟಿ ಮೆರೆದ ಮೂವರು ವಿಜ್ಞಾನಧೀರೆಯರಿಗಿಂತಲೂ ಉತ್ತಮ ನಿದರ್ಶನ ಇದಕ್ಕೆ ಬೇಕಿಲ್ಲ: ರೈಬಸೋಮ್‌ನ ಆಕೃತಿ ಮತ್ತು ಪ್ರಕೃತಿಗಳನ್ನು ಕುರಿತ ತನಿಖೆಗಾಗಿ ಥಾಮಸ್ ಸ್ಟೈಟ್ಜ್ ಮತ್ತು ಭಾರತದ ವೆಂಕಟ್ರಾಮನ್-ರಾಮಕೃಷ್ಣನ್ ಅವರೊಡನೆ ರಸಾಯನ ವಿಜ್ಞಾನ ಪಾರಿತೋಷಕವನ್ನು ಹಂಚಿಕೊಂಡ ಇಸ್ರೇಲಿ ಏಯ್ಡಾ ಜೋನ್ಯಾಟ್ ಹಾಗೂ ಟೆಲಮೀರ್ ಮತ್ತು ಟೆಲಾಮರೇಸ್‌ಗಳ ಮೂಲಕ ಕ್ರೋಮಸೋಮ್ ಸಂರಕ್ಷಣೆ ವಿಷಯದ ಸಂಶೋಧನೆಗಾಗಿ ಜ್ಯಾಕ್ ಜಾಸ್ಟ್ಯಾಕ್ ಅವರೊಡನೆ ವೈದ್ಯಶಾಸ್ತ್ರೀಯ ಪಾರಿತೋಷಕವನ್ನು ಹಂಚಿಕೊಂಡ ಅಮೆರಿಕೀ ಜೋಡಿ ಇಲಿಜಬತ್ ಬ್ಲ್ಯಾಕ್‌ಬರ್ನ್-ಕ್ಯಾರಲಿನ್ ಗ್ರೈಡರ್. ತಮ್ಮ ಹಾದಿಯಲ್ಲಿ ಒಡ್ಡಿದ್ದ ಪೆಡಂಭೂತ ತೊಡರು-ತೊಂದರೆಗಳನ್ನೂ, 'ಅಸಮಭಾಜಕವೃತ್ತ'ದ ಸರಹದ್ದು-ಸವಾಲುಗಳನ್ನೂ ಒದ್ದೆದ್ದು, ತಮ್ಮ ಉಜ್ವಲ ಆದರ್ಶ, ಅಲೌಕಿಕ ಧೀಶಕ್ತಿ, ತಪಸ್ಸಿನಂಥ ತನ್ಮಯತೆ, ಮತ್ತು ಸೃಷ್ಟ್ಯಾತ್ಮಕ-ಸಾಹಸಶೀಲ ಕೃಷಿಯಿಂದ, ಜ್ಞಾನವಿಕಾಸಕ್ಕೂ, ಸಮಾಜೋನ್ನತಿಗೂ ಚಿರಸ್ಥಾಯಿ ಕಾಣಿಕೆಗಳನ್ನಿತ್ತು ನಿರ್ಗಮಿಸಿದ ನಿನ್ನೆಯ ವಿಜ್ಞಾನದಿಗ್ಗಜೆಯರ ಜೀವನ-ಸಾಧನೆಗಳಿಂದ ಇಂದು ನಾವೆಲ್ಲರೂ ಸ್ಫೂರ್ತಿಯನ್ನು ಸೆಳೆಯುವುದು ಅರ್ಥಪೂರ್ಣವೂ, ಅತ್ಯವಶ್ಯವೂ ಆಗಿದೆ. ಅವರ ಸಂಕೀರ್ಣ ವಿದ್ವಚ್ಛಕ್ತಿಯು ನಮ್ಮ ಅಧ್ಯಯನ-ಸಂಶೋಧನಗಳ ದಿಕ್ಕನ್ನು ಅತಿತಂತ್ರಜ್ಞಾನದಿಂದ ಶುದ್ಧ ವಿಜ್ಞಾನಮಾರ್ಗದೆಡೆಗೂ, ನಮ್ಮ ಮನೋಧರ್ಮವನ್ನು ಪಕ್ಷಪಾತಿತ್ವದಿಂದ ಗುಣಗ್ರಾಹಿತ್ವದೆಡೆಗೂ, ನಮ್ಮ ಅಂತಃಸತ್ತ್ವವನ್ನು ಅಜ್ಞಾನ-ತಮಸ್ಸಿನಿಂದ ವಿಜ್ಞಾನ-ಜ್ಯೋತಿಯೆಡೆಗೂ ಪರಿವರ್ತಿಸಬಲ್ಲದು ಎಂಬುದರಲ್ಲಿ ಅನುಮಾನವಿಲ್ಲ. ❑

ಚೆಂಬಲಿಗರೇ,

ಈ ಸಂಚಿಕೆಯನ್ನು ಹೊರತರುವಲ್ಲಿ ನಮ್ಮೊಟ್ಟಿಗೆ ಕೈಜೋಡಿಸಿರುವ ಬಿ.ಎಲ್. ಪುಷ್ಪ, ಸುಶೀಲ ಸೋಮಶೇಖರ್, ಹೇಮಲತ ಎಚ್.ಎಂ. ಮಾನಸ ಬಳಗದವರಿಗೆ ಹಾಗೂ ಲೇಖನ, ಪತ್ರಗಳ ಮೂಲಕವೂ ನಮ್ಮ ಉತ್ಸಾಹವನ್ನು ಇಂಗದಂತೆ ನೋಡಿಕೊಳ್ಳುತ್ತಿರುವ ನಿಮ್ಮೆಲ್ಲರಿಗೂ ನಾವು ಸದಾ ಋಣಿ.

ನಮ್ಮ ಮಾನಸಕ್ಕೆ ಲೇಖನ, ವಿಮರ್ಶೆ, ಕವನಗಳನ್ನು ಇ-ಮೇಲ್ ಮೂಲಕ ಕಳುಹಿಸುವವರು ನುಡಿ ಅಥವ ಬರಹ ಲಿಪಿಯಲ್ಲಿ ಕಳುಹಿಸಿ.

ಪತ್ರಿಕೆಗೊಂದು ಪತ್ರ

ನಮ್ಮ ಮಾನಸದಲ್ಲಿ ಹೊಸ ಬರಹಗಾರ್ತಿಯವರ ಬರಹಗಳು ಸ್ವಾಗತಾರ್ಹ. ಗೀತ ಶೆಣೈಯವರ ವಾರಿಸ್ ಡೇರಿನ್ ಲೇಖನವಂತೂ ಬಹಳ ಸೊಗಸಾಗಿ ಮೂಡಿಬಂದಿದೆ.

–ಸೌಮ್ಯ ವೈ.

✦ ✦

ಬಾಲಕಾರ್ಮಿಕರ ಬಗ್ಗೆ 'ನಮ್ಮ ಮಾನಸ' ಪತ್ರಿಕೆಯಲ್ಲಿ ಪ್ರಕಟವಾಗಿದ್ದ 'ಕನಸಿನ ಮಕ್ಕಳ ಕತ್ತಲ ಲೋಕ' ಎಂಬ ಲೇಖನ ಚಿಕ್ಕದಾಗಿದ್ದರೂ ಚೊಕ್ಕವಾಗಿತ್ತು. ಭಾಷೆಯ ಬಳಕೆ ಬಹಳ ಸೊಗಸಾಗಿದ್ದು ಲೇಖನ ಮಾಹಿತಿದಾಯಕವಾಗಿತ್ತು.

–ನಿವೇದಿತ ಎಸ್.

✦ ✦

ಕಳೆದೆರಡು ತಿಂಗಳಿನಿಂದ ಮಾನಸ ಪತ್ರಿಕೆಯನ್ನು ಓದುತ್ತಿದ್ದೇನೆ, ಬಹಳ ವಿಭಿನ್ನವಾದ ಪತ್ರಿಕೆಯೆಂದೆನಿಸಿತು. ಇಲ್ಲಿ ಪ್ರಕಟವಾಗುತ್ತಿರುವ ಲೇಖನಗಳು ಮಹಿಳೆಯ ವಿವಿಧ ಸಮಸ್ಯೆಗಳನ್ನು ನನಗೆ ತಿಳಿಸಿಕೊಡುತ್ತಿದೆ. 'ನಮ್ಮ ಮಾನಸ' ಪತ್ರಿಕೆ ಎಲ್ಲರಿಗೂ ತಲುಪಬೇಕೆಂಬುದು ನನ್ನ ಆಶಯ.

–ಬಾಲು, ಬೆಂಗಳೂರು

✦ ✦

ಮೇ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಲೇಖನಗಳು ಚೆನ್ನಾಗಿದ್ದವು. 'ವಾರಿಸ್ ಡೇರಿ' ಎಂಬ ಆಫ್ರೀಕಾದ ಹೆಣ್ಣು ಮಗಳ ಮೇಲೆ ನಡೆದ ಸನ್ನತಿಯ ಬಗ್ಗೆ ಕನ್ನಡಕ್ಕೆ ಅನುವಾದವಾಗಿದ್ದ ಲೇಖನವಂತು ಅದ್ಭುತವಾಗಿತ್ತು.

–ಲಲಿತ ಎಸ್.

'ನಮ್ಮ ಮಾನಸ' ಓದುಗರಲ್ಲಿ ವಿನಂತಿ

ನಮ್ಮ ಮಾನಸ ಪತ್ರಿಕೆಯನ್ನು ಓದಿ ನಿಮ್ಮ ಅನಿಸಿಕೆಗಳನ್ನು ಇ-ಮೇಲ್ ಅಥವ ನಮ್ಮ ಮಾನಸ ವಿಳಾಸಕ್ಕೆ ಕಳುಹಿಸಿ.

ಇ-ಮೇಲ್ ಐಡಿ: nammamanasa@gmail.com

ನಮ್ಮ ಮಾನಸ ವಿಳಾಸ:

'ನಮ್ಮ ಮಾನಸ'

114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ,
ಬೆಂಗಳೂರು – 560 018

ನಮ್ಮ ಮಾನಸದಲ್ಲಿ ಮೂಡಿಬಂದ 'ವಾರಿಸ್ ಡೇರಿಯ ಅಂತರಂಗದ ಪುಟಗಳಿಂದ' ಎಂಬ ಲೇಖನ ಮಿಕ್ಕೆಲ್ಲ ಲೇಖನಗಳಿಗಿಂತ ಭಿನ್ನವಾಗಿತ್ತು. ಆಕೆಯ ನೋವನ್ನು ಸೂಕ್ಷ್ಮವಾಗಿ ಕನ್ನಡಕ್ಕೆ ಅನುವಾದವಾಗಿರುವುದು ನನಗೆ ಸಂತಸ ತಂದಿತು. ಇಂತಹ ಲೇಖನಗಳು ನಮ್ಮ ಮಾನಸದಲ್ಲಿ ಪ್ರಕಟವಾಗಲಿ ಎಂದು ಆಶಿಸುತ್ತೇನೆ.

–ಸಂಧ್ಯ
ಬೆಂಗಳೂರು

✦ ✦

'I myself have never been able to find out precisely what feminism is: I only know that people call me a feminist whenever I express sentiments that differentiate me from a doormat...'

-Rebecca West

ಚಂದಾದಾರರಲ್ಲಿ ಮನವಿ

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಕೂಡಲೇ ನವೀಕರಿಸಿ. ಚಂದಾ ಅವಧಿ ಮುಗಿಯುವ 2–3 ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ದಯವಿಟ್ಟು ಕೂಡಲೇ ಚಂದಾ ನವೀಕರಿಸಬೇಕೆಂದು ವಿನಂತಿಸುತ್ತೇವೆ.

–ಸಂಪಾದಕ ಮಂಡಳಿ

ನಿಮ್ಮ ಸ್ನೇಹಿತರನ್ನೂ ಚಂದಾದಾರರನ್ನಾಗಿಸಿ

ಡೆಂಗಿ ಜ್ವರ ತಡೆಗಟ್ಟುವ ಬಗ್ಗೆ ಮುಂಜಾಗ್ರತೆ ಕ್ರಮಗಳು

ಡೆಂಗಿ ಜ್ವರ ಎಂದರೇನು?

ಡೆಂಗಿ ಜ್ವರವು ವೈರಸ್‌ನಿಂದ ಉಂಟಾಗುವ ಕಾಯಿಲೆ. ಈ ಕಾಯಿಲೆಯ ಸೋಂಕು ಹೊಂದಿದ ಈಡಿಸ್ ಈಜಿಪ್ಟೈ ಎಂಬ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಗೆ ಹರಡುತ್ತದೆ.

ಈ ರೋಗದ ಮುಖ್ಯ ಲಕ್ಷಣಗಳು

ಇದ್ದಕ್ಕಿದಂತೆ ತೀವ್ರಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು ಈ ರೋಗದ ಲಕ್ಷಣ. ಹಲವು ಬಾರಿ ಮೂಗು, ಬಾಯಿ ಮತ್ತು ವಸಡುಗಳಲ್ಲಿ ರಕ್ತಸ್ರಾವದ ಚಿಹ್ನೆಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಹತ್ತಿರದ ಸರ್ಕಾರಿ ಆಸ್ಪತ್ರಗೆ ದಾಖಲಿಸಿ, ರಕ್ತಪರೀಕ್ಷೆ ಮಾಡಿಸಿ, ಸೂಕ್ತ ಚಿಕಿತ್ಸೆ ಪಡೆಯುವುದು.

ಸಾರ್ವಜನಿಕರು ಡೆಂಗಿ ರೋಗವನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು:

1) ಡೆಂಗಿ ಹರಡುವ ಈಜಿಪ್ಟ್ ಸೊಳ್ಳೆಗಳು ಮನೆಯಲ್ಲಿನ ನೀರು ಶೇಖರಿಸುವ ಸಿಮೆಂಟ್ ತೊಟ್ಟಿಗಳು, ಬ್ಯಾರೆಲ್‌ಗಳು, ಏರ್‌ಕೂಲರ್, ಹೂಕುಂಡದ ನೀರಿನ ಸಂಗ್ರಹಗಳು, ಇತ್ಯಾದಿಗಳಲ್ಲಿ ಉತ್ಪತ್ತಿ ಯಾಗುವುದರಿಂದ ಇವುಗಳನ್ನು ವಾರಕ್ಕೊಮ್ಮೆ ಸಂಪೂರ್ಣವಾಗಿ ಶುಚಿಗೊಳಿಸಿ, ಯಾವಾಗಲೂ ಭದ್ರವಾದ ಮುಚ್ಚಳಿಕೆಯಿಂದ ಮುಚ್ಚಿ ಸೊಳ್ಳೆ ಉತ್ಪತ್ತಿಯಾಗದಂತೆ ಎಚ್ಚರವಹಿಸಿ.

2) ಬಯಲಲ್ಲಿ ಪೈರು, ಎಳನೀರಿನ ಚಿಪ್ಪು ಮತ್ತು ತ್ಯಾಜ್ಯ ವಸ್ತುಗಳಲ್ಲಿ ನೀರು ಸಂಗ್ರಹವಾಗದಂತೆ ಸೂಕ್ತ ವಿಲೇವಾರಿ ಮಾಡುವುದು ಅಥವಾ ನಾಶಗೊಳಿಸುವುದು.

3) ಈ ರೋಗ ಹರಡುವ ಸೊಳ್ಳೆಗಳು ಹಗಲಲ್ಲಿ ಕಚ್ಚುವುದರಿಂದ ಸೊಳ್ಳೆ ಕಡಿತದಿಂದ ಪಾರಾಗಲು ಮಕ್ಕಳು, ವಿಶ್ರಾಂತಿ ಪಡೆಯುವ ವಯೋವೃದ್ಧರು, ಕಾಯಿಲೆಯಿಂದ ನರಳುವವರು ತಪ್ಪದೇ ಸೊಳ್ಳೆಪರದೆಯನ್ನು ಉಪಯೋಗಿಸುವುದು ಹಾಗೂ ಇತರ ಸೊಳ್ಳೆ ನಿರೋಧಕಗಳನ್ನು ಬಳಸುವುದು. ಹೀಗೆ ಮಾಡುವುದರಿಂದ ಈ ರೋಗವನ್ನು ತಡೆಗಟ್ಟುವುದು ಸುಲಭ.

ನಿಮ್ಮ ಮನೆಯ ಒಳಗೆ ಹಾಗೂ ಮನೆಯ ಸುತ್ತಮುತ್ತ
ಸೊಳ್ಳೆ ಉತ್ಪತ್ತಿಯನ್ನು ತಡೆಗಟ್ಟಿ ಡೆಂಗಿ ಜ್ವರ ನಿಯಂತ್ರಿಸಿ

Registered with Registrar of Newspapers of India under No. KARKAN/2007/22289
'NAMMA MANASA', REGD.No.: MAG(3) NPP/399(A)/2006-07 **Reg.KA/BGS/2074/2010-12**

ರಾಮಕ್ಕನ ಕನವರಿಕೆ

ರಾಮಕ್ಕನ ಹಸುಗಳು ಕಾಣೆಯಂತೆ ಗುಲ್ಲೋಗುಲ್ಲು
ಬಡಾವಣೆಯ ಮಂದಿಗೆಲ್ಲ ಆತಂಕ
ಹಲವರ ಮನೆಗೆ ಬೆಳಗಿನ ಕಾಮಧೇನು
ಮಕ್ಕಳ ಬಾಯಿತುಂಬ ಅಮೃತ
ಪಾತ್ರೆ ಸದ್ದಿಗೆ ಕಾಫಿಗೆ ನೀರು
[illegible]ನೆಯಲ್ಲಿ ತುಪ್ಪದ ಘಮಘಮ

[illegible]ಲಿನ [illegible] ಜಗಲಿಗೆ ಸೀಮಿತ
ಅಮೃತಕ್ಕ[illegible] ಮೈಲಿಗೆಯ ಗೋಜು
ಹೊಸಮನೆಗೆ ರಾಮಕ್ಕನ ಸೀತೆ
ಮೈಲಿಗೆ ಕಳೆಯಲು ಕಾಳಿಂದಿಯ ಮೂತ್ರ
ಹೋಮಕ್ಕೆ ಕೌಲಿಯ ತುಪ್ಪ
ಎಲ್ಲರ ಬಾಯಲ್ಲೂ ಅಯ್ಯೋ ಪಾಪ! ಪರಿತಾಪ

ರಾಮಕ್ಕನ ಹಿತ್ತಿಲಲ್ಲೀಗ ಕಹಿಬದನೆ
ರಾಗಿ ಹೊಲವೆಲ್ಲ ವಾಣಿಜ್ಯ ಮಳಿಗೆ
ಫೋನು ಕಂಪ್ಯೂಟರ್ ಕಾರು-ಬಾರು
ನಂದಿನಿ ಕೇಂದ್ರ ಸರತಿಸಾಲು
ರಾಮಕ್ಕನಿಗೆ ಶಿವರಾತ್ರಿ ಜಾಗರಣೆ
ವಾರಕ್ಕೊಮ್ಮೆ ಏಕಾದಶಿ ಆಚರಣೆ
ಎಂಜಲ ಪಾತ್ರೆ, ಕಸಮುಸುರೆ, ಕತ್ತೆ ದುಡಿತ
ಮುಗಿಲತ್ತ ನೋಟ ರಾಗಿಯ ಕನವರಿಕೆ
ಹಗಲಲ್ಲೂ ಹಸುವಿನದೇ ಕನಸು

■ ಡಾ. ಚಂದ್ರಮತಿ ಸೋಂದಾ



Registered Magazine

Posted on 9th of every month at MBC, Bangalore GPO
Total No. of Pages: 24

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ
ಚಾಮರಾಜಪೇಟೆ
ಬೆಂಗಳೂರು - 560 018